# ಕರ್ನಾಟಕ ವಿಕಾಸ

ನವೆಂಬರ್ 2011

**ಕನ್ನಡ ರಾಜ್ಯೋತ್ಸವ ಶುಭಾಶಯಗಳು**



ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ
ನಮ್ಮೆಲ್ಲರ ಸಮನ್ವಯದ ನಡಿಗೆ





# ಗ್ರಾಮ ಪಂಚಾಯತಿ ಅಧ್ಯಕ್ಷರ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಮ್ಮೇಳನ




ಸಮ್ಮೇಳನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಡಾ. ಅಮಿತಾ ಪ್ರಸಾದ್ ಹಾಗೂ
ಸರ್ಕಾರದ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಹಾಗೂ ಗಣ್ಯರು



# ಕರ್ನಾಟಕ ವಿಕಾಸ


**ನವೆಂಬರ್ 2011**

ಸಂಪುಟ : 52 ಸಂಚಿಕೆ : 12


## ಈ ಸಂಚಿಕೆಯಲ್ಲಿ


5 ಸಚಿವರ ಆಶಯ – ಜಗದೀಶ ಶೆಟ್ಟರ

9 ಸಚಿವಾಲಯದಿಂದ ಸಂದೇಶ – ಡಾ. ಅಮಿತಾ ಪ್ರಸಾದ್

13 ಮುಖಪುಟ ವರದಿ

15 ಕಾವ್ಯ ವಿಕಾಸ – ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪ
– ರಾಷ್ಟ್ರಕವಿ ಕುವೆಂಪು

16 ಲೇಖನಗಳು – ಡಾ. ಶಾಲಿನಿ ರಜನೀಶ್
– ಪಿ. ಶಿವಶಂಕರ್
– ಶಿವಯೋಗಿ. ಚ. ಕಳಸದ
– ಡಾ. ಕೆ.ಎನ್. ವಿಜಯ ಪ್ರಕಾಶ್
– ಡಾ. ಸಿದ್ಧರಾಮಯ್ಯ
– ಟಿ.ಎಂ. ಶಶಿಧರ್
– ಎಂ.ಓ. ನಾಗರಾಜ್

32 ಸುತ್ತೋಲೆಗಳು






ಪ್ರಕಾಶಕರು

**ಪಿ. ಕುಮಾರ್**

ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು

**ಬಿ.ಸಿ. ಜಯಪಾಲ ರೆಡ್ಡಿ**

ಮುಖ್ಯ ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿಗಳು

**ಬೂವನಹಳ್ಳಿ ನಾಗರಾಜ್**

ಸಹಾಯಕ ಸಂಪಾದಕರು

**ಡಾ॥ ಎಂ.ಎಸ್. ಮಂಜುನಾಥ**


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

**ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.**


**ವಾರ್ಷಿಕ ಚಂದಾ :**

ವ್ಯಕ್ತಿಗಳಿಗೆ ರೂ. 50/–

ಸಂಸ್ಥೆಗಳಿಗೆ ರೂ. 60/–

ಬಿಡಿ ಪ್ರತಿ ರೂ. 5/–

ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**

ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
email:karnatakavikasa@ymail.com




## ಪತ್ರಿಕೆ ಕುರಿತು ನಿಮ್ಮನುಡಿ

ಮಾನ್ಯರೇ,

ಅಕ್ಟೋಬರ್ – 2011ರ ಸಂಚಿಕೆ ಸುಂದರ ಮುದ್ರಣದೊಂದಿಗೆ ತುಂಬಾ ಸೊಗಸಾಗಿ ಮೂಡಿ ಬಂದಿದೆ. ಮುಖ ಪುಟ ತುಂಬಾ ಆಕರ್ಷಕವಾಗಿ ಮೂಡಿ ಬಂದಿದೆ. ಡಾ॥ ಅಮಿತಾ ಪ್ರಸಾದ್‌ರವರ ಸಂದೇಶ, ಡಾ॥ ಶಾಲಿನಿ ರಜನೀಶ್‌ರವರ ಪರಿಚಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಇವರು ಸ್ಫೂರ್ತಿ ತುಂಬುವಲ್ಲಿ ಸಂದೇಹವಿಲ್ಲ. ಸಂವಾದದ ಆಯ್ದಭಾಗ ಹಾಗೂ ಪ್ರಗತಿಯತ್ತ ಹೆಜ್ಜೆಗಳು, ಗ್ರಾಮಸ್ವರಾಜ್ ಅನುಷ್ಠಾನ ಪೂರಕ ವಿಶ್ವ ಬ್ಯಾಂಕಿನ 8ನೇ ನಿಯೋಗದ ರಾಜ್ಯ ಭೇಟಿ – ಆಗಸ್ಟ್ – 2011ರ ಮುಂತಾದ ಲೇಖನಗಳು ಮುದ ನೀಡಿವೆ. ಕರ್ನಾಟಕ ವಿಕಾಸ ಪತ್ರಿಕೆ ಗ್ರಾಮೀಣ ಜನರ ಬದುಕು ಹಸನುಗೊಳಿಸುವಲ್ಲಿ ಮಹತ್ತರ ಹೆಜ್ಜೆಯಿಡಲಿದೆ.

– **ವಿ.ಕೆ. ಲೋಕೇಶ್ವರಪ್ಪ,** ನಿವೃತ್ತ ತಾಲ್ಲೂಕು ಶಿರಸ್ತೇದಾರ, ಮ.ನಂ. 112/1, ಜ್ಯೋತಿ ನಿವಾಸ, ಜೆ.ಸಿ.ಆರ್. ಬಡಾವಣೆ ಹೊಸದುರ್ಗ – 577527

ಅಕ್ಟೋಬರ್ 2011ರ ಸಂಚಿಕೆಯ ಮುಖಪುಟ ಅತ್ಯಂತ ಆಕರ್ಷಕವಾಗಿ ಮೂಡಿಬಂದಿದ್ದು ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಮಹಿಳಾ ಸಬಲೀಕರಣಕ್ಕಾಗಿ, ಸರ್ಕಾರ ವಿಶ್ವಸಂಸ್ಥೆಯ ಮಹಿಳಾ ಘಟಕದೊಂದಿಗೆ ಒಪ್ಪಂದ ಮಾಡಿಕೊಂಡಿರುವುದು ನಿಜಕ್ಕೂ ಶ್ಲಾಘನೀಯ ಕ್ರಮವಾಗಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಶೇ. 50 ರಷ್ಟು ಮಹಿಳಾ ಮೀಸಲಾತಿಯನ್ನು ಹೆಚ್ಚಿಸಿ ಮಹಿಳಾ ಸಬಲೀಕರಣಕ್ಕೆ ದಿಟ್ಟ ಹೆಜ್ಜೆಯನ್ನಿರಿಸಿದ್ದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಪೂರಕವಾಗಿ ಇಂತಹ ಒಪ್ಪಂದವನ್ನು ವಿಶ್ವಸಂಸ್ಥೆಯೊಂದಿಗೆ ಮಾಡಿಕೊಂಡಿರುವುದು ಮಹಿಳೆಯರು ರಾಜಕೀಯ ನಾಯಕತ್ವ ಮತ್ತು ಉತ್ತಮ ಆಡಳಿತ ನೀಡುವಲ್ಲಿ ಅತ್ಯಂತ ಸಹಕಾರಿಯಾಗಿರುತ್ತದೆ ಎಂದು ತೀರ್ಮಾನಿಸಬಹುದು. ಇದಕ್ಕೆ ಕಾರಣೀಭೂತರಾದ ಸಚಿವರು ಹಾಗೂ ಅಧಿಕಾರಿ ಸಿಬ್ಬಂದಿವರ್ಗದವ ರೆಲ್ಲರಿಗೂ ನನ್ನ ಅಭಿನಂದನೆಗಳು.

– **ಶೋಭಾ ಎಸ್. ಗೌಡ,** ನಂ. 68, 4ನೇ ಅಡ್ಡರಸ್ತೆ, ಶ್ರೀ ವಿನಾಯಕ ಬಡಾವಣೆ, ನಾಯಂಡನಹಳ್ಳಿ ಅಂಚೆ, ಬೆಂಗಳೂರು – 560039.

ಅಕ್ಟೋಬರ್ 2011ರ ಸಂಚಿಕೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 'ಗ್ರಾಮ ಸ್ವರಾಜ್' ಯೋಜನೆಯ ಬಗ್ಗೆ ಒಂದು ಉಪಯುಕ್ತ ಕೈಪಿಡಿಯಾಗಿ ಮಾರ್ಪಟ್ಟಿದೆ ಎಂದರೆ ತಪ್ಪಾಗಲಾರದು. ಯೋಜನೆಯ ಬಗ್ಗೆ ಮಾಹಿತಿಯನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಮುಕ್ತಾಯದ ಹಂತ ತಲುಪಿರುವ ಗ್ರಾಮ ಸ್ವರಾಜ್ ಯೋಜನೆಯು ಉಳಿದ ಸಮಯವನ್ನು ಸಮರ್ಪಕ ಅನುದಾನದ ಉಪಯೋಗದೊಂದಿಗೆ ಇನ್ನಷ್ಟು ಸಾರ್ವಜನಿಕ ಆಸ್ತಿಯನ್ನು ಸೃಷ್ಟಿಸುವಲ್ಲಿ ಸಹಕಾರಿಯಾಗಲೆಂದು ಆಶಿಸುತ್ತೇನೆ.

– **ನಿರಾಲಿ. ಪಿ,** ರಾಮನಗರ ರಸ್ತೆ, ಕನಕಪುರ, ರಾಮನಗರ ಜಿಲ್ಲೆ.

ಗಣ್ಯರಿಗೆ ಹೂವಿನ ಹಾರದ ಬದಲು ಪುಸ್ತಕ ಅಥವಾ ಸೌರದೀಪಗಳನ್ನು ನೀಡಿ ಗೌರವಿಸುವಂತೆ ಸುತ್ತೋಲೆಯನ್ನು ಹೊರಡಿಸಿ ಕ್ರಮ ಕೈಗೊಂಡಿರುವ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಕ್ರಮ ನಿಜಕ್ಕೂ ಶ್ಲಾಘನೀಯ.

– **ಬಸವರಾಜಮ್ಮ**

ನಂ. 25, ಮುನೇಶ್ವರ ಬ್ಲಾಕ್, ಬಸವನಗುಡಿ, ಬೆಂಗಳೂರು.

ಗ್ರಾಮ ಸ್ವರಾಜ್ ಯೋಜನೆಯಡಿ ಸಾಧಿಸಲಾಗಿರುವ ಹಲವಾರು ಅಭಿವೃದ್ಧಿ ಕಾಮಗಾರಿಗಳ ಚಿತ್ರಣ ಹಾಗೂ ಯಶೋಗಾಥೆಗಳನ್ನು ಒಳಗೊಂಡಂತೆ ಯೋಜನೆಯ ಬಗ್ಗೆ ಸಾರ್ವಜನಿಕರಿಗೆ ಅಕ್ಟೋಬರ್ 2011ರ ಸಂಚಿಕೆಯು ಮಾಹಿತಿಯನ್ನು ನೀಡಿದೆ. ಗ್ರಾಮ ಸಭೆಗಳನ್ನು ವಿಡಿಯೋ ಚಿತ್ರೀಕರಣ ಮಾಡಬೇಕೆಂಬ ಸುತ್ತೋಲೆ ಹೊರಡಿಸಿರುವುದರಿಂದ ಪಾರದರ್ಶಕ ಆಡಳಿತವನ್ನು ಗ್ರಾಮ ಪಂಚಾಯತ್ ಕಚೇರಿಗಳಲ್ಲಿ ನಿರೀಕ್ಷಿಸಬಹುದಾಗಿದ್ದು ಭ್ರಷ್ಟಾಚಾರ ತಡೆಗಟ್ಟುವಲ್ಲಿ ದಿಟ್ಟ ಹೆಜ್ಜೆಯಾಗಿದೆ. ಇಲಾಖೆಯು ಇಂತಹ ಜನಪರ ಯೋಜನೆಗಳನ್ನು ಮತ್ತಷ್ಟು ಹಮ್ಮಿಕೊಳ್ಳಲಿ.

– **ನವೀನ್ ರಾಜ್,** ಪಿ.ಬಿ. ರಸ್ತೆ. ದಾವಣಗೆರೆ.




# ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ನುಡಿಗಳು



**ಶ್ರೀ ಜಗದೀಶ ಶೆಟ್ಟರ**
**ಸನ್ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು**

ಕರ್ನಾಟಕದಲ್ಲಿ ಆಡಳಿತ ವಿಕೇಂದ್ರಿಕರಣದ ಪ್ರಯೋಗ 1959 ರಲ್ಲಿಯೇ ಪ್ರಾರಂಭವಾಗಿರುತ್ತದೆ. (ಮೈಸೂರು ವಿಲೇಜ್ ಪಂಚಾಯತ್ ಅಂಡ್ ಡಿಸ್ಟ್ರಿಕ್ಟ್ ಬೋರ್ಡ್ಸ್ ಆಕ್ಟ್) 1959. ಈ ಪ್ರಯೋಗದಲ್ಲಿ ಬಲವಂತರಾಯ್ ಮೆಹ್ತಾ ಸಮಿತಿಯ ವರದಿಯನ್ನು ಆಧರಿಸಿ ವಿಲೇಜ್ ಪಂಚಾಯತ್ಸ್, ತಾಲ್ಲೂಕು ಬೋರ್ಡ್ಸ್‌ಗಳನ್ನು ಅಸ್ತಿತ್ವಕ್ಕೆ ತಂದು ಆಡಳಿತ ವಿಕೇಂದ್ರಿಕರಣದಲ್ಲಿ ಪ್ರಪ್ರಥಮವಾಗಿ ಜನರ ಸಹಭಾಗಿತ್ವವನ್ನು ತೊಡಗಿಸಿಕೊಳ್ಳಲಾಯಿತು. ಈ ವ್ಯವಸ್ಥೆಯು 1983ರವರೆಗೆ ಮುಂದುವರೆದಿರುತ್ತದೆ.

ಆಡಳಿತ ವಿಕೇಂದ್ರಿಕರಣವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಷ್ಟ್ರಮಟ್ಟದಲ್ಲಿ ರಚಿಸಲಾಗಿರುವ ಅಶೋಕ ಮೆಹ್ತಾ ಸಮಿತಿಯು ತನ್ನ ವರದಿಯನ್ನು 1978 ರಲ್ಲಿ ನೀಡಿರುತ್ತದೆ. ಈ ಸಮಿತಿಯ ವರದಿಯನ್ನು ಆಧರಿಸಿ ಕರ್ನಾಟಕದಲ್ಲಿ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯತಿ ಸಮಿತಿ, ಮಂಡಲ ಪಂಚಾಯತಿ ಮತ್ತು ನ್ಯಾಯ ಪಂಚಾಯತಿ ಅಧಿನಿಯಮವನ್ನು 1983 ರಲ್ಲಿ ರೂಪಿಸಲಾಯಿತು ಹಾಗು 1987 ರಿಂದ ಜಾರಿಗೆ ತರಲಾಯಿತು. ಈ ಅಧಿನಿಯಮದನ್ವಯ ಮಂಡಲ ಪಂಚಾಯತಿಗಳು ಹಾಗು ಜಿಲ್ಲಾ ಪರಿಷತ್ತುಗಳು ಚುನಾಯಿತ ಪ್ರತಿನಿಧಿಗಳನ್ನೊಳಗೊಂಡಿದ್ದು, ತಾಲ್ಲೂಕು ಪಂಚಾಯತಿ ಸಮಿತಿಯು ನಾಮ ನಿರ್ದೇಶಿತ ಸಮಿತಿಯಾಗಿ ಕೆಲಸ ನಿರ್ವಹಿಸಿರುತ್ತದೆ. ಅಲ್ಲದೆ, ಹಲವಾರು ಕಾರ್ಯಕ್ರಮಗಳನ್ನು ಈ ಎರಡು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಸ್ತಾಂತರ ಮಾಡಿ ಆಡಳಿತ ವಿಕೇಂದ್ರಿಕರಣವನ್ನು ಬಹುತೇಕ ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ.

ಕರ್ನಾಟಕದಲ್ಲಿ ಹಲವಾರು ಪ್ರಯೋಗಗಳ ನಂತರ ಹಾಗು ಭಾರತ ಸಂವಿಧಾನದ 73ನೇ ತಿದ್ದುಪಡಿಯನ್ವಯ 1993 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವನ್ನು ಜಾರಿಗೆ ತಂದಿದ್ದು, ಅದರಂತೆ ರಾಜ್ಯದಲ್ಲಿ 3 ಹಂತದ ಪಂಚಾಯತ್ ರಾಜ್ ವ್ಯವಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ಆಳವಾಗಿ ಬೇರೂರಿದ್ದು, ನೈಜ ಅರ್ಥದಲ್ಲಿ ಜನರಿಂದ ಜನರಿಗೋಸ್ಕರ ಜನರಿಗಾಗಿ ಇರುವ ಆಡಳಿತ ವ್ಯವಸ್ಥೆಯಾಗಿ ಈ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಕರ್ತವ್ಯ ನಿರ್ವಹಿಸುತ್ತಿವೆ. ರಾಷ್ಟ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರಪ್ರಥಮವಾಗಿ ಹಾಗು ಯಶಸ್ವಿಯಾಗಿ ನೈಜ ಅರ್ಥದಲ್ಲಿ ಅನುಷ್ಠಾನಗೊಳಿಸಿದ ಗರಿಮೆ ನಮ್ಮ ರಾಜ್ಯದ್ದಾಗಿರುತ್ತದೆ.

ಪಂಚಾಯತ್ ರಾಜ್ ವ್ಯವಸ್ಥೆಗೆ ಭಾರತ ಸಂವಿಧಾನದ 73ನೇ ತಿದ್ದುಪಡಿಯ 11ನೇ ಅನುಚ್ಛೇದದಲ್ಲಿ ತಿಳಿಸಿರುವಂತೆ 29 ವಿಷಯಗಳನ್ನು ಹಸ್ತಾಂತರ ಮಾಡಲಾಗಿದೆ ಹಾಗು ಈ ವಿಷಯಗಳಿಗೆ ಅಗತ್ಯ ಇರುವ ಅನುದಾನವನ್ನು ಸಹ ಜಿಲ್ಲಾ ವಲಯ ಯೋಜನೆಗಳನ್ನಾಗಿ ರೂಪಿಸಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತಿದೆ ಹಾಗು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಬಹುಮುಖ್ಯವಾಗಿ ಅವಶ್ಯವಿರುವ ಕಾರ್ಯಾಂಗದ ಸುಮಾರು 3 ಲಕ್ಷ ಅಧಿಕಾರಿ/ ಸಿಬ್ಬಂದಿ ವರ್ಗದವರನ್ನು ಈ ಸಂಸ್ಥೆಗಳಿಗೆ ವರ್ಗಾಯಿಸಲಾಗಿದೆ. ಈ ರೀತಿ 3 ಎಫ್ (Function, Functionaries, Finance) ಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಿದ ಪ್ರಥಮ ರಾಜ್ಯ ಕರ್ನಾಟಕ ರಾಜ್ಯವಾಗಿರುತ್ತದೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ.

ಕರ್ನಾಟಕ ರಾಜ್ಯದಲ್ಲಿ 2011–12ನೇ ಸಾಲಿನಲ್ಲಿ ಜಿಲ್ಲಾ ವಲಯ ಯೋಜನೆಯಡಿಯಲ್ಲಿ (ಯೋಜನೆ ಹಾಗು ಯೋಜನೇತರ) ರೂ. 16,102 ಕೋಟಿಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳ ಮುಖಾಂತರ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗೆ ಒದಗಿಸಲಾಗುತ್ತಿದೆ. ಮುಂದುವರೆದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸುಮಾರು ರೂ. 5,898 ಕೋಟಿಗಳ ಅನುದಾನವನ್ನು ಗ್ರಾಮೀಣ ಜನರ/ಗ್ರಾಮೀಣ ಪ್ರದೇಶದ ಅಭಿವೃದ್ಧಿಗಾಗಿ ವೆಚ್ಚ ಮಾಡುತ್ತಿದೆ. ಅಂದರೆ, ಆಡಳಿತ ವಿಕೇಂದ್ರಿಕರಣ ಹಾಗು ಅಭಿವೃದ್ಧಿಯ ಪಥದಲ್ಲಿ ನಮ್ಮ ಸರ್ಕಾರದ ಕಟಿಬದ್ಧತೆಯನ್ನು ಪ್ರದರ್ಶಿಸುತ್ತಿದೆ.

ನಮ್ಮ ಸರ್ಕಾರದ ಅವಧಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಕೆಲವೊಂದು ಪ್ರಗತಿಪರ ಬದಲಾವಣೆಗಳನ್ನು ತರಲಾಗಿದೆ. ಈ ಸಂದರ್ಭದಲ್ಲಿ ಆ ಬದಲಾವಣೆಗಳ ಮಹತ್ವದ ಅಂಶಗಳನ್ನು ತಮ್ಮ ಗಮನಕ್ಕೆ ತರಲು ನಾನು ಇಚ್ಛಿಸುತ್ತೇನೆ:

(1) ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿ ಆಡಳಿತದಲ್ಲಿ ಜನರ ಪಾತ್ರವನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ.

(2) ರಾಜಕೀಯದಲ್ಲಿ ಮಹಿಳೆಯರ ಸಹಭಾಗಿತ್ವವನ್ನು ಉತ್ತೇಜಿಸುವ ದೃಷ್ಟಿಯಿಂದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕನಿಷ್ಠ ಶೇ. 50 ರಷ್ಟನ್ನು ಸ್ಥಾನಗಳಿಗೆ ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

(3) ಆಡಳಿತದಲ್ಲಿ ಪಾರದರ್ಶಕತೆ ಹಾಗು ಜನರ ಕುಂದುಕೊರತೆಗಳನ್ನು ಗ್ರಾಮ ಮಟ್ಟದಲ್ಲಿ ಪರ್ಯಾಲೋಚಿಸಲು ಅವಕಾಶವಾಗುವಂತೆ ಪಂಚಾಯತ್ ರಾಜ್ ಸಂಸ್ಥೆಗಳ ಜೊತೆಗೆ ಓಂಬುಡ್ಸ್‌ಮನ್ ನೇಮಕ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

(4) 2011–12ನೇ ಸಾಲಿನಿಂದ ಜಿಲ್ಲಾ ಪಂಚಾಯತಿಗಳಿಗೆ ಅನಿರ್ಬಂಧಿತ ಅನುದಾನ ರೂ. 1.00 ಕೋಟಿಯನ್ನು ಮಂಜೂರು ಮಾಡಿ ಈಗಾಗಲೇ 30 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

(5) 2011–12ನೇ ಸಾಲಿನಿಂದ ತಾಲ್ಲೂಕು ಪಂಚಾಯತಿಗಳಿಗೆ ಅನಿರ್ಬಂಧಿತ ಅನುದಾನ ರೂ. 1.00 ಕೋಟಿಯನ್ನು ಮಂಜೂರು ಮಾಡಿ ಈಗಾಗಲೇ 176 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

(6) ಗ್ರಾಮ ಪಂಚಾಯತಿಗಳಿಗೆ ಶಾಸನಬದ್ಧ ಅನುದಾನ ರೂ. 6.00 ಲಕ್ಷಗಳಿಂದ ರೂ. 8.00 ಲಕ್ಷಕ್ಕೆ ಹೆಚ್ಚಿಸಿ ಈಗಾಗಲೇ 2 ಕಂತಿನ ಅನುದಾನ ಪ್ರತಿ ಗ್ರಾಮ ಪಂಚಾಯತಿಗೆ ರೂ. 4.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಒಟ್ಟು ಬಿಡುಗಡೆ ರೂ. 225 ಕೋಟಿಗಳು.

ರಾಜ್ಯ ಸರ್ಕಾರವು ಕೈಗೊಂಡ ಹಲವಾರು ಆಡಳಿತ ವಿಕೇಂದ್ರಿಕರಣದ ಸುಧಾರಣೆಗಳನ್ನು ಗುರುತಿಸಿ ಭಾರತ ಸರ್ಕಾರ ಹಲವಾರು ಪ್ರಶಸ್ತಿ/ಪುರಸ್ಕಾರಗಳನ್ನು ನೀಡಿದೆ.

1. ಪಂಚಾಯತ್ ರಾಜ್ ಸಂಸ್ಥೆಗಳ ಉತ್ತರದಾಯಿತ್ವದ ಪ್ರೋತ್ಸಾಹದ ಯೋಜನೆ ಎರಡು ಬಾರಿ.
2. ಇ-ಆಡಳಿತವನ್ನು ಗ್ರಾಮ ಪಂಚಾಯತಿ ಮಟ್ಟಕ್ಕೆ ವಿಸ್ತರಿಸುವಲ್ಲಿ ಯಶಸ್ವಿಯಾದ ಪಂಚತಂತ್ರ ತಂತ್ರಾಂಶಕ್ಕೆ ರಾಷ್ಟ್ರದಲ್ಲಿಯೇ ಪ್ರಥಮ ಬಹುಮಾನ.
3. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಯಶಸ್ವಿ ಅನುಷ್ಠಾನಕ್ಕೆ ಅನುಕ್ರಮವಾಗಿ ಗುಲ್ಬರ್ಗಾ, ಬೆಳಗಾವಿ ಹಾಗು ಧಾರವಾಡ ಜಿಲ್ಲಾ ಪಂಚಾಯತಿಗಳು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿವೆ.
4. ನಿರ್ಮಲ ಗ್ರಾಮ ಪುರಸ್ಕಾರದಲ್ಲಿ ಹಲವಾರು ಗ್ರಾಮ ಪಂಚಾಯತಿಗಳು ಪ್ರಶಸ್ತಿಯನ್ನು ಪಡೆದಿರುತ್ತವೆ.

ಈ ಎಲ್ಲಾ ಪ್ರಶಸ್ತಿಗಳನ್ನು ಪಡೆಯುವ ಚಲನಶೀಲ ಪ್ರಕ್ರಿಯೆಯಲ್ಲಿ ಅವಿರತವಾಗಿ ಸರ್ಕಾರದೊಂದಿಗೆ ಕೈಜೋಡಿಸಿದ ಸ್ಥಳೀಯ ಚುನಾಯಿತ ಪ್ರತಿನಿಧಿಗಳು/ಅಧಿಕಾರಿಗಳು ವಿಶೇಷವಾಗಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳಿಗೆ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಹಲವಾರು ಅವಿಷ್ಕಾರಗಳು ಕಾಲಕಾಲಕ್ಕೆ ನಡೆಯುತ್ತಿದ್ದಾಗ್ಯೂ ಸಹ ಸರ್ಕಾರ ಬಯಸಿದ ರೀತಿಯಲ್ಲಿ ಹಾಗು ವೇಗದಲ್ಲಿ ಯೋಜನೆಗಳು ಅನುಷ್ಠಾನಗೊಳಿಸುವಲ್ಲಿ ಹಲವಾರು ನ್ಯೂನತೆಗಳನ್ನು ನಾನು ಗಮನಿಸಿರುತ್ತೇನೆ. ಉದಾ:

* ಕುಡಿಯುವ ನೀರಿನ ಸಮರ್ಪಕ ಬಳಕೆಯ ನಿರ್ವಹಣೆ,
* ಬೀದಿ ದೀಪಗಳ ನಿರ್ವಹಣೆ
* ರಸ್ತೆ ಹಾಗು ಚರಂಡಿಗಳ ನಿರ್ಮಾಣ ಹಾಗು ನಿರ್ವಹಣೆ
* ಗ್ರಾಮೀಣ ಪ್ರದೇಶದ ನೈರ್ಮಲ್ಯಕ್ಕೆ ಕಡೆಯ ಪ್ರಾಶಸ್ತ್ಯವನ್ನು ನೀಡಿರುವುದು
* ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ವಿಫಲವಾಗಿರುವುದು.
* ಜನರ ಆಶೋತ್ತರಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳು ನಿರೀಕ್ಷಿತ ಮಟ್ಟದಲ್ಲಿ ಸ್ಪಂದಿಸದೇ ಇರುವುದು
* ಸಾರ್ವಜನಿಕ ಸ್ವತ್ತುಗಳ ನಿರ್ವಹಣೆ ಸಮರ್ಪಕವಾಗದೇ ಇರುವುದು ಇತ್ಯಾದಿ.
* ಅಭಿವೃದ್ಧಿ ಯೋಜನೆಗಳು, ವ್ಯಕ್ತಿ ಆಧಾರಿತವಾಗಿ ಅನುಷ್ಠಾನಗೊಳಿಸುತ್ತಿರುವುದು ಇತ್ಯಾದಿ.
* ಚುನಾಯಿತ ಪ್ರತಿನಿಧಿಗಳು ಹಾಗು ಅಧಿಕಾರಿಗಳಲ್ಲಿ ಯೋಜನೆಗಳ ಅನುಷ್ಠಾನದಲ್ಲಿ ಸಮನ್ವಯತೆ ಇಲ್ಲದೇ ಇರುವುದು.

ಗ್ರಾಮ ಪಂಚಾಯತಿಯು ಆಡಳಿತ ವಿಕೇಂದ್ರಿಕರಣದ ಕೆಳಸ್ತರದ ಪಂಚಾಯತ್ ರಾಜ್ ಸಂಸ್ಥೆಯಾಗಿದ್ದು, ಈ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಹಲವಾರು ಬಹು ಉಪಯೋಗಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಪ್ರತಿ ಗ್ರಾಮ ಪಂಚಾಯತಿಗೆ ಎಲ್ಲಾ ಮೂಲಗಳಿಂದ ಆದಾಯ ರೂ. 50 ಲಕ್ಷದಿಂದ ರೂ. 100 ಲಕ್ಷದವರೆಗೆ ನೀಡಲಾಗುತ್ತಿದ್ದು, ಈ ಅನುದಾನವನ್ನು ಸಮರ್ಪಕವಾಗಿ ಜನರಿಗೆ ತಲುಪಿಸುವಲ್ಲಿ ಈ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುವ ಚುನಾಯಿತ

ಪ್ರತಿನಿಧಿಗಳು ಹಾಗು ಅಧಿಕಾರಿಗಳ ಪಾತ್ರ ಬಹುಮುಖ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಪ್ರಥಮವಾಗಿ ವ್ಯವಸ್ಥಾಪಕ ವೃಂದದ ಹಿರಿಯ ಅಧಿಕಾರಿಯನ್ನು ಪ್ರತಿ ಗ್ರಾಮ ಪಂಚಾಯತಿಗೆ ನೇಮಿಸಲಾಗಿದೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕಾತಿ ಪ್ರಯೋಗ ರಾಷ್ಟ್ರದಲ್ಲಿಯೇ ಮಾದರಿಯಾಗಿದ್ದು, ಈ ಪ್ರಯೋಗವನ್ನು ರಾಷ್ಟ್ರಾದ್ಯಂತ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಈಗಾಗಲೇ ಕ್ರಮ ಕೈಗೊಂಡು, ನಮ್ಮ ಕ್ರಮವನ್ನು ಭಾರತ ಸರ್ಕಾರವು ಪ್ರಶಂಶಿಸಿದೆ.

ಆದಾಗ್ಯೂ ಗ್ರಾಮ ಪಂಚಾಯತಿಗಳಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ನೇಮಕ ಮಾಡಿದ ಮೇಲೆ ಹಲವಾರು ಅಭಿವೃದ್ಧಿ ಯೋಜನೆ ಅನುಷ್ಠಾನದಲ್ಲಿ ಅನಪೇಕ್ಷಿತ ಹಲವಾರು ಪ್ರಕರಣಗಳು ಘಟಿಸಿದ್ದು, ಬಹುಮುಖ್ಯವಾಗಿ ಗ್ರಾಮ ಪಂಚಾಯತಿ ಸದಸ್ಯರು ಹಾಗು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೊತೆಯಲ್ಲಿ ಕಾರ್ಯಕ್ರಮ ಅನುಷ್ಠಾನದಲ್ಲಿ ಹೊಂದಾಣಿಕೆ ಇಲ್ಲದಿರುವುದನ್ನು ಗಮನಿಸಲಾಗಿದೆ. ಮುಂದುವರೆದು, ಹಲವಾರು ಹಣ ದುರುಪಯೋಗ ಪ್ರಕರಣಗಳು ಬೆಳಕಿಗೆ ಬಂದಿದ್ದು, ಕಹಿ ನೆನಪುಗಳು ನಮ್ಮ ಪಂಚಾಯತ್ ರಾಜ್ ವ್ಯವಸ್ಥೆ ಮೇಲೆ ಕರಿ ನೆರಳು ಬೀಳುತ್ತಿರುವುದನ್ನು ಗಮನಿಸಲಾಗಿದೆ.

ಈ ಸಮಸ್ಯೆಗಳಿಗೆ ಒಂದು ಸಮಗ್ರ ಪರಿಹಾರ ಕಂಡುಹಿಡಿಯಲು ಸರ್ಕಾರದ ಎಲ್ಲಾ ಪ್ರಯತ್ನ ಮಾಡಲಾಗಿದೆ. ವಿವಿಧ ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳು ತಮ್ಮ ಹೊಣೆಗಾರಿಕೆ ಅರಿತು ಕೆಲಸ ನಿರ್ವಹಿಸಲು ಬೇಕಾದ ಎಲ್ಲಾ ಸಲಹೆ ಸೂಚನೆ ಮಾರ್ಗದರ್ಶನಗಳನ್ನೊಳಗೊಂಡ ಸುತ್ತೋಲೆ, ಸರ್ಕಾರಿ ಆದೇಶಗಳನ್ನು ನೀಡಲಾಗಿದೆ. ಈ ನಿಟ್ಟಿನಲ್ಲಿ ಮಾಡಬೇಕಾದ ಸುಧಾರಣೆಗಳನ್ನು ಎಲ್ಲಾ ಸ್ತರಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳನ್ನು ಸಹ ನೇಮಕ ಮಾಡಿ ಸಮಸ್ಯೆಗಳಿಗೆ ಪರಿಹಾರ ನೀಡುವ ಪ್ರಯತ್ನ ತುರ್ತಾಗಿ ನಡೆಯುತ್ತಿದೆ.

ಚುನಾಯಿತ ಪ್ರತಿನಿಧಿಗಳ ಹಾಗೂ ಅಧಿಕಾರಿ ಸಿಬ್ಬಂದಿಗಳ ನಡುವೆ ಹೊಂದಾಣಿಕೆ ಹಾಗೂ ಪರಸ್ಪರ ಸಮನ್ವಯದ ಸಂಬಂಧಗಳು ನಿಮ್ಮ ಪಾರದರ್ಶಕ ವ್ಯಕ್ತಿತ್ವ ಹಾಗೂ ಸೃಜನಶೀಲ ನಡವಳಿಕೆಯ ಮೇಲೆ ಅವಲಂಬಿತವಾಗಿರುತ್ತದೆ. ಒಂದು ಸಂಸ್ಥೆಯ ಅಧೀನದಲ್ಲಿ ಕೆಲಸ ನಿರ್ವಹಿಸುವ ನೀವೆಲ್ಲರೂ ಒಂದೆಡೆ ಸೇರಿ ನಿಮ್ಮಲ್ಲಿರುವ ಅಭಿಪ್ರಾಯ, ಭಿನ್ನಾಭಿಪ್ರಾಯಗಳನ್ನು ಕುರಿತು ಚರ್ಚಿಸಿ ವೈಮನಸ್ಯಗಳನ್ನು ಬಗೆಹರಿಸಿಕೊಂಡು ತಿಳಿ ಮನಸ್ಸಿನಿಂದ ದೈನಂದಿನ ಸರ್ಕಾರದ ಕೆಲಸಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡು ಜನ ಸೇವೆಗೆ ಕಾರ್ಯೋನ್ಮುಖರಾಗುತ್ತೀರೆಂಬ ಆಶಯ ನನ್ನದು.

*ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು*

**(ಜಗದೀಶ ಶೆಟ್ಟರ)**

ಸಚಿವಾಲಯದಿಂದ ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

ನನ್ನ ಸಂದೇಶ ಅಂತ ಏನೂ ಇಲ್ಲ.
ನನ್ನ ಬದುಕೇ ಒಂದು ಸಂದೇಶ.
ನನ್ನ ಎಲ್ಲಾ ನಡೆ ಮತ್ತು ತೀರ್ಮಾನಗಳ ಹಿಂದೆ
ನೈತಿಕ ಶಕ್ತಿ ಇದ್ದೇ ಇದೆ. . .

**– ಮಹಾತ್ಮ ಗಾಂಧೀಜಿ**

ಪ್ರಿಯ ಬಂಧುಗಳೇ,

ಕರ್ನಾಟಕ ರಾಜ್ಯದ ಗ್ರಾಮೀಣ ಜನರ/ಪ್ರದೇಶದ ಸಮಗ್ರ ಅಭಿವೃದ್ಧಿ. ಗ್ರಾಮೀಣ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಗ್ರಾಮೀಣ ಜನರ ಜೀವನಮಟ್ಟವನ್ನು ಉತ್ತಮಪಡಿಸುವುದೇ ಇಲಾಖೆಯ ಪ್ರಮುಖ ಧ್ಯೇಯೋದ್ದೇಶವಾಗಿದೆ. ಧ್ಯೇಯೋದ್ದೇಶವನ್ನು ಕಾರ್ಯರೂಪಕ್ಕೆ ತರಲು ಇಲಾಖೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಹಭಾಗಿತ್ವದಲ್ಲಿ ರೂಪಿಸಲಾಗಿದೆ.

ಜನರ ಆಶೋತ್ತರಗಳನ್ನು ಈಡೇರಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಅನುಷ್ಠಾನದಿಂದ ಗ್ರಾಮೀಣ ಜನರ ಜೀವನ ಶೈಲಿಯನ್ನು ಬದಲಾವಣೆ ಮಾಡುವಲ್ಲಿ ನಿರಂತರ ಪ್ರಯತ್ನಗಳು ಮುಂದುವರೆಯುತ್ತಿವೆ. ಗ್ರಾಮೀಣ ಜನರ ಜೀವನ ಶೈಲಿಗೆ ಪೂರಕವಾಗಿ ಸ್ವ ಉದ್ಯೋಗ ಕಾರ್ಯಕ್ರಮಗಳ ಮೂಲಕ ಬಡತನ ನಿರ್ಮೂಲನೆ. ಗ್ರಾಮೀಣ ಕುಟುಂಬವೊಂದಕ್ಕೆ ಆರ್ಥಿಕ ವರ್ಷದಲ್ಲಿ ಕನಿಷ್ಠ 100 ದಿನಗಳ ಉದ್ಯೋಗವನ್ನು ಒದಗಿಸುವುದರ ಮೂಲಕ ಅವರ ಜೀವನೋಪಾಯದ ಆಧಾರಗಳನ್ನು ಬಲಪಡಿಸುವುದು. ಗುಣಾತ್ಮಕ ಹಾಗೂ ದೀರ್ಘ ಬಾಳಿಕೆ ಬರುವಂತಹ ಗ್ರಾಮೀಣ ಮೂಲಭೂತ ಸೌಕರ್ಯಗಳನ್ನು ನಿಗದಿತ ಸಮಯದಲ್ಲಿ ಸೃಜಿಸುವುದರ ಮೂಲಕ ಫಲಾನುಭವಿಯು ಅವಶ್ಯಕತೆಯನ್ನು ಪೂರೈಸುವುದು. ಎಲ್ಲಾ ಗ್ರಾಮೀಣ ಜನವಸತಿಗಳಿಗೆ ಅವಶ್ಯವಿರುವಷ್ಟು ಶುದ್ಧ ಕುಡಿಯುವ ನೀರಿನ ಪೂರೈಕೆ.

ಈ ಕಾರ್ಯಕ್ರಮಗಳನ್ನು ಗ್ರಾಮಾಡಳಿತಗಳ ಮುಖಾಂತರ ಅನುಷ್ಠಾನಗೊಳಿಸ ಲಾಗುತ್ತಿದ್ದು, ರಾಜ್ಯದಲ್ಲಿ 3 ಹಂತದ ಸದೃಢವಾದ ಪಂಚಾಯತ್ ರಾಜ್ ವ್ಯವಸ್ಥೆ 1993 ರಿಂದ ಜಾರಿಯಲ್ಲಿದ್ದು, ಈ ಸಂಸ್ಥೆಗಳನ್ನು ನಿರಂತರವಾಗಿ ಸಬಲೀಕರಣಗೊಳಿಸುವ ಹಲವಾರು ಕಾರ್ಯಕ್ರಮಗಳು ಕಾರ್ಯಾನುಷ್ಠಾನದಲ್ಲಿದೆ. ಪಂಚಾಯತ್ ರಾಜ್ ಸಂಸ್ಥೆಗಳ ಉತ್ತರದಾಯಿತ್ವ ಹಾಗು ಸಾಮರ್ಥ್ಯ ನಿರ್ಮಾಣ, ಪಾರದರ್ಶಕ ಆಡಳಿತ ನೀಡಲು ಈ ಕೆಳಕಂಡ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

1. ಕಾಲಮಿತಿಯಲ್ಲಿ ಚುನಾವಣೆಗಳನ್ನು ನಡೆಸುವುದು.
2. ಯೋಜನಾ ತಯಾರಿಕೆಯಲ್ಲಿ ಜನರ ಸಹಭಾಗಿತ್ವ.
3. ಸಾಮಾಜಿಕ ಪರಿಶೋಧನೆಯಲ್ಲಿ ಸ್ಥಳೀಯ ಸಮುದಾಯಗಳ ಭಾಗವಹಿಸುವಿಕೆ.
4. ಮಹಿಳೆಯರ ಸಬಲೀಕರಣ.
5. ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳ ಹಾಗೂ ಅಧಿಕಾರಿ/ ಸಿಬ್ಬಂದಿಯ ಸಾಮರ್ಥ್ಯಾಭಿವೃದ್ಧಿ.
6. ಸ್ಥಳೀಯ ಆದ್ಯತೆ, ನಿರ್ಧಾರಕ್ಕನುಗುಣವಾಗಿ ಸೇವೆ ನೀಡುವಲ್ಲಿ ಮತ್ತು ಸಾರ್ವಜನಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಗ್ರಾಮ ಪಂಚಾಯತಿಗಳು ನೀಡುವ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವುದು.
7. ಗ್ರಾಮೀಣಾಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಟಿತ್ವವನ್ನು ಹೊಂದುವ ಮೂಲಕ ಬಲಿಷ್ಠ ಗ್ರಾಮ ಸಮುದಾಯಗಳನ್ನು ಅಭಿವೃದ್ಧಿಪಡಿಸುವುದು.
8. ಮೂಲಭೂತ ಸೌಲಭ್ಯಗಳ ಅಭಿವೃದ್ಧಿಯಲ್ಲಿರುವ ತೊಡಕುಗಳನ್ನು ನಿವಾರಿಸುವುದು.
9. ಗ್ರಾಮಗಳ ನೈರ್ಮಲ್ಯ ಸುಧಾರಣೆ.
10. ಮಾನವ ಸಂಪನ್ಮೂಲವನ್ನು ರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವುದು.

### ಇಲಾಖೆಯ ಕಾರ್ಯ ಚಟುವಟಿಕೆಗಳ ಸ್ಥೂಲ ವಿವರಣೆ

ರಾಜ್ಯದ ಗ್ರಾಮಿಣ ಪ್ರದೇಶಗಳ ಅಭಿವೃದ್ಧಿಯು ಕೃಷಿ ಉತ್ಪಾದಕತೆ ಮತ್ತು ಇತರೆ ಆರ್ಥಿಕ ಚಟುವಟಿಕೆಗಳ ಸುಧಾರಣೆ, ಮೂಲಭೂತ ಸೌಕರ್ಯಗಳ ಲಭ್ಯತೆ ಮತ್ತು ಅವುಗಳ ಗುಣಮಟ್ಟದ ಸುಧಾರಣೆ ಹಾಗೂ ಸೇವೆಗಳ ಗುಣಮಟ್ಟದ ಸುಧಾರಣೆಯನ್ನು ಅವಲಂಭಿಸಿದ್ದು, ಮಾನವ ಸಂಪನ್ಮೂಲಗಳ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ನೇರ ಕೊಡುಗೆಯಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮೀಣ ಜನರ ಜೀವನ ಮಟ್ಟ ಸುಧಾರಣೆಗಾಗಿ ಹಾಗೂ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ ಬೆಳೆಸುವ ದಿಕ್ಕಿನಲ್ಲಿ ಪ್ರಜಾಪ್ರಭುತ್ವದಲ್ಲಿನ ಆಡಳಿತ ವಿಕೇಂದ್ರೀಕರಣಗೊಳಿಸಿ ಗ್ರಾಮದ ಏಳಿಗೆಗೆ ಗ್ರಾಮದ ಜನರೇ ನಿರ್ಧರಿಸಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಆಡಳಿತ ವಿಕೇಂದ್ರೀಕರಣದ ಪರಿಣಾಮವಾಗಿ ಗ್ರಾಮ ಪಂಚಾಯತಿಗಳಿಗೆ ಹಲವಾರು ಪ್ರಕಾರ್ಯಗಳನ್ನು ಹಂಚಿಕೆ ಮಾಡಲಾಗಿದ್ದು, ಅದಕ್ಕೆ ಸಂಬಂಧಪಟ್ಟ ಅನುದಾನಗಳ ನಿರ್ವಹಣೆಯನ್ನೂ ಸಹ ಹಸ್ತಾಂತರಿಸಲಾಗಿದೆ. ಆದರೆ, ಈ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಹಾಗೂ ಆರ್ಥಿಕ ಹೊಣೆಗಾರಿಕೆ ನಿಭಾಯಿಸುವ ಸಲುವಾಗಿ ಗ್ರಾಮ ಪಂಚಾಯತಿಗಳು ಸೂಕ್ತ ಆಡಳಿತಾತ್ಮಕ ಸಾಮರ್ಥ್ಯ ಹೊಂದಿರುವುದಿಲ್ಲ. ಆದಕಾರಣ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿ ಕಾರ್ಯದರ್ಶಿ ಜೊತೆಗೆ ವ್ಯವಸ್ಥಾಪಕರು ಅಥವಾ ಅಧೀಕ್ಷಕ ದರ್ಜೆಯ 'ಪಂಚಾಯತಿ ಅಭಿವೃದ್ಧಿ ಅಧಿಕಾರಿ' ಎಂಬ ಪದನಾಮವುಳ್ಳ ಒಬ್ಬ ಕಾರ್ಯಕಾರಿ ಅಧಿಕಾರಿಯನ್ನು ಪ್ರತಿ ಗ್ರಾಮ ಪಂಚಾಯತಿಗೆ ನೇಮಕ ಮಾಡಲು 5,628 ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಮತ್ತು ಹೆಚ್ಚಿನ ಆಡಳಿತಾತ್ಮಕ ಹಾಗೂ ಆರ್ಥಿಕ ಜವಾಬ್ದಾರಿಯನ್ನು ಒಳಗೊಂಡಿರುವ ಗ್ರಾಮ ಪಂಚಾಯತಿಗಳಲ್ಲಿ 2,500 ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳನ್ನು ಸೃಜಿಸಲಾಗಿದೆ.

ಅದರಂತೆ, 2009–10ನೇ ಸಾಲಿನಲ್ಲಿ 2,500 ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲಾಗಿದೆ. 2010–11ನೇ ಸಾಲಿನಲ್ಲಿ 1,353 ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ತುಂಬಲು ಕ್ರಮ ವಹಿಸಲಾಗಿದೆ.

ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತಿಗೆ ತರಬೇತಿ ನೀಡಿ ನೇಮಕ ಮಾಡಿದ ನಂತರ ಹಲವಾರು ಗ್ರಾಮ ಪಂಚಾಯತಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಗಮನಿಸಲಾಗಿದೆ. ಜೊತೆಜೊತೆಯಲ್ಲಿಯೇ ಕಾರ್ಯಕ್ರಮ ಅನುಷ್ಠಾನದಲ್ಲಿ ಹಲವಾರು ತೊಡಕುಗಳು, ನ್ಯೂನತೆಗಳು ಕಂಡುಬಂದ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳ ಬಗ್ಗೆ ಚರ್ಚಿಸಲು ದಿನಾಂಕ 14.10.2011 ರಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಹಾಗು ಗ್ರಾಮ ಪಂಚಾಯತಿ ಅಧ್ಯಕ್ಷರುಗಳ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

1. ಪಂ.ರಾಜ್ ಸಂಸ್ಥೆಗಳ ಕೆಳಸ್ತರದ ವ್ಯವಸ್ಥೆಯಾದ ಗ್ರಾಮ ಪಂಚಾಯತಿಗಳಿಗೆ ಹೊಸದಾಗಿ ನೇಮಕಗೊಂಡ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ಸಾರ್ವಜನಿಕರು ಹಾಗೂ ಸರ್ಕಾರ ಬಹಳಷ್ಟು ನಿರೀಕ್ಷೆಯನ್ನು ಇಟ್ಟುಕೊಂಡಿರುತ್ತದೆ. ಆ ಆಶಯಕ್ಕೆ ತಕ್ಕಂತೆ ಎಲ್ಲ ಅಧಿಕಾರಿಗಳು ಕೆಲಸ ನಿರ್ವಹಿಸಿ ಜನತಾಣ ಹಾಗೂ ಜನ ವಸತಿಗಳ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ತಾವೆಲ್ಲರೂ ಕ್ರಿಯಾಶೀಲರಾಗುವಂತೆ ಒತ್ತಾಯಿಸುತ್ತೇನೆ. ಇದಕ್ಕೆ ಪೂರಕವಾಗಿ ಎಲ್ಲಾ ಪಂಚಾಯತಿ ಕೇಂದ್ರಗಳಲ್ಲಿ ನಾಗರಿಕ ಸನ್ನದನ್ನು ಪ್ರಕಟಿಸುವ ಮೂಲಕ ಅದರಂತೆ ಎಲ್ಲಾ ಸರ್ಕಾರದ ಕಾರ್ಯಕ್ರಮಗಳನ್ನು ಪಾರದರ್ಶಕ ನಿಯಮದನ್ವಯ ಕೆಲಸ ನಿರ್ವಹಿಸಿ ಜನಪರ ಆಡಳಿತಕ್ಕೆ ನಾಂದಿಯಾಗಲು ಸೂಚಿಸುತ್ತೇನೆ.

2. ಸಮಾಜಮುಖಿ ಆಡಳಿತವನ್ನು ನೀಡುವ ಸಂದರ್ಭದಲ್ಲಿ ಪಂಚಾಯತ್ ರಾಜ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳು ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಸಾರ್ವಜನಿಕರೊಂದಿಗೆ ಸೌಹಾರ್ದ ಸಂಬಂಧವನ್ನು ಸಾಧಿಸಿ ಪರಸ್ಪರ ಸಹಕಾರದಿಂದ ಕೆಲಸ ನಿರ್ವಹಿಸುವಂತಹ ಕಾರ್ಯ ವಾತಾವರಣವನ್ನು ನಿರ್ಮಿಸಿಕೊಳ್ಳಲು ಮೊದಲಿಗರಾಗಿ.

3. ಚುನಾಯಿತ ಪ್ರತಿನಿಧಿಗಳು ಸಹ ಸರ್ಕಾರದ ಸುತ್ತೋಲೆ, ಆದೇಶ, ಹಾಗೂ ಪಂಚಾಯತ್ ರಾಜ್ ಅಧಿನಿಯಮಗಳಿಗೆ ಬದ್ಧರಾಗಿ ಅಧಿಕಾರಿ/ಸಿಬ್ಬಂದಿ ವರ್ಗದವರೊಂದಿಗೆ ಸಹಕಾರ ಮನೋಭಾವದೊಂದಿಗೆ ಕಾರ್ಯ ನಿರ್ವಹಿಸಿದಾಗ ನಿರೀಕ್ಷೆಗೂ ಮೀರಿ ಉತ್ತಮ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ನೀಡಲು ಸಾಧ್ಯವಾಗುತ್ತದೆ.

4. ಯಾವುದೇ ಆಡಳಿತ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಾಗ ಹಲವಾರು ಕುಂದುಕೊರತೆಗಳು ಆರಂಭಿಕ ಹಂತದಲ್ಲಿ ಕಂಡುಬರುವುದು ಸಹಜ. ಇವುಗಳನ್ನು ಪರಸ್ಪರ ಸಹಕಾರ ಮನೋಭಾವದೊಂದಿಗೆ ನೀಗಿಸಿಕೊಂಡು ಕಾರ್ಯಪ್ರವೃತ್ತರಾಗುತ್ತೀರೆಂದು ಭಾವಿಸುತ್ತೇನೆ. ಆದಾಗಿಯೂ ಕುಂದುಕೊರತೆಗಳು ಇದ್ದಲ್ಲಿ ಮೇಲಾಧಿಕಾರಿಗಳು ಹಾಗೂ ಸರ್ಕಾರ ಸಕಾರಾತ್ಮಕ ಪರಿಹಾರಕ್ಕಾಗಿ ಸದಾ ಸಿದ್ಧವಿದೆಯೆಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

5. ಗ್ರಾಮ ಪಂಚಾಯತಿಗಳು ಗ್ರಾಮೀಣ ಸೇವಾ ಕೇಂದ್ರಗಳಾಗಿ ಪರಿವರ್ತನೆಗೊಂಡು ಜನರ ನಿರೀಕ್ಷೆಯಂತೆ ಎಲ್ಲಾ ಸೇವೆಗಳನ್ನು ಒದಗಿಸುವಲ್ಲಿ ಒಂದೇ ಸೂರಿನಡಿ ದೊರಕುವಂತಾಗಬೇಕು.

ಒಟ್ಟಾರೆ ಗ್ರಾಮೀಣ ಜನರ ಬದುಕು ಹಸನಾಗಬೇಕು, ಹಳ್ಳಿಗಳು ಪ್ರಗತಿಯ ಕಡೆ ಸಾಗಬೇಕು. ತನ್ಮೂಲಕ ದೇಶದ ಆರ್ಥಿಕತೆ ಉತ್ತಮಗೊಳ್ಳಬೇಕು ಎಂಬುದೇ ಸರ್ಕಾರದ ಸದಾಶಯ. ಈ ನಿಟ್ಟಿನಲ್ಲಿ ತಾವೆಲ್ಲರೂ ಮತ್ತಷ್ಟು ಕ್ರಿಯಾಶೀಲತೆಯೊಂದಿಗೆ ಕಾರ್ಯೋನ್ಮುಖರಾಗಿ ಪ್ರಜಾಪ್ರಭುತ್ವ ವಿಕೇಂದ್ರೀಕರಣಕ್ಕೆ ಹೊಸ ಭಾಷ್ಯ ಬರೆಯುವಂತಾಗಲಿ ಎಂದು ಹಾರೈಸುತ್ತೇನೆ.

*ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.*



(ಡಾ. ಅಮಿತಾ ಪ್ರಸಾದ್)

ಮುಖಪುಟ ವರದಿ

# ಸಭೆ, ಸಮ್ಮೇಳನ ಹಾಗೂ ಸಮಾವೇಶ

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜಿ.ಪಂ. ಅಧ್ಯಕ್ಷ/ ಉಪಾಧ್ಯಕ್ಷರ ಸಮಾವೇಶ, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಪಂ. ಅಭಿವೃದ್ಧಿ ಅಧಿಕಾರಿಗಳ ಸಮಾವೇಶ ಹಾಗೂ ಮೈಸೂರಿನಲ್ಲಿ ನಡೆದ ಐ.ಪಿ.ಎಸ್. ಅಧಿಕಾರಿಗಳ ಸಭೆಯ ಬಗ್ಗೆ ಸಂಕ್ಷಿಪ್ತ ಚಿತ್ರಣ.

## ಸ್ಥಳೀಯ ಸಂಸ್ಥೆಗಳ ಅಧಿಕಾರ ಮೊಟಕುಗೊಳಿಸುವುದಿಲ್ಲ :

ವಿಧಾನ ಸೌಧದಲ್ಲಿ ಜಿಲ್ಲಾ ಪಂಚಾಯಿತ್ತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಒಕ್ಕೂಟದ ಸಮಾವೇಶದಲ್ಲಿ ಮಾತನಾಡಿದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದ ಗೌಡರು ರಾಜ್ಯದ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಮೊಟಕುಗೊಳಿಸುವ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲ ಎಂದು ತಿಳಿಸುತ್ತಾ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸುವ ನಿಟ್ಟಿನಲ್ಲಿ ವ್ಯಾಪಕವಾಗಿ ಚರ್ಚಿಸಲು ದೀಪಾವಳಿ ಹಬ್ಬದ ನಂತರ ಪಂಚಾಯತ್ ರಾಜ್ ಪರಿಷತ್ತಿನ ಸಭೆ ನಡೆಸುವುದಾಗಿ ತಿಳಿಸಿದರು. ಕುಡಿಯುವ ನೀರಿನ ವ್ಯವಸ್ಥೆಯ ನಿರ್ವಹಣೆಯನ್ನು ಜಿಲ್ಲಾ ಪಂಚಾಯತಿಗಳಿಗೆ ವಹಿಸಿಕೊಡುವಂತೆ ಒಕ್ಕೂಟ ಮಾಡಿಕೊಂಡ ಮನವಿಗೆ ಪ್ರತಿಕ್ರಿಯೆ ನೀಡಿದ ಅವರು ಗ್ರಾಮಾಂತರ ಪ್ರದೇಶ ಸೇರಿದಂತೆ ರಾಜ್ಯದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಅತಿ ಶೀಘ್ರದಲ್ಲಿ ಸಮಗ್ರ ಕುಡಿಯುವ ನೀರು ನೀತಿಯನ್ನು ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಮುಂದುವರೆದು ಜನ ಪ್ರತಿನಿಧಿಗಳ ಕಿರುಕುಳದಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಸಾಮೂಹಿಕ ರಾಜೀನಾಮೆ ನೀಡುವಂತಹ ಪ್ರಸಂಗಗಳು ಕಂಡು ಬರುತ್ತಿರುವುದು ಸರ್ಕಾರಕ್ಕೆ ಮುಜುಗರ ತರುವಂತಾಗಿದೆ. ಆದ್ದರಿಂದ ಜನಪ್ರತಿನಿಧಿಗಳು ಅಧಿಕಾರಿ, ಸಿಬ್ಬಂದಿಗಳೊಂದಿಗೆ ಸೌಜನ್ಯದಿಂದ ವರ್ತಿಸಬೇಕು ಮತ್ತು ಅಭಿವೃದ್ಧಿ ವಿಚಾರದಲ್ಲಿ ರಾಜಕೀಯ ಮಾಡಬಾರದೆಂದು ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದರು.

ಈ ಸಂದರ್ಭದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಕೆ. ಜೈರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಜಗದೀಶ್ ಶೆಟ್ಟರ್ ಹಾಗೂ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಅಮಿತಾ ಪ್ರಸಾದ್, ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮತ್ತು ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



**ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ನಡುವೆ ಸಮನ್ವಯತೆ ಇರಲಿ :**

ವಿಕಾಸ ಸೌಧದ ನಾಲ್ಕನೇ ಮಹಡಿಯಲ್ಲಿರುವ ಸಮ್ಮೇಳನ ಸಭಾಂಗಣದಲ್ಲಿ ಏರ್ಪಡಿಸಿದ್ದ ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಮ್ಮೇಳನವನ್ನು ಉದ್ಘಾಟಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್



ಸಚಿವರಾದ ಶ್ರೀ ಜಗದೀಶ್ ಶೆಟ್ಟರ್ ಮಾತನಾಡಿ "ಅಭಿವೃದ್ಧಿ ಯೋಜನೆಗಳ ಅನುಷ್ಠಾನ ವಿಚಾರದಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರು ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನಡುವೆ ಸಮನ್ವಯತೆ ಕಾಪಾಡಿಕೊಂಡು ಬಂದಾಗ ಮಾತ್ರ ಗಾಂಧೀಜಿಯವರ ಕನಸಿನ ರಾಮರಾಜ್ಯ ನಿರ್ಮಾಣ ಮಾಡಲು ಸಾಧ್ಯ" ಎಂದು ತಿಳಿಸಿದರು. ಉದ್ಯೋಗಖಾತ್ರಿ ಯೋಜನೆ ಸೇರಿದಂತೆ ವಿವಿಧ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳ ನಡುವೆ ಪರಸ್ಪರ ಸಮನ್ವಯತೆ ಇಲ್ಲದಿರುವುದು ಕಂಡುಬಂದಿದೆ. ಇದು ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ತೊಡಕುಂಟಾಗಲಿದೆ ಎಂದರು.

ಈ ಸಂದರ್ಭದಲ್ಲಿ ಅವರು ಇಲಾಖೆಯು ಹೊರತಂದಿರುವ ಕೈಪಿಡಿ ಮತ್ತು ಕಿರುಹೊತ್ತಿಗೆಗಳನ್ನು ಬಿಡುಗಡೆ ಮಾಡಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಅಮಿತಾ ಪ್ರಸಾದ್, ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಮತ್ತಿತರ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಅಧಿಕಾರಿಗಳು ಮಾನವೀಯತೆಯಿಂದ ಕೆಲಸ ನಿರ್ವಹಿಸಲಿ :**

ಆಡಳಿತ ತರಬೇತಿ ಕೇಂದ್ರ, ಮೈಸೂರು ಇಲ್ಲಿನ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ. ರಂಗನಾಥ್‌ರವರು "ಅಧಿಕಾರಿಗಳು ಮಾನವೀಯತೆಯಿಂದ ಸಾರ್ವಜನಿಕರೊಂದಿಗೆ ವ್ಯವಹರಿಸುವುದಲ್ಲದೆ ಸಮಾಜಮುಖಿ ಹಾಗೂ ಸ್ನೇಹ ಪರವಾಗಿ ಸಾರ್ವಜನಿಕರ ಕುಂದುಕೊರತೆಗಳನ್ನು ಪರಿಹರಿಸುವಲ್ಲಿ ವೃತ್ತಿಪರತೆ ಮೆರೆದಲ್ಲಿ ನಿಜವಾಗಿಯೂ ಒಳ್ಳೆಯ ಆಡಳಿತ ನೀಡಿದಂತಾಗುತ್ತದೆ" ಎಂದು ಅಭಿಪ್ರಾಯಪಟ್ಟರು. ಆಡಳಿತ ತರಬೇತಿ ಕೇಂದ್ರ, ಮೈಸೂರು (ATI) ಇಲ್ಲಿ ದಿನಾಂಕ 24-09-2011 ರಂದು ನಡೆದ ಐ.ಪಿ.ಎಸ್. ಅಧಿಕಾರಿಗಳ ಸಭೆಯಲ್ಲಿ ಮಾತನಾಡುತ್ತಾ, ಒಗ್ಗಟ್ಟಿನ ಕಾರ್ಯನಿರ್ವಹಣೆ, ನಾಯಕತ್ವ ಗುಣಗಳು ಮತ್ತು ನಂಬಿಕೆ ಇವುಗಳಿದ್ದಲ್ಲಿ ಇನ್ನೂ ಹೆಚ್ಚು ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಬಹುದೆಂದು ತಿಳಿಸುತ್ತಾ, ಹಲವಾರು ಕುಂದುಕೊರತೆಗಳ ಪರಿಹಾರಕ್ಕಾಗಿ ಸಾರ್ವಜನಿಕರು ಅಧಿಕಾರಿಗಳನ್ನು ಭೇಟಿ ಮಾಡುವುದರಿಂದ



ಮಾನವೀಯತೆಯಿಂದ ಅಧಿಕಾರಿಗಳು ಕಾರ್ಯನಿರ್ವಹಿಸಬೇಕೆಂದು ಅಧಿಕಾರಿಗಳಿಗೆ ಕರೆ ನೀಡಿದರು. ಈ ಸಂದರ್ಭದಲ್ಲಿ ಡಾ. ಅಮೀತಾ ಪ್ರಸಾದ್, ಮಹಾ ನಿರ್ದೇಶಕರು, ಆಡಳಿತ ತರಬೇತಿ ಕೇಂದ್ರ, ಮೈಸೂರು ಇವರು ಅಧಿಕಾರಿಗಳಿಗಾಗಿ ಮೂಲ ತರಬೇತಿ ಶಿಬಿರದ ಬಗ್ಗೆ ವಿವರಣೆ ನೀಡಿದರು. ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ ಮೀರಾ ಸಕ್ಸೇನಾ ಮತ್ತು ಪ್ರಾದೇಶಿಕ ಆಯುಕ್ತರಾದ ಶ್ರೀಮತಿ ಎಂ.ವಿ. ಜಯಂತಿ ಈ ಸಂದರ್ಭದಲ್ಲಿ ಹಾಜರಿದ್ದರು.

❑

# ತೇರನೆಳೆವರು ನಾವು

– ರಾಷ್ಟ್ರಕವಿ
ಡಾ|| ಜಿ.ಎಸ್. ಶಿವರುದ್ರಪ್ಪ *



ತೇರನೆಳೆವರು ನಾವು – ಎಲ್ಲಿದ್ದರೇನು?
ಬೊಂಬಾಯಿ, ಮದರಾಸು, ಕಲ್ಕತ್ತ, ಡೆಲ್ಲಿ
ಎಲ್ಲೆಂದರಲ್ಲಿ,
ಕನ್ನಡದ ಉಸಿರಾಡುವೆದೆಗಳಿರುವಲ್ಲಿ
ಕನ್ನಡದ ಸತ್ವಗಳ ಬೀಜ ಚೆಲ್ಲಿ
ತೇರ ಮಿಣಿ ಹಾಸಿರಲು

ಹಿಡಿದುಕೊಳ್ಳಿರೊ ಅದನು
ಎಲ್ಲಿದ್ದರೇನು?
ಕೋಟಿ ಕೈಗಳ ಕೂಟ, ಕೋಟಿ ಕಣ್ಗಳ ನೋಟ
ಕೋಟಿ ಹೃದಯದ ಮಿಲನದಾಟದಲ್ಲಿ
ಎದೆ ಎದೆಯ ಬಿಂದಿಗೆಯ ತುಂಬ ತುಂಬಿರುವಂಥ
ಉತ್ಸಾಹದಭಿಷೇಕ ವಾರಿಯಲ್ಲಿ
ಮುಂದೆ ಬನ್ನಿರೊ ಬನ್ನಿ
ಕವಿ ಮನೋರಥಗಳನು ಬಾಳಬೀದಿಯ ಮೇಲೆ
ಎಳೆಯ ಬನ್ನಿ.

ಕನ್ನಡದ ತಾಯ ಮುಖಬಿಂಬ ನಿಮ್ಮೆದೆಯಲ್ಲಿ ಬಿಂಬಿಸಿರೆ
ನಂಬುಗೆಯ ತುಂಬುಗೈ ನೀಡಬನ್ನಿ.
'ಭುವನೇಶ್ವರೀ ದೇವಿ ರಥವನೇರಿದಳು
ಜಯ್ ರಾಜೇಶ್ವರಿ ಕನ್ನಡಿಗರೊಡತೀ!'

ಓ ಎಳೆಯಿರೋ ಕನ್ನಡದ ತೇರ
ನೀವು ನಿಂತಿರುವಂಥ ನೆಲೆಗಳಿಂದ.
ನಾವೆಲ್ಲರೂ ಒಂದು : ತೇರಳೆವ ಜನರು.
ಆ ಊರೊ, ಈ ಊರೊ; ಹಿಂದೆಯೋ ಮುಂದೆಯೋ
ಎಲ್ಲಿಯೋ ಒಂದು ಕಡೆ ಕೈ ಹಾಕಿದವರು.

❑

* ರಾಷ್ಟ್ರಕವಿಗಳು, 'ಚೈತ್ರ' ನಂ. 867, 18ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.

# ಗುಡಿ ಚರ್ಚು ಮಸೀದಿಗಳ ಬಿಟ್ಟು ಬನ್ನಿ



ಬಡತನವ ಬುಡಮಟ್ಟ ಕೀಳ ಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈ ತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ,
ಆ ಮತದ ಈ ಮತದ ಹಳೆ ಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ ವಿಶ್ವಪಥಕೆ

– ರಾಷ್ಟ್ರಕವಿ ಕುವೆಂಪು

# ನಾವು ಸರ್ಕಾರಿ ಅಧಿಕಾರಿಗಳಲ್ಲ, ಜನ ಸೇವಕರು



ಡಾ. ಶಾಲಿನಿ ರಜನೀಶ್, ಐ.ಎ.ಎಸ್.

ಪಂಚಾಯತ್ ರಾಜ್ ಅಭಿವೃದ್ಧಿ ಅಧಿಕಾರಿಗಳ ಕಾರ್ಯನಿರ್ವಹಣೆಯ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು ತಮ್ಮ ಆಶಯಗಳನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ.

ಸಾಂಸ್ಥಿಕ ಮತ್ತು ರಚನಾತ್ಮಕ ಬದಲಾವಣೆಗಳಿಗೆ ಹಾಗು ಈ ಸಂಬಂಧ ತರುವ ಹೊಸ ಸುಧಾರಣೆಗಳಿಗೆ ನೀಡುವ ಪ್ರಾಮುಖ್ಯತೆಯಷ್ಟೆ ಆದ್ಯತೆಯನ್ನು ಸರ್ಕಾರದಲ್ಲಿ ಕೆಲಸ ನಿರ್ವಹಿಸುವ ಅಧಿಕಾರಿ ಸಿಬ್ಬಂದಿಗಳ ವ್ಯಕ್ತಿಗತ ಬೆಳವಣಿಗೆ ಮತ್ತು ಸುಧಾರಣೆಗೆ ಹೆಚ್ಚು ಒತ್ತು ನೀಡಬಯಸುತ್ತೇನೆ. ಸರ್ಕಾರದ ವಿವಿಧ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ವಿವಿಧ ಸ್ಥರದ ಅಧಿಕಾರಿ ಸಿಬ್ಬಂದಿಗಳು ಅಧಿಕಾರಿಶಾಹಿತನವನ್ನು ಬದಿಗೊತ್ತಿ ನಾವೆಲ್ಲರೂ ಸಾರ್ವಜನಿಕರ ಸೇವೆಗೆ ಮೀಸಲಾದವರು ಮತ್ತು ಜನಸೇವಕರು ಎಂಬ ಮನೋಭಾವವನ್ನು ಅಂತರ್ಗತಗೊಳಿಸಿಕೊಂಡು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮುಂದಾಗಬೇಕೆಂದು ಬಯಸುತ್ತೇನೆ. ಇಂತಹ ಸೇವಾ ಮನೋಭಾವನ್ನು ಅಧಿಕಾರಿ ಸಿಬ್ಬಂದಿಗಳು ತಮ್ಮ ಸೇವಾವಧಿಯವರೆಗೂ ಮೈಗೂಡಿಸಿಕೊಂಡು ಜನಸಾಮಾನ್ಯರ ಪಡಿಪಾಟಲುಗಳಿಗೆ ಹಾಗೂ ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಮುಖಾಮುಖಿಯಾದಾಗ ಅಭಿವೃದ್ಧಿಯ ಸುಧಾರಣೆಗೊಂದು ಅರ್ಥ ಬರುತ್ತದೆ ಮತ್ತು ನಿಜವಾದ ಅಬಿವೃದ್ಧಿ ಸಾಕಾರಗೊಳ್ಳುತ್ತದೆ.

ಜನ ತಂತ್ರ ವ್ಯವಸ್ಥೆಯಲ್ಲಿ ಸಮಕಾಲೀನ ಸಂದರ್ಭದ ವಾಸ್ತವಗಳಿಗೆ ಪಂಚಾಯತ್ ರಾಜ್ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಅಧಿಕಾರಿ, ಸಿಬ್ಬಂದಿಗಳು ಮುಖಾಮುಖಿಯಾಗಿ ಅಭಿವೃದ್ಧಿಯ ಅಭಿಯಾನವನ್ನು ಮುಂದುವರೆಸುವುದು ಯಾವತ್ತಿನ ಅನಿವಾರ್ಯವಾಗಿದೆ. ಜನ ತಾಣಗಳ ಹಾಗೂ ಗ್ರಾಮೀಣ ಜನರ ಅಭ್ಯುದಯಕ್ಕಾಗಿ ಬಡತನ ನಿರ್ಮೂಲನೆ ಹಾಗೂ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿಗದಿತ ಅವಧಿಯಲ್ಲಿ ಅನುಷ್ಠಾನಕ್ಕೆ ತಂದು ಗ್ರಾಮೀಣ ಸ್ಥಳೀಯ ಆಡಳಿತದ ಇರುವಿಕೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಸದೃಢಪಡಿಸುವುದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಮುಖ ಉದ್ದೇಶ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993, 1995 ರಿಂದ ಜಾರಿಯಲ್ಲಿದ್ದು ಮತ್ತು ಪ್ರಕರಣ 5ರ ಪ್ರಕಾರ ಗ್ರಾಮ ಪಂಚಾಯತಿಗಳು ರಚನೆಯಾಗಿರುತ್ತವೆ. ಪ್ರಕರಣ 111ರ ಪ್ರಕಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಪ್ರತಿ ಗ್ರಾಮ ಪಂಚಾಯತಿಗಳಿಗೆ ನೇಮಿಸಲಾಗಿದೆ. ಪ್ರಕರಣ 58ರ ಪ್ರಕಾರ ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ನಿರ್ವಹಿಸಬೇಕಾದ ಪ್ರಕಾರ್ಯಗಳನ್ನು ಗೊತ್ತುಪಡಿಸಲಾಗಿದೆ. ಶೌಚಗೃಹಗಳನ್ನು ಒದಗಿಸುವುದು,

* ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

ನೀರು ಪೂರೈಕೆ ಮಾಡುವುದು, ತೆರಿಗೆಗಳನ್ನು ವಸೂಲಾತಿ ಮಾಡುವುದು, ಪ್ರಾಥಮಿಕ ಶಾಲೆಗೆ ಮಕ್ಕಳ ಹಾಜರಾತಿಯನ್ನು ಖಚಿತಪಡಿಸಿಕೊಳ್ಳುವುದು, ಮಕ್ಕಳಿಗೆ ರೋಗ ನಿರೋಧಕ ಚುಚ್ಚುಮದ್ದುಗಳನ್ನು ನೀಡುವ ಕಾರ್ಯಕ್ರಮ, ನೈರ್ಮಲ್ಯ ವ್ಯವಸ್ಥೆ, ಸಾರ್ವಜನಿಕ ರಸ್ತೆ ನಿರ್ಮಾಣ, ರಸ್ತೆ ದೀಪಗಳನ್ನು ಒದಗಿಸುವುದು, ಜನಗಣತಿ, ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವುದು. ಪಂಚಾಯತಿ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ, ಸುಖ ಸೌಖ್ಯ, ಸೌಕರ್ಯ ಅಥವಾ ಸಾಮಾಜಿಕ ಅಥವಾ ಆರ್ಥಿಕ ಉನ್ನತಿಯನ್ನು ವೃದ್ಧಿಸಲು ಮಾರ್ಗೋಪಾಯಗಳನ್ನು ನಿರ್ಮಿಸುವುದು, ಇತ್ಯಾದಿ...

ಈ ಹಿನ್ನೆಲೆಯಲ್ಲಿ ಪಂಚಾಯಿತಿಗಳನ್ನು ಸಬಲೀಕರಗೊಳಿಸುವ ಸಲುವಾಗಿಯೇ ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯತ್‌ಗೂ ಉತ್ತಮ ಶೈಕ್ಷಣಿಕ ಹಿನ್ನೆಲೆಯುಳ್ಳ 2500 ಉತ್ಸಾಹಿ ಪದವೀಧರರನ್ನು ನೇರ ನೇಮಕಾತಿ ಮೂಲಕ ಹಾಗೂ ಈಗಾಗಲೇ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸೇವಾನುಭವವುಳ್ಳ 1877 ಅನುಭವಿ ಪಂಚಾಯತ್ ಕಾರ್ಯದರ್ಶಿಗಳ ಹುದ್ದೆಗಳಿಗೆ ಬಡ್ತಿ ನೀಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಇಲಾಖೆಯು ಈಗಾಗಲೇ ನೇಮಕ ಮಾಡಿಕೊಂಡು ಕಾರ್ಯಭಾರ ವಹಿಸಿ ಇವರುಗಳಿಂದ ಬಹು ನಿರೀಕ್ಷೆಯನ್ನು ಸರ್ಕಾರವು ಇಟ್ಟುಕೊಂಡಿರುತ್ತದೆ.

ಸರ್ಕಾರದ ಇಂತಹ ಮಹತ್ವಾಕಾಂಕ್ಷಿ ಅಭಿವೃದ್ಧಿಯ ಆಶಯಗಳನ್ನು ಸ್ಥಳೀಯ ಜನ ಪ್ರತಿನಿಧಿಗಳೊಂದಿಗೆ ಬೆರೆತು ಅಭಿವೃದ್ಧಿ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸುವ ಸಲುವಾಗಿ ನಿರ್ದಿಷ್ಟ ಜವಾಬ್ದಾರಿಗಳನ್ನು ಕಾರ್ಯ ಹಂಚಿಕೆ ಮಾಡಿ ನಿಗದಿಗೊಳಿಸಲಾಗಿತ್ತು. ಅದರಲ್ಲೂ ಪ್ರಮುಖವಾಗಿ ಗ್ರಾಮ ಪಂಚಾಯತ್‌ನ ಸಂಪೂರ್ಣ ಆಡಳಿತ, ಹಣಕಾಸು, ಕರ್ತವ್ಯ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ವಹಿಸಲಾಗಿದೆ. ಇದರೊಟ್ಟಿಗೆ ಸ್ಥಳೀಯ ಚುನಾಯಿತ ಪ್ರತಿನಿಧಿಗಳೊಂದಿಗೆ ಸಂಯಮ ಹಾಗೂ ಪಾರದರ್ಶಕವಾಗಿ ಕಾರ್ಯನಿರ್ವಹಿಸುವ ಆಶಾಭಾವನೆಯನ್ನು ಸಹ ಹೊಂದಲಾಗಿತ್ತು. ಆದರೆ ಇತ್ತೀಚಿನ ದಿನಪತ್ರಿಕೆಗಳಲ್ಲಿ ಸರ್ಕಾರದ ಸದಭಿಲಾಷೆಗೆ ವಿರುದ್ಧವಾಗಿ ಕೆಲವು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಹಾಗೂ ಚುನಾಯಿತ ಪ್ರತಿನಿಧಿಗಳ ನಡುವೆ ಸಂಘರ್ಷದ ಘಟನೆಗಳು ವರದಿಯಾಗುತ್ತಿರುವುದು ನಿಜಕ್ಕೂ ವಿಷಾದನೀಯ. ಇಂತಹ ಘಟನೆಗಳು ಮರುಕಳುಹಿಸದಂತೆ ಎಚ್ಚರಿಕೆ ವಹಿಸುವ ಜವಾಬ್ದಾರಿ ಸಂಬಂಧಪಟ್ಟ ಎಲ್ಲಾ ಸ್ತರಗಳ ಚುನಾಯಿತ ಪ್ರತಿನಿಧಿಗಳ ಹಾಗೂ ಅಧಿಕಾರಿಗಳದ್ದಾಗಿರುತ್ತದೆ. ಪರಸ್ಪರ ಸಮನ್ವಯದಿಂದ ಅಧಿಕಾರಿ ಸಿಬ್ಬಂದಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಕೆಲಸ ನಿರ್ವಹಿಸದಿದ್ದಾಗ ಇಡೀ ವಿಕೇಂದ್ರೀಕರಣ ವ್ಯವಸ್ಥೆಯನ್ನು ಸಾರ್ವಜನಿಕರು ಅನುಮಾನದಿಂದ ನೋಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅಲ್ಲದೇ ನಮ್ಮ ವ್ಯವಸ್ಥೆಯನ್ನು ಇತರೇ ರಾಜ್ಯಗಳು ನಕಾರಾತ್ಮಕ ದೃಷ್ಟಿಯಿಂದ ನೋಡುವ ಪರಿಸ್ಥಿತಿಯನ್ನು ನಾವೇ ನಿರ್ಮಿಸಿದಂತಾಗುತ್ತದೆ. ಇಂತಹ ಋಣಾತ್ಮಕ ಪರಿಸ್ಥಿತಿಗೆ ಅವಕಾಶ ಮಾಡಿಕೊಡದೇ ಉತ್ತಮ ಕೆಲಸ ಕಾರ್ಯಗಳನ್ನು ಮಾಡುವುದರ ಮೂಲಕ ಜನ, ಜನ ಪ್ರತಿನಿಧಿಗಳ ಹಾಗೂ ಎಲ್ಲಾ ತರಹದ ಮಾಧ್ಯಮಗಳಿಂದ ಸದಾಭಿಪ್ರಾಯ ವ್ಯಕ್ತವಾಗುವಂತೆ ಮಾಡಲು ಸರ್ಕಾರವು ಬಯಸುತ್ತದೆ.

ಪಂಚಾಯತ್ ರಾಜ್ ವ್ಯವಸ್ಥೆ ನಿಮ್ಮಿಂದ ಅಧಿಕಾರಶಾಹಿ ಅಮಲಿನ ಹಾಗೂ ಕೇಂದ್ರೀಕೃತ ಆಡಳಿತವನ್ನು ನಿಮ್ಮಿಂದ ಬೇಡುವುದಿಲ್ಲ ಹಾಗೂ ನಿರೀಕ್ಷಿಸುವುದಿಲ್ಲ. ನೀವು ಒಬ್ಬ ಯಶಸ್ವಿ ಹಾಗೂ ಅಸಾಧಾರಣ ಅಧಿಕಾರಿಯಾಗುವಲ್ಲಿ ವಿಕೇಂದ್ರೀಕರಣ ಮತ್ತು ಪಾರದರ್ಶಕ ಆಡಳಿತ ತತ್ವಕ್ಕೆ ಬದ್ಧರಾಗಿ ಕಾರ್ಯೋನ್ಮುಖರಾದರೆ ಖಂಡಿತ ನೀವುಗಳು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಯಶಸ್ವಿಯಾಗುತ್ತೀರಿ. ಈ ಮುಖಾ-ಮುಖಿಯಲ್ಲಿ ನೀವುಗಳು ಯಶಸ್ವಿಯಾಗಬೇಕಾದರೆ ನಿಮ್ಮ ಸರಳತೆ, ಸಂಯಮ, ಸಚ್ಚಾರಿತ್ರ್ಯ, ಸಜ್ಜನಿಕೆ ಮತ್ತು ಪಾರದರ್ಶಕ ವ್ಯಕ್ತಿತ್ವ ಹೆಚ್ಚು ಸಹಕಾರಿಯಾಗಲಿದೆ.

ನಿಮ್ಮ ಕೆಲಸ ಸುಗಮವಾಗಿ ಸಾಗಲು ಸರ್ಕಾರ ನೀವು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಪಟ್ಟಿ ಮಾಡಿ ನೀವು ಕೆಲಸ

ನಿರ್ವಹಿಸುವ ಸಂಸ್ಥೆಗಳಿಗೆ ಈಗಾಗಲೇ ತಲುಪಿಸಲಾಗಿದೆ. ಅಲ್ಲದೆ ಅದೇ ಸುತ್ತೋಲೆಯನ್ನು ಕರ್ನಾಟಕ ವಿಕಾಸ ಜೂನ್ 2010ರ ಸಂಚಿಕೆಯ ಪುಟ ಸಂಖ್ಯೆ 46 ಹಾಗೂ 47ರಲ್ಲಿ ನೀಡಲಾಗಿದೆ ಹಾಗೂ ರಾಜ್ಯದ ಎಲ್ಲಾ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅನುಷ್ಠಾನಗೊಳ್ಳುವ ಅಭಿವೃದ್ಧಿ ಯೋಜನೆಗಳ ಪ್ರಗತಿ ಪರಿಶೀಲನೆ ಬಗ್ಗೆ ಅನುಸರಿಸಬೇಕಾದ ವಿಧಿ ವಿಧಾನಗಳು ಹಾಗೂ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳನ್ನೊಳಗೊಂಡ ಸುತ್ತೋಲೆಯನ್ನು ಸಹ ಈ ಸಂಚಿಕೆಯ ಪುಟ ಸಂಖ್ಯೆ 32 ರಲ್ಲಿ ನೀಡಲಾಗಿದೆ. ಈ ಸುತ್ತೋಲೆಗಳನ್ನು ಪಾಲಿಸುವುದರ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಾಧಿಸುವಲ್ಲಿ ಹಾಗೂ ಸರ್ಕಾರದ ಸದುದ್ದೇಶಗಳನ್ನು ಸಫಲಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಒಳ್ಳೆಯ ಆಡಳಿತವನ್ನು ನೀಡಿ ಗ್ರಾಮೀಣ ಪ್ರದೇಶದ ಜನರ ವಿಶ್ವಾಸವನ್ನು ಗಳಿಸುತ್ತೀರೆಂದು ಹಾರೈಸುತ್ತೇನೆ.

ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ (111) ರಂತೆ ಕರ್ತವ್ಯ ನಿರ್ವಹಿಸಲು ತಿದ್ದುಪಡಿಯನ್ನು ತರಲಾಗಿರುತ್ತದೆ. ವಾರ್ಡ್ ಸಭೆಗಳು ಮತ್ತು ಗ್ರಾಮ ಸಭೆಗಳನ್ನು ನಡೆಸುವ ಜವಾಬ್ದಾರಿ ಗ್ರಾಮ ಪಂಚಾಯತಿಗಳ ಶಾಸನಬದ್ಧ ಜವಾಬ್ದಾರಿಯಾಗಿದ್ದು, ಇದನ್ನು ಕಟ್ಟುನಿಟ್ಟಾಗಿ ಪಾಲಿಸಲು ಈಗಾಗಲೇ ಸುತ್ತೋಲೆ ಹಾಗೂ ಸೂಚನೆಗಳ ಮುಖಾಂತರ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳಿಗೆ ತಿಳಿಸಲಾಗಿದೆ. ಅದರಂತೆ, ಪ್ರತಿಯೊಂದು ವಾರ್ಡ್ ಸಭೆ/ಗ್ರಾಮ ಸಭೆಗಳನ್ನು ನಡೆಸುವ ಮುನ್ನ ಸಾಕಷ್ಟು ಪ್ರಚಾರವನ್ನು ನೀಡಿ, ಚರ್ಚಿಸಬೇಕಾಗಿರುವ ವಿಷಯುಗಳೊಂದಿಗೆ ಪಂಚಾಯತಿ ಕಾರ್ಯದರ್ಶಿ ಹಾಗೂ ಇತರೆ ಇಲಾಖಾ ಅಧಿಕಾರಿ/ನೌಕರರು ವಾರ್ಡ್ ಸಭೆ/ಗ್ರಾಮ ಸಭೆಯಲ್ಲಿ ಹಾಜರಿದ್ದು, ಜನಸಾಮಾನ್ಯರಿಗೆ ಮಾಹಿತಿಯನ್ನು ತಿಳಿಸಬೇಕು.

ಸರ್ಕಾರದ ಯೋಜನೆಗಳ ಫಲಶೃತಿಯನ್ನು ಸ್ಥಳೀಯ ಪಂಚಾಯತ್ ಸಂಸ್ಥೆಗಳ ಮೂಲಕ ಗ್ರಾಮೀಣ ಜನತೆಗೆ ಸಕಾಲದಲ್ಲಿ ತಲುಪಿಸುವ ಮಹತ್ವದ ಹೊಣೆಗಾರಿಕೆ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಿಮ್ಮೆಲ್ಲರ ಮೇಲಿದೆ. ಈ ಗುರುತರ ಜವಾಬ್ದಾರಿಯನ್ನು ಅತ್ಯಂತ ಕ್ರಿಯಾಶೀಲವಾಗಿ ನಿಭಾಯಿಸುವುದರ ಜೊತೆಗೆ ಪಾರದರ್ಶಕತೆಗೆ ಹೆಚ್ಚು ಹೆಚ್ಚು ಒತ್ತನ್ನು ನೀಡುತ್ತೀರಿ ಎಂದು ಭಾವಿಸಿದ್ದೇನೆ.

ಸರ್ಕಾರದ ಬಹುತೇಕ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನ ಗೊಳ್ಳುತ್ತಿರುವುದು ಸ್ವಯಂವೇದ್ಯ. ಸ್ಥಳೀಯ ಸಂಸ್ಥೆಗಳ ವಿವಿಧ ಹಂತದ ಚುನಾಯಿತ ಪ್ರತಿನಿಧಿಗಳ, ಜನ ಸಮುದಾಯದ ಪಾಲ್ಗೊಳ್ಳುವಿಕೆಯಲ್ಲಿ ಅಭಿವೃದ್ಧಿ ಯೋಜನೆಗಳು ಅನುಷ್ಠಾನ ಗೊಳ್ಳಬೇಕಾಗಿರುವುದರಿಂದ ಚುನಾಯಿತ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ಸಮನ್ವಯತೆ ಅತ್ಯಂತ ಮುಖ್ಯವಾಗಿರುತ್ತದೆ. ಈ ಪ್ರಕ್ರಿಯೆಯಲ್ಲಿ ತಾವುಗಳೆಲ್ಲರೂ ಸಕ್ರಿಯವಾಗಿ ತೊಡಗಿಸಿ ಕೊಂಡಿದ್ದೀರೆಂದೇ ನನ್ನ ಭಾವನೆ. ಈ ಚಲನಶೀಲ ಪ್ರಕ್ರಿಯೆ ಯಲ್ಲಿ ತಾವೆಲ್ಲರೂ ಇನ್ನೂ ಹೆಚ್ಚಿನ ರೀತಿಯಲ್ಲಿ ಹೊಣೆ ಅರಿತು ಹೊಂದಾಣಿಕೆಯಿಂದ ಕೆಲಸ ನಿರ್ವಹಿಸಿ ಅಭಿವೃದ್ಧಿ ಯೋಜನೆ ಗಳನ್ನು ಜನಪರಗೊಳಿಸುವ ಮೂಲಕ ಇಲಾಖೆಯ ಜೀವಂತಿಕೆ ಯನ್ನು ನೂರ್ಮಡಿಗೊಳಿಸುತ್ತೀರೆಂಬ ಆಶಯ ನನ್ನದು.

❑

ಜಗತ್ತಿನಲ್ಲಿ ಏನು ಬದಲಾವಣೆ ಕಾಣಬೇಕೆಂದು ಬಯಸುತ್ತಿರೋ,
ಆ ಬದಲಾವಣೆಯನ್ನು ಮೊದಲು ನಿಮ್ಮಲ್ಲಿ ತನ್ನಿ.

– ಮಹಾತ್ಮ ಗಾಂಧೀಜಿ

# ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆ : ಅನುಷ್ಠಾನದಲ್ಲಿ ಪಂಚಾಯತಿ ಪದಾಧಿಕಾರಿಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು



**ಪಿ. ಶಿವಶಂಕರ್** *

ಯೋಜನೆ ಬಗ್ಗೆ ಗ್ರಾ.ಪಂ. ಅಧ್ಯಕ್ಷರು ಮತ್ತು ಪಂ.ರಾಜ್ ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯಗಳು ಹಾಗೂ ಹೊಣೆಗಾರಿಗಳ ಬಗ್ಗೆ ಮಾಹಿತಿ ಈ ಲೇಖನದಲ್ಲಿದೆ.

ಪ್ರಜಾಪ್ರಭುತ್ವ ವಿಕೇಂದ್ರೀಕರಣದ ಮೂಲ ಘಟಕಗಳಾದ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಪ್ರಗತಿಪರ ನಿಲುವುಗಳನ್ನು ಹೊಂದಿ, ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬದ್ಧತೆಯಿಂದ ಕಾರ್ಯೋನ್ಮುಖವಾದಾಗ ಗ್ರಾಮಗಳು ಸ್ವಯಂ ಪರಿಪೂರ್ಣ ಹಾಗೂ ಸ್ವಾವಲಂಬಿತನದ ಕಡೆಗೆ ಮುನ್ನಡೆಯುತ್ತವೆ ಹಾಗೂ ಗ್ರಾಮಗಳ ಸಮಗ್ರ ಅಭಿವೃದ್ಧಿಯಿಂದ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ದುಡಿಯುವ ಆಸಕ್ತಿ, ಅವಶ್ಯಕತೆ ಇರುವಂತಹ ಗ್ರಾಮೀಣ ಜನತೆಗೆ ಲಿಂಗ ಭೇದವಿಲ್ಲದೆ ಒಂದು ಕುಟುಂಬಕ್ಕೆ ನೂರು ದಿನಗಳ ಉದ್ಯೋಗ ಒದಗಿಸುವ ಕಾರ್ಯವನ್ನು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಪೂರೈಸುತ್ತದೆ.

ಸಮಕಾಲೀನ ಸಂದರ್ಭದಲ್ಲಿ ಈ ಯೋಜನೆಯ ಉದ್ದೇಶ ಹಾಗೂ ಆಶಯವನ್ನು ಇನ್ನಷ್ಟು ವ್ಯಾಪಕ ಪ್ರಚಾರದ ಮೂಲಕ ಜನರಲ್ಲಿ ಅರಿವು ಮೂಡಿಸುವ ಅನಿವಾರ್ಯ ಜವಾಬ್ದಾರಿ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳ ಮೇಲಿದೆ. ಗ್ರಾಮೀಣ ಜನರ ಅಭಿವೃದ್ಧಿಗಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಪರಿಣಾಮಕಾರಿಯಾಗಿ ಪ್ರಚಾರಪಡಿಸಿ ಕೆಲಸ ಮಾಡುವಂತಾದಾಗ ಪಂಚಾಯತ್ ರಾಜ್ ವ್ಯವಸ್ಥೆಯ ಧ್ಯೇಯೋದ್ದೇಶಗಳು ನೈಜವಾಗಿ ಆಚರಣೆಗೆ ಬರುತ್ತವೆ.

ಈ ಹಿನ್ನೆಲೆಯಲ್ಲಿ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊಂದಿರುವ ಮತ್ತು ಜನರಿಗೆ ಹತ್ತಿರವಾಗಿರುವ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಒಂದಷ್ಟು ಮಾಹಿತಿಯನ್ನು ಈ ಲೇಖನದಲ್ಲಿ ನೀಡುವ ಮೂಲಕ, ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ನಿಮ್ಮನ್ನು ನೀವು ತೊಡಗಿಸಿಕೊಂಡು ಗ್ರಾಮೀಣ ಜನರು ಉದ್ಯೋಗವನ್ನರಸಿ ನಗರ ಪ್ರದೇಶಗಳ ಕಡೆ ವಲಸೆ ಹೋಗುವುದನ್ನು ತಡೆಗಟ್ಟುತ್ತೀರಾ ಎಂದು ಸರ್ಕಾರವು ಆಶಿಸುತ್ತದೆ.

## ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳ ಹೊಣೆಗಾರಿಕೆಗಳು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದ ಪ್ರಕ್ರಿಯೆಯಲ್ಲಿ ಅಧಿಕಾರಿಗಳ ಜವಾಬ್ದಾರಿಯ ಜೊತೆಗೆ ಚುನಾಯಿತ ಪ್ರತಿನಿಧಿಗಳ ಹೊಣೆಗಾರಿಕೆಯೂ ಸಹ ಹೆಚ್ಚಿನದಾಗಿರುತ್ತದೆ. ಹೀಗಾಗಿ ಈ ಮುಂದಿನ ಪಂಚಾಯತಿ ಕಾರ್ಯಕ್ರಮಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಂಡು ಗ್ರಾಮ ಸಭೆಗಳನ್ನು ಕಾಲಬದ್ಧವಾಗಿ ನಡೆಸುವುದು. ಯೋಜನೆಯ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸಲು ಕ್ರಮವಹಿಸು ವುದು. ಕೂಲಿ ಪಾವತಿ ಸಾಮಗ್ರಿಗಳ ಪಾವತಿ ಮತ್ತು ಆಡಳಿತಾತ್ಮಕ ವೆಚ್ಚಗಳನ್ನು ಭರಿಸುವಾಗ ಗ್ರಾಮ ಪಂಚಾಯತಿ ಅಧ್ಯಕ್ಷರುಗಳ ಸಹಿ ಕಡ್ಡಾಯವಾಗಿರುತ್ತದೆ.

* ನಿರ್ದೇಶಕರು, ಎಂ.ಜಿ.ಎನ್.ಆರ್.ಇ.ಜಿ.ಎ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.

ಆದ್ದರಿಂದ ಯೋಜನೆಯನ್ನು ಕಾರ್ಯಗತಗೊಳಿಸು ವಾಗ ಹಣಕಾಸಿನ ಯಾವುದೇ ಅವ್ಯವಹಾರ, ಕರ್ತವ್ಯ ಲೋಪ, ಸ್ವಜನಪಕ್ಷಪಾತ ಎಸಗಿದಲ್ಲಿ ಅವರ ಮೇಲೆ ಸಹ ಕಾನೂನಿನ ಕ್ರಮವನ್ನು ಜರುಗಿಸಬೇಕಾಗುತ್ತದೆ. (ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ 1993 ರ ಪ್ರಕರಣ 286 ಅಡಿಯಲ್ಲಿ ಅಧ್ಯಕ್ಷರುಗಳನ್ನು ಲೋಕ ನೌಕರರೆಂದು ಪರಿಗಣಿಸಲಾಗಿದೆ)

**ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು**

ಸರ್ಕಾರದ ಮಹತ್ವದ ನಿರ್ಧಾರ ಹಾಗೂ ಪಾರದರ್ಶಕ ನೇಮಕಾತಿ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿ ಪಂಚಾಯತಿಗಳ ಅಧಿಕಾರವನ್ನು ವಹಿಸಿಕೊಂಡಿರುವ ಅಭಿವೃದ್ಧಿ ಅಧಿಕಾರಿಗಳು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಬೇಕಾಗಿರುತ್ತದೆ. ಈ ಲೇಖನವು ನಿಮ್ಮ ಈ ಜವಾಬ್ದಾರಿ ಯಶಸ್ವಿಯಾಗಲು ನಿಮಗೆ ನಿಮ್ಮ ಕರ್ತವ್ಯ ಮತ್ತು ಹೊಣೆಗಾರಿಗಳನ್ನು ಪರಿಚಯಿಸುವ ಪ್ರಯತ್ನ ಮಾಡುತ್ತದೆ.

ಕರ್ನಾಟಕ ಸರ್ಕಾರವು ಎಲ್ಲಾ ಕಛೇರಿ ವ್ಯವಹಾರ ಮತ್ತು ಹಣಕಾಸಿನ ವ್ಯವಹಾರಗಳನ್ನು ಎಂಐಎಸ್‌ನಲ್ಲಿ ಅಳವಡಿಸು ವುದನ್ನು 01.04.2009 ರಿಂದ ಕಡ್ಡಾಯಗೊಳಿಸಿದೆ. ನಿರ್ವಹಣಾ ಮಾರ್ಗಸೂಚಿಗಳು 2008ನ್ನು ಸಂಪೂರ್ಣವಾಗಿ ಅನುಷ್ಠಾನ ಗೊಳಿಸುತ್ತಿದೆಯೆಂದು ಸರ್ವೋಚ್ಚ ನ್ಯಾಯಾಲಯಕ್ಕೆ ಮುಚ್ಚಳಿಕೆ ಬರೆದುಕೊಟ್ಟಿದೆ. ಆದ್ದರಿಂದ ಎಲ್ಲಾ ವ್ಯವಹಾರ ಗಳನ್ನು ಈ ಮಾರ್ಗಸೂಚಿಯಂತೆ ನಡೆಸಿ ಎಂಐಎಸ್‌ನಲ್ಲಿ ಅಳವಡಿಸ ತಕ್ಕದ್ದು.

**ಎ) ಯೋಜನೆ ತಯಾರಿಕೆ (planning of works)**

ಆರ್ಥಿಕ ವರ್ಷ ಆರಂಭಕ್ಕಿಂತ ಮೊದಲೆ ಗ್ರಾಮ ಸಭೆಯ ಮುಖಾಂತರ ಕ್ರಿಯಾ ಯೋಜನೆ ತಯಾರಿಸುವುದು ಅಂದರೆ ಕಾಮಗಾರಿಗಳ ಗುಚ್ಛ ತಯಾರಿಸುವುದು (self of projects) ಹಾಗೂ ತಾ.ಪಂ ಮತ್ತು ಜಿ.ಪಂ.ಗಳಿಂದ ಅನುಮೋದನೆ ಪಡೆಯುವುದು. ಕಾಯ್ದೆ ಸೆಕ್ಷನ್ 13, 16, 15 ದಿನಗಳ ಒಳಗೆ ಉದ್ಯೋಗ ಒದಗಿಸುವುದು. (Allotting employment within fifteen days of applications)

**ಬಿ) ಗ್ರಾಮ ಸಭೆಯನ್ನು ಪ್ರತಿವರ್ಷ ಗಾಂಧಿ ಜಯಂತಿ ಅಕ್ಟೋಬರ್ 02 ರಂದು ಪ್ರಾರಂಭಿಸುವುದು.**

ಗ್ರಾಮ ಪಂಚಾಯಿತಿ ಅನುಮೋದಿಸಿ ಅಕ್ಟೋಬರ್ 15 ರೊಳಗೆ ತಾಲ್ಲೂಕು ಪಂಚಾಯಿತಿಗೆ ಸಲ್ಲಿಸುವುದು. ತಾಲ್ಲೂಕು ಪಂಚಾಯಿತಿ ಇದನ್ನು ಕಾಯ್ದೆ ಪ್ರಕಾರ ಪರಿಶೀಲಿಸಿ ನವೆಂಬರ್ 30ರೊಳಗೆ ಜಿಲ್ಲಾ ಪಂಚಾಯತಿಗೆ ಸಲ್ಲಿಸುವುದು. ಜಿಲ್ಲಾ ಪಂಚಾಯತಿಯು ಡಿಸೆಂಬರ್ 31ರೊಳಗೆ ಅನುಮೋದಿಸುವುದು ಹಾಗೂ ಕಾರ್ಮಿಕ ಆಯವ್ಯಯ ಪಟ್ಟಿ ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದು. ಅನುಮೋದಿತ ಕಾಮಗಾರಿಗಳನ್ನು ಕಡ್ಡಾಯವಾಗಿ ಎಂ ಐ ಎಸ್ ನಲ್ಲಿ ದಾಖಲಿಸುವುದು.

**ನೊಂದಾವಣಿ ಮತ್ತು ಜಾಬ್ ಕಾರ್ಡ್ ವಿತರಣೆ**

ನಮೂನೆ 1 ರಿಂದ 9 ನ್ನು ಸರಿಯಾಗಿ ನಿರ್ವಹಿಸುವುದು. ಜಾಬ್ ಕಾರ್ಡ್‌ಗೆ ಛಾಯಾ ಚಿತ್ರಗಳನ್ನು ಅಂಟಿಸುವುದು. ಯಾರದೋ ಜಾಬ್ ಕಾರ್ಡ್‌ಗೆ ಬೇರೆಯವರ ಛಾಯಾ ಚಿತ್ರ ಕಂಡುಬಂದಿದೆ. ಗುತ್ತಿಗೆದಾರರ ಬಳಿ ಜಾಬ್ ಕಾರ್ಡ್‌ಗಳಿರುವುದು ಕಂಡು ಬಂದಿದೆ. ಜಾಬ್ ಕಾರ್ಡ್‌ಗಳಲ್ಲಿ ಬ್ಯಾಂಕ್ ಅಂಕೌಂಟ್ ಸಂಖ್ಯೆ ಸರಿಯಾಗಿರುವುದಿಲ್ಲ.

**ನೊಂದಾವಣಿ ಮತ್ತು ಜಾಬ್ ಕಾರ್ಡ್ ವಿತರಿಸುವುದು ಮತ್ತು ದಾಖಲೆಗಳ ನಿರ್ವಹಣೆ**

* ನಮೂನೆ–1 ಉದ್ಯೋಗ ಚೀಟಿಗೆ ನೊಂದಣಿ ಅರ್ಜಿ, ಅದಕ್ಕೆ ಸ್ವೀಕೃತಿ ನೀಡುವುದು.
* ನಮೂನೆ–2 ಅರ್ಜಿಗಳ ನೊಂದಣಿ ವಹಿಯನ್ನು ಸರಿಯಾಗಿ ನಿರ್ವಹಿಸುವುದು.
* ನಮೂನೆ–3 ಉದ್ಯೋಗದ ಅಕಾಂಕ್ಷಿಗಳ ಮತ್ತು ಉದ್ಯೋಗದ ವಹಿ ನಿರ್ವಹಿಸುವುದು. ಅದರಲ್ಲಿ ಉದ್ಯೋಗ ನೀಡಿದ ಮತ್ತು ಕೂಲಿ ಪಾವತಿಸಿದ ವಿವರ ದಾಖಲಿಸುವುದು (ಒಳಪುಟಗಳಲ್ಲಿ)
* ನಮೂನೆ–4 ಉದ್ಯೋಗ ಚೀಟಿ (ಉದ್ಯೋಗ ಒದಗಿಸಿದ ವಿವರಗಳನ್ನು ಅದರಲ್ಲಿ ನಮೂದಿಸು ವುದು)
* ನಮೂನೆ–5 ಕಛೇರಿಯಲ್ಲಿ ಉದ್ಯೋಗ ಚೀಟಿ ವಿತರಣಾ ವಹಿಯನ್ನು ನಿರ್ವಹಿಸುವುದು.
* ನಮೂನೆ–6 ಉದ್ಯೋಗಕ್ಕಾಗಿ ಅರ್ಜಿ ಮತ್ತು ಸ್ವೀಕೃತಿ ನೀಡುವುದು.
* ನಮೂನೆ–7 ನಮೂನೆ 6ರ ವಿವರಗಳನ್ನು ನಮೂನೆ 7 ರಲ್ಲಿ ದಾಖಲಿಸುವುದು.
* ನಮೂನೆ–8 ಕೆಲಸಕ್ಕೆ ವರದಿ ಮಾಡಿಕೊಳ್ಳಲು ನೀಡುವ ನೋಟೀಸು
* ನಮೂನೆ–9 ನಮೂನೆ 8 ರ ವಿವರಗಳನ್ನು ಮತ್ತು ನಮೂನೆ 6 ರ ವಿವರಗಳನ್ನು ನಮೂನೆ 9ರಲ್ಲಿ ಸಾರ್ವಜನಿಕ ತಿಳುವಳಿಕೆ ಪ್ರಚಾರಗೊಳಿಸುವುದು.

* ಆಸ್ತಿಗಳ ಪಟ್ಟಿಯನ್ನು ತಯಾರಿಸುವುದು (maintenance of asset register) ಒಂದು ಉದ್ಯೋಗಕ್ಕೆ ಪ್ರತ್ಯೇಕ ಒಂದು ಕಡತ ನಿರ್ವಹಿಸುವುದು.

ಯೋಜನೆಯ ಅನುಷ್ಠಾನದಲ್ಲಿ ಒಂದು ಉದ್ಯೋಗಕ್ಕಾಗಿ ಪ್ರತ್ಯೇಕ ಕಡತ ನಿರ್ವಹಿಸುವಂತೆ ಸರ್ಕಾರದ ಆದೇಶ ಸಂ: ಗ್ರಾಅಪ 204 ಉಖಾಯೋ 2011 ದಿನಾಂಕ : 22.08.2011 ರಲ್ಲಿ ತಿಳಿಸಿದಂತೆ ಅದರಲ್ಲಿ 16 ದಾಖಲೆಗಳನ್ನು ನಿರ್ವಹಿಸುವುದು. ಇದಕ್ಕೆ ಸಂಬಂಧಪಟ್ಟಂತೆ ವಿವರಗಳನ್ನು ಸೆಪ್ಟೆಂಬರ್ 2011 ರ ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ಪೋಟೋ ಆಡಿಟ್ ಶೀಟ್ ಸಹ ನಿರ್ವಹಿಸುವುದು. ಕಾಮಗಾರಿಗಳ ಮುಕ್ತಾಯ ಪ್ರಮಾಣ ನಿಗದಿತ ನಮೂನೆ ಯಲ್ಲಿ ನಿರ್ವಹಿಸುವುದು ಹಾಗು ಅದನ್ನು ಎಂ ಐ ಎಸ್ ನಲ್ಲಿ ದಾಖಲಿಸುವುದು.

### ಪರಿವೀಕ್ಷಣೆ

ಸುತ್ತೋಲೆ ಸಂಖ್ಯೆ ಗ್ರಾಅಪ 204 ಉಖಾಯೋ 2011 ದಿನಾಂಕ : 22.08.2011 ರಲ್ಲಿ ವಿವರಿಸಿದ ತಪಾಸಣೆ ವರದಿ ತಯಾರಿಸಬೇಕಾಗುತ್ತದೆ ಇದನ್ನು ಸಹ ಸೆಪ್ಟೆಂಬರ್ 2011 ರ ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಈ ನಮೂನೆಗಳನ್ನು ಅಭ್ಯಸಿಸಿದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಮಾಹಿತಿ ದೊರೆಯುತ್ತದೆ. ಪರಿವೀಕ್ಷಣಾ ಸಮಯದಲ್ಲಿ ಕಂಡುಬಂದ ನ್ಯೂನ್ಯತೆಗಳು. ಮಾರ್ಗಸೂಚಿಗಳಂತೆ ಕಡತ ನಿರ್ವಹಿಸಿರುವುದಿಲ್ಲ ಉದ್ಯೋಗಕ್ಕಾಗಿ ಅರ್ಜಿ ನಮೂನೆ-6 ಸಹ ಲಭ್ಯ ಇರುವುದಿಲ್ಲ. 3 ಹಂತದ ಪೋಟೋಗಳು ಲಭ್ಯ ಇರುವುದಿಲ್ಲ. ಅಂದಾಜು ಪಟ್ಟಿಗಳಿಗೆ ಸಕ್ರಮ ಪ್ರಾಧಿಕಾರ ದಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಆಗಿರುವುದಿಲ್ಲ. ಗ್ರಾಮಗಳಲ್ಲಿ ಮಾಹಿತಿ ಗೋಡೆ ನಿರ್ಮಿಸಿರು ವುದಿಲ್ಲ ಕಾಮಗಾರಿಗಳ ಸ್ಥಳದಲ್ಲಿ ನಾಮಫಲಕ ಹಾಕಿರು ವುದಿಲ್ಲ. ಉದ್ಯೋಗ ಚೀಟಿಗಳಲ್ಲಿ ಪೋಟೋಗಳು ಮತ್ತು ಬ್ಯಾಂಕ್ ಖಾತೆಗಳು ತಪ್ಪಾಗಿ ನಮೂದಿಸಿರುತ್ತದೆ. ಸಾಮಾಜಿಕ ತಪಾಸಣೆ ನಿರಂತರವಾಗಿ ನಡೆಸಿರುವುದಿಲ್ಲ ಹಾಗೂ ಸಂಬಂಧಪಟ್ಟ ವರದಿಗಳ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ.

### ಪಾರದರ್ಶಕತೆ

ಪ್ರತಿ ಗ್ರಾಮದಲ್ಲಿ ಮಾಹಿತಿ ಗೋಡೆ ಬರಹ ನಿರ್ವಹಿಸಬೇಕು. ಕಾಮಗಾರಿಗಳ ಸ್ಥಳದಲ್ಲಿ ನಾಮಫಲಕ. ಪ್ರತಿ ಆರು ತಿಂಗಳಿಗೊಮ್ಮೆ ಕಡ್ಡಾಯ ಸಾಮಾಜಿಕ ಲೆಕ್ಕ ಪರಿಶೋಧನೆ ಮತ್ತು ಅನುಪಾಲನೆ ಮಾಡುವುದು. ರೋಜ್‌ಗಾರ ದಿವಸ ಆಚರಿಸುವುದು. ಸಾಮಾಜಿಕ ಲೆಕ್ಕ ಪರಿಶೋಧನೆ ಪೋರಂ ರಚಿಸುವುದು. ಕಾಯ್ದೆ, ನಿರ್ವಹಣಾ ಮಾರ್ಗಸೂಚಿಗಳು 2008 ಹಾಗೂ ಇತರೆ ಎಲ್ಲಾ ವಿವರಗಳು www.nrega.nic.in ನಲ್ಲಿ ಲಭ್ಯವಿರುತ್ತವೆ. ಇ-ಮೇಲ್ ಗಳನ್ನು ಮತ್ತು ಅಲರ್ಟ್‌ಗಳನ್ನು ಪ್ರತಿದಿನ ತಪ್ಪದೇ ವೀಕ್ಷಿಸುವ ಪರಿಪಾಠವನ್ನು ರೂಢಿಸಿಕೊಳ್ಳುವುದು. ಜೊತೆಗೆ ಈ ಕೆಳಗಿನ ಕ್ರಮಗಳನ್ನು ಕೂಡ ಅಳವಡಿಸಿಕೊಂಡು ಯೋಜನೆಯನ್ನು ಯಶಸ್ವಿಗೊಳಿಸಲು ಕ್ರಮ ಕೈಗೊಳ್ಳುವುದು.

* ಪ್ರತಿ ಗ್ರಾಮದಲ್ಲಿ ಮಾಹಿತಿ ಗೋಡೆ ಬರಹ ನಿರ್ವಹಿಸಬೇಕು.
* ಕಾಮಗಾರಿಗಳ ಸ್ಥಳದಲ್ಲಿ ನಾಮಫಲಕ
* ಸಾಮಾಜಿಕ ಲೆಕ್ಕ ಪರಿಶೋಧನೆ ಪೋರಂ ರಚಿಸುವುದು.
* ಪ್ರತಿ ಆರು ತಿಂಗಳಿಗೊಮ್ಮೆ ಕಡ್ಡಾಯ ಸಾಮಾಜಿಕ ಲೆಕ್ಕ ಪರಿಶೋಧನೆ ನಡೆಸುವುದು ಮತ್ತು ಅದರ ವರದಿಗಳ ಬಗ್ಗೆ ಅನುಪಾಲನೆ ಕ್ರಮವಹಿಸುವುದು.
* ರೋಜ್‌ಗಾರ ದಿವಸ ಆಚರಿಸುವುದು.
* ಕಾಯ್ದೆ, ನಿರ್ವಹಣಾ ಮಾರ್ಗಸೂಚಿಗಳು 2008 ಹಾಗೂ ಇತರೆ ಎಲ್ಲಾ ವಿವರಗಳು www.nrega.nic.in ನಲ್ಲಿ ಲಭ್ಯವಿರುತ್ತವೆ.
* ಪಿಡಿಓ ಗಳು ಇ-ಮೇಲ್‌ಗಳನ್ನು ಹೊಂದಿರಬೇಕು ಹಾಗೂ ಅದರ ವಹಿವರ ಜಿಲ್ಲಾ ಪಂಚಾಯತ್ ಎಮ್.ಐ.ಎಸ್ ಸಂಯೋಜಕರಿಗೆ ಒದಗಿಸಬೇಕು ಮತ್ತು ಅಲರ್ಟ್ ಗಳನ್ನು ಪ್ರತಿದಿನ ತಪ್ಪದೇ ವೀಕ್ಷಿಸುವ ಪರಿಪಾಠವನ್ನು ರೂಢಿಸಿಕೊಳ್ಳುವುದು.

ಈ ಎಲ್ಲಾ ಗುರುತರ ಕರ್ತವ್ಯ ಹಾಗೂ ಹೊಣೆಗಾರಿಕೆ ಗಳನ್ನು ಪಂಚಾಯತಿಗಳ ಅಧ್ಯಕ್ಷರು ಹಾಗೂ ಅಭಿವೃದ್ಧಿ ಅಧಿಕಾರಿಗಳು ಸಮನ್ವಯ, ಸಹಕಾರದ ನೆಲೆಯಲ್ಲಿ ನಿರ್ವಹಿಸುವುದು. ಯಾವುದೇ ಅವ್ಯವಹಾರ ಹಾಗೂ ಭ್ರಷ್ಟಾಚಾರಕ್ಕೆ ಆಸ್ಪದ ನೀಡದೆ ಪಾರದರ್ಶಕತೆ ಯನ್ನು ತಮ್ಮ ಆಡಳಿತದಲ್ಲಿ ಅಳವಡಿಸಿಕೊಳ್ಳಲು ಸೂಚಿಸಿದೆ. ಸರ್ಕಾರದ ಕಾರ್ಯಕ್ರಮಗಳನ್ನು ನೀತಿ ನಿಯಮಗಳಿಗೆ ವಿರುದ್ಧವಾಗಿ ನಡೆದು ಯೋಜನೆಯ ಅನುದಾನವನ್ನು ದುರುಪಯೋಗ ಪಡಿಸಿಕೊಂಡಲ್ಲಿ ಕಾನೂನಿನ ಶಿಸ್ತು ಕ್ರಮಕ್ಕೆ ಒಳಗಾಗ ಬೇಕಾಗಿರುತ್ತದೆ. ಇಂತಹ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಯೋಜನೆಯ ಫಲಶೃತಿಯನ್ನು ಅರ್ಹರಿಗೆ ತಲುಪಿಸಿ ಜನಮಾನಸದಲ್ಲಿ ನಿಮ್ಮ ನೆನಪುಗಳು ಚಿರಸ್ಥಾಯಿಯಾಗು ವಂತೆ ಮಾಡುವಲ್ಲಿ ಕಾರಣರಾಗುತ್ತೀರೆಂಬ ಆಶಯ ಸರ್ಕಾರದ್ದಾಗಿದೆ. ಉಳಿದ ಹುದ್ದೆಗಳನ್ನು ಸಹ ಶೀಘ್ರ ತುಂಬುವ ಪ್ರಕ್ರಿಯೆ ಚಾಲನೆಯಲ್ಲಿದೆ.

❑

ಲೇಖನ

# ಪ್ರಗತಿ




**ಶಿವಯೋಗಿ. ಚ. ಕಳಸದ** *


ಪ್ರಗತಿ ಹೆಸರಿನ ಸಾಮಾನ್ಯ ಸೇವೆಗಳ ಕೇಂದ್ರವನ್ನು ಸರ್ವರಿಗೂ ಸಮಾನ ಆದ್ಯತೆ ತತ್ವದ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ತರಲಾಗಿದೆ.

ರಾಷ್ಟ್ರೀಯ ಇ–ಆಡಳಿತ ಯೋಜನೆಯ ಅಂಗವಾಗಿ, ರಾಜ್ಯ ಸರ್ಕಾರದ ಪ್ರೋತ್ಸಾಹ ಮತ್ತು ಸಹಾಯದೊಂದಿಗೆ ತುಮಕೂರು ಜಿಲ್ಲೆಯ ಗುಬ್ಬಿ ತಾಲೂಕಿನ 15 ಗ್ರಾಮ ಪಂಚಾಯತಿಗಳಲ್ಲಿ ನಡೆಯುತ್ತಿರುವ ವಿಶಿಷ್ಟ ಪ್ರಯೋಗವಾಗಿದೆ.

ಪ್ರಗತಿ ಸಾಮಾನ್ಯ ಸೇವೆಗಳ ಕೇಂದ್ರಗಳು ಸರ್ಕಾರದ ಎಲ್ಲ ಯೋಜನೆಗಳ ಮಾಹಿತಿಯನ್ನು ಮತ್ತು ವಿವಿಧ ಇಲಾಖೆಗಳ ಸೇವೆಗಳನ್ನು ಸಮರ್ಪಕವಾಗಿ ಗ್ರಾಮೀಣ ಜನತೆಗೆ ತಲುಪಿಸುವತ್ತ, ಪ್ರಗತಿ ಸಾಮಾನ್ಯ ಸೇವೆಗಳ ಕೇಂದ್ರಗಳು ಪ್ರಾಯೋಗಿಕವಾಗಿ ಗುಬ್ಬಿ ತಾಲೂಕಿನ 15 ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ.

ಮೇಲ್ನೋಟಕ್ಕೆ 'ನೆಮ್ಮದಿ' ಕೇಂದ್ರಗಳಂತೆ ಕಂಡರೂ, ಪ್ರಗತಿ ಕೇಂದ್ರಗಳು ತಮ್ಮದೇ ವಿಶಿಷ್ಟತೆಯನ್ನು ಹೊಂದಿವೆ. ಹಲವಾರು ಸೇವೆಗಳನ್ನು ಒಂದೇ ಸೂರಿನಡಿಯಲ್ಲಿ ಒದಗಿಸುವ ಜವಾಬ್ದಾರಿಯನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್, ಬೆಂಗಳೂರು ಮತ್ತು ಇತರ ಖಾಸಗಿ ವಲಯದ ಸಂಸ್ಥೆಗಳ ಸಹಕಾರದೊಂದಿಗೆ ನಿರ್ವಹಿಸಲಾಗುತ್ತಿದೆ.

### ಈ ಕಾರ್ಯಕ್ರಮದಡಿ

1. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ
2. ಕಂದಾಯ ಇಲಾಖೆ
3. ಕೃಷಿ ಇಲಾಖೆ
4. ಶಿಕ್ಷಣ ಇಲಾಖೆ
5. ತೋಟಗಾರಿಕೆ ಇಲಾಖೆಗಳ
6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಕೆಳಕಂಡ ಮಾಹಿತಿಗಳನ್ನು ನೀಡಲಾಗುತ್ತಿದೆ

### ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್ ಇಲಾಖೆ

* 'ಪಂಚತಂತ್ರ' ತತ್ರಾಂಶ ಸಮನ್ವಯ:– ಪಂಚಾಯಿತಿ ಆಡಳಿತ ಮತ್ತು ಇತರ ಕಾರ್ಯಕ್ರಮಗಳ ಸಂಪೂರ್ಣ ಗಣಕೀಕರಣ ಮತ್ತು ಉಸ್ತುವಾರಿ.
* ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಮಾಹಿತಿಗಳ (ಆಡಳಿತ, ಹಣಕಾಸು ಇತ್ಯಾದಿ) ಸಂಪೂರ್ಣ ಗಣಕೀಕರಣ ಮತ್ತು ಉಸ್ತುವಾರಿ.
* ಗ್ರಾಮ ಪಂಚಾಯಿತಿಯಲ್ಲಿ ಅನುಷ್ಠಾನಗೊಳ್ಳುವ ಇತರೇ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಯೋಜನೆಗಳು.

### ಕಂದಾಯ ಇಲಾಖೆ

ಇಲಾಖೆಯಿಂದ ನಿಗದಿತವಾದ ಪಹಣಿ ವಿತರಣೆ ಮತ್ತು ಆರ್.ಡಿ.ಎಸ್ ಗೆ ಸಂಬಂಧಿಸಿದ ಎಲ್ಲ 42 ಸೇವೆಗಳು


* ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು.

**ಶಿಕ್ಷಣ ಇಲಾಖೆ**

* ಇಲಾಖೆಯಿಂದ ಜಾರಿಯಾಗುವ ಎಲ್ಲ ಕಾರ್ಯಕ್ರಮ ಗಳ ಮಾಹಿತಿ ವಿತರಣೆ, ತರಬೇತಿ, ವಿವಿಧ ಅರ್ಜಿಗಳು ಮತ್ತು ದಾಖಲಾತಿ ಸೌಲಭ್ಯಗಳು
* ಸೆಟೆಲೈಟ್ ಆಧಾರಿತ ಶಿಕ್ಷಣ, ತರಬೇತಿ

**ಕೃಷಿ ಇಲಾಖೆ**

ರೈತ ಸಂಪರ್ಕ ಕೇಂದ್ರ, ಕೃಷಿ ವಿಜ್ಞಾನ ಕೇಂದ್ರ ಗಳೊಂದಿಗೆ ಸಂಪರ್ಕ, ಕೃಷಿ ಕಾರ್ಯಕ್ಕೆ ಸಂಬಂಧಿಸಿದ ಮಾಹಿತಿಗಳು, ಬೀಜ, ಗೊಬ್ಬರ, ಉಪಕರಣಗಳು, ಕೃಷಿ ಉತ್ಪನ್ನಗಳ ಬೆಲೆಗಳು – ಮಾರಾಟ, ಕೀಟನಾಶಕಗಳು ಇತ್ಯಾದಿ ಸೌಲಭ್ಯಗಳು

ತೋಟಗಾರಿಕಾ ಇಲಾಖೆ, ಸಮಾಜ ಕಲ್ಯಾಣ ಇಲಾಖೆಯ ವಿವರಗಳು ಸಹ ದೊರೆಯುತ್ತವೆ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

ಟೆಲಿ ಮೇಡಿಷನ್ ಸೇವೆಯನ್ನು ನೀಡಲಾಗುತ್ತಿದೆ.

**ಪ್ರಗತಿ ಕೇಂದ್ರಗಳ ವಿವರ – ಪ್ರಗತಿ ಕೇಂದ್ರಗಳು ಕೆಳಕಂಡಂತಿವೆ.**

ಬಿದರೆ, ನಲ್ಲೂರು, ಹೊಸಕೆರೆ, ಅಳಿಲಘಟ್ಟ, ಎಂ.ಎನ್.ಕೋಟೆ, ತ್ಯಾಗಟೂರು, ದೊಡ್ಡಗುಣಿ, ಮಾವಿನಹಳ್ಳಿ, ಚೆಂಗಾಂ, ಬೆಳವತ್ತ, ಪೆದ್ದನಹಳ್ಳಿ, ಕೊಪ್ಪ, ಕುನ್ನಾಲ, ಮಾರಶೆಟ್ಟಿಹಳ್ಳಿ, ಕಲ್ಲೂರು ಗ್ರಾಮ ಪಂಚಾಯತ್ ಕೇಂದ್ರ ಸ್ಥಾನದಲ್ಲಿ ನಿರ್ವಹಿಸುತ್ತಿದೆ.

**ಜಿಲ್ಲಾ ಪಂಚಾಯತ್, ತುಮಕೂರು ಇದರ ಪಾತ್ರ**

* ಪ್ರಗತಿ ಕೇಂದ್ರ ನಡೆಸಲು ಸೂಕ್ತ ಕಟ್ಟಡದ ವ್ಯವಸ್ಥೆ ಮಾಡುವುದು.
* ಪ್ರಗತಿ ಕೇಂದ್ರಗಳಲ್ಲಿ ಸೇವೆಗಳಿಗೆ ಅವಶ್ಯವಾಗಿ ಬೇಕಾಗಿರುವ ಮೂಲಭೂತ ಸೌಕರ್ಯಕ್ಕಾಗಿ ಪೀಠೋಪಕರಣಗಳನ್ನು ವ್ಯವಸ್ಥೆ ಮಾಡುವುದು.
* ಪ್ರಗತಿ ಕೇಂದ್ರಗಳಲ್ಲಿ ಅಂತರ್ಜಾಲ ಮುಖಾಂತರ ಗಣಕೀಕರಣಗೊಳಿಸಲು ತಗಲುವ ವೆಚ್ಚವನ್ನು ಭರಿಸಿ ನಿರಂತರವಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು.
* ಇ–ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರದಿಂದ ನೀಡುವ ಸೂಚನೆ ಮತ್ತು ಮಾರ್ಗದರ್ಶನದಂತೆ ಪ್ರಗತಿ ಕೇಂದ್ರಗಳ ಕಾರ್ಯ ನಿರ್ವಹಣೆಗೆ ಸಹಕಾರ ನೀಡುವುದು.

**ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ಸ್ಥಳ ಧೃಡೀಕರಣ ವ್ಯವಸ್ಥೆ**

ಪ್ರಗತಿಯ ಕಾರ್ಯಕರ್ತರು ಗ್ರಾ.ಪಂ. ಅಧಿಕಾರಿಗಳು ಮತ್ತು ಫಲಾನುಭವಿಯೊಂದಿಗೆ ಸ್ಥಳ ಪರಿಶೀಲನೆಗೆ ಜಿ.ಪಿ.ಎಸ್ ಯಂತ್ರದೊಂದಿಗೆ ತೆರಳುತ್ತಾರೆ. ಕಾಮಗಾರಿಗೆ ಸಂಬಂಧಪಟ್ಟ ಮಾಹಿತಿಯನ್ನು ಕಡತದಲ್ಲಿದ್ದಂತೆ ಜಿ.ಪಿ.ಎಸ್ ಯಂತ್ರದಲ್ಲಿಯೇ ದಾಖಲಿಸಿದ ನಂತರ ಸ್ಥಳದ ಫೋಟೊ (ಫಲಾನುಭವಿಯೊಂದಿಗೆ) ತೆಗೆಯಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸ್ಥಳದ ಅಕ್ಷಾಂಶ ಮತ್ತು ರೇಖಾಂಶ, ಪರಿಶೀಲನೆಯ ದಿನ ಮತ್ತು ವೇಳೆ ಫೋಟೊದೊಂದಿಗೆ ಖಾಯಂ ಆಗಿ ಸೇರಿಕೊಳ್ಳುತ್ತದೆ. ಸಂಗ್ರಹಿಸಿದ ಮಾಹಿತಿ ಯನ್ನು ಜಿ.ಪಿ.ಎಸ್ ಯಂತ್ರದಿಂದ ಅಂತರ್ಜಾಲದ ಮೂಲಕ ಕೇಂದ್ರೀಕೃತ ಗಣಕ ಕೇಂದ್ರಕ್ಕೆ ರವಾನಿಸಲಾಗುತ್ತಿದ್ದು, ಕೇಂದ್ರೀಕೃತ ಗಣಕಕೇಂದ್ರದಲ್ಲಿನ ಜಿ.ಆಯ್.ಎಸ್ ತತ್ರಾಂಶವು ಅಂತರ್ಜಾಲದ ಮುಖಾಂತರ ಸ್ವೀಕರಿಸಿದ ಮಾಹಿತಿಯನ್ನು ನಕಾಶೆಯನ್ನಾಗಿ ಪರಿವರ್ತಿಸಿ ಸ್ಥಳದ ಫೋಟೊದೊಂದಿಗೆ ದಾಖಲಿಸಲಾಗುತ್ತಿದೆ. ಜಿ.ಪಿ.ಎಸ್ ಯಂತ್ರದಿಂದ ಕಾಮಗಾರಿ ಕ್ಷೇತ್ರದ ಅಳತೆಯನ್ನು ಸ್ಥಳದಲ್ಲಿಯೇ ಮಾಡಿರುವುದರಿಂದ ಮತ್ತು ಸ್ಥಳದ ಪರಿಮಿತಿಯ ಅಕ್ಷಾಂಶ ಮತ್ತು ರೇಖಾಂಶಗಳು ಆಗಲೇ ದಾಖಲೆಯಾಗಿರುವುದರಿಂದ ಜಿ.ಆಯ್.ಎಸ್ ತತ್ರಾಂಶವು ನಕಲೀ ಫೋಟೊವನ್ನಾಗಲೀ ಅಥವಾ ಇನ್ನಾವುದೇ ದಾಖಲೆಗಳನ್ನು ಸದರೀ ಕಾಮಗಾರಿಯ ಮಾಹಿತಿಯೊದಿಗೆ ಸೇರಿಸಲು ಸಾಧ್ಯವಿರುವುದಿಲ್ಲ.

**ಸೆಟೆಲೈಟ್ ಆಧಾರಿತ ಶಿಕ್ಷಣ, ತರಬೇತಿ**

ಪ್ರಗತಿ ಕೇಂದ್ರಗಳಲ್ಲಿ ಸೆಟೆಲೈಟ್ ಆಧಾರಿತ ಶಿಕ್ಷಣ, ತರಬೇತಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಯುತ್ತಿದ್ದು ಗ್ರಾಮೀಣ ವಿದ್ಯಾರ್ಥಿಗಳಿಗೆ ಕೈಗೊಳ್ಳಲಾಗುತ್ತಿದೆ. ಸೆಟೆಲೈಟ್ ಆಧಾರಿತ ತರಗತಿಗಳು ಸಧ್ಯದಲ್ಲಿ ಪ್ರಗತಿ ಕೇಂದ್ರದಲ್ಲಿ ನಡೆಯುತ್ತಿದ್ದು, ಮಂದಿನ ದಿನಗಳಲ್ಲಿ ಆಯಾ ಶಾಲೆಗಳಲ್ಲಿ ಜರುಗಿಸುವ ಕಾರ್ಯ ಪ್ರಗತಿಯಲ್ಲಿದೆ ಈ ಸಂಬಂಧ ಆಯಾ ಶಾಲೆಗಳ ಪ್ರಾಂಶುಪಾಲರು/ ಮುಖ್ಯಾಧ್ಯಾಪಕರೊಡನೆ ಸಮಾಲೋಚನೆ ನಡೆಸಲಾಗಿದೆ ಯೋಜಿತ ಕಾರ್ಯಕ್ಕೆ ಅನುಮತಿ ಮತ್ತು ಸಹಕಾರ ದೊರೆತಿದ್ದು ಸೆಟೆಲೈಟ್ ಆಧಾರಿತ ಶಿಕ್ಷಣ ನಿರಾತಂಕವಾಗಿ ನಡೆಯುತ್ತಿವೆ.

**ಟೆಲಿ ಮೆಡಿಸಿನ್ ಸೇವೆ**

ಗ್ರಾಮೀಣ ಭಾಗದ ನಿಗಧಿತ ವೇಳೆಯಲ್ಲಿ ತ್ವರಿತಗತಿ ಆರೋಗ್ಯ ತಪಾಸಣೆ ಮಾಡುವುದು ಮುಖ್ಯ ಉದ್ದೇಶ ವಾಗಿರುತ್ತದೆ. ಗ್ರಾಮೀಣ ಭಾಗದ ರೋಗಿಗಳಿಗೆ ದೂರದ ನುರಿತ ವೈದ್ಯರಿಂದ ಸೂಕ್ತ ಸಲಹೆ ಹಾಗೂ ವೈದ್ಯಕೀಯ ಶಿಫಾರಸ್ಸನ್ನು ವ್ಯವಸ್ಥೆ ಮಾಡಿಸುವುದು. ರೋಗಿಗಳಿಗೆ ನುರಿತ ತಜ್ಞ ವೈದ್ಯರಿಂದ General Medicine, Thoracic, Pulmonary Gynaec, Pediatirc etc., ಸೇವೆಗಳನ್ನು ಒದಗಿಸುವುದು. ಪ್ರಗತಿ ಕೇಂದ್ರಗಳಲ್ಲಿ ಉನ್ನತ ಶ್ರೇಣಿಯ ಉಪಕರಣಗಳನ್ನು ಅಳವಡಿಸುವ ವ್ಯವಸ್ಥೆ ಮಾಡಲಾಗಿದ್ದು, ಸ್ಥಳೀಯ ವೈದ್ಯಾಧಿಕಾರಿಗಳಿಂದ ಪರೀಕ್ಷೆ ವೇಳೆಯನ್ನು ನಿಗಧಿಪಡಿಸಿ ಗ್ರಾಮೀಣ ಭಾಗದ ಜನರಿಗೆ ಸೌಲಭ್ಯ ದೊರೆಯಲು ಸೂಕ್ತ ವ್ಯವಸ್ಥೆ ಮಾಡಿ ಕಾರ್ಯಕ್ರಮ ಯಶಸ್ವಿಗೊಳಿಸಲಾಗಿದೆ. ❑

# ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕ ಬದಲಾವಣೆಯತ್ತ ಪಂಚಾಯತಿಗಳ ಆಡಳಿತ



ಡಾ. ಕೆ.ಎನ್. ವಿಜಯ ಪ್ರಕಾಶ್ *

ಶಿಸ್ತು, ಕ್ರಮಬದ್ಧತೆ, ಪಾರದರ್ಶಕತೆ ಹಾಗೂ ಸಹಕಾರ ಯಾವುದೇ ಆಡಳಿತದ ಅವಿಭಾಜ್ಯ ಅಂಗವಾಗಿದ್ದಲ್ಲಿ ಅಂತಹ ಆಡಳಿತದಿಂದ ಕ್ರಿಯಾತ್ಮಕ ಫಲಿತಾಂಶಗಳನ್ನು ನಾವು ಕಾಣಬಹುದು. ಇದನ್ನು ಮನಗೊಂಡು ನಮ್ಮ ಜಿಲ್ಲಾ ಪಂಚಾಯತಿಯ ಎಲ್ಲಾ ಗ್ರಾಮಪಂಚಾಯತ್ ಕಾರ್ಯಾಲಗಳಲ್ಲಿ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಅಲ್ಲದೆ ಹೊಸದಾಗಿ ನೇಮಕವಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವಿಧ್ಯಾನುಭವ, ಸಮಯ ಪ್ರಜ್ಞೆ, ಕಾರ್ಯದಲ್ಲಿನ ಹುಮ್ಮಸ್ಸು ಹಾಗೂ ಗಣಕ ಯಂತ್ರಗಳ ಉಪಯೋಗದ ಅನುಭವ ಇರುವುದರಿಂದಾಗಿ ಗ್ರಾಮ ಪಂಚಾಯತ್‌ನಲ್ಲಿ ಒಂದು ಬಗೆಯ ಶಿಸ್ತು ಉಂಟಾಗುತ್ತಿದೆ. ಪಾರದರ್ಶಕತೆ ಅಧಿನಿಯಮವನ್ನು ಸಮರ್ಪಕವಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005 ನ್ನು ಸಮರ್ಪಕವಾಗಿ ಮನದಟ್ಟು ಮಾಡಿ ಕೊಂಡಿರುವ ಪಿ.ಡಿ.ಒ. ಗಳು ಪಾರದರ್ಶಕವಾಗಿ ಗ್ರಾಮ ಪಂಚಾಯತಿಯ ಆಡಳಿತ ವ್ಯವಹಾರವನ್ನು ನಿರ್ವಹಿಸುತ್ತಿರುವುದು ಸ್ಪಷ್ಟಗೊಂಡಿದೆ. ಗ್ರಾಮ ಪಂಚಾಯತ್ ಹಂತದಲ್ಲಿ ಪಿ.ಡಿ.ಒ. ಗಳ ನೇಮಕದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭ್ರಷ್ಟಾಚಾರ ಬಹುಪಾಲು ನಿರ್ಮೂಲನಗೊಂಡು ಪಾರದರ್ಶಕ ಆಡಳಿತಕ್ಕೆ ನಾಂದಿಯಾಗಿ ಉತ್ತಮ ಕಾರ್ಯಕ್ರಮಗಳನ್ನು ಜನರಿಗೆ

> ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ನೇಮಕದಿಂದ ಪಾರದರ್ಶಕ ಆಡಳಿತಕ್ಕೆ ಹೆಚ್ಚು ಒತ್ತು ನೀಡಲಾಗಿದೆ.



* ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ.



ನೀಡುವಲ್ಲಿ ಕಾರಣವಾಗಿದೆ. ಜನರ ಸಮಸ್ಯೆಗಳನ್ನು ಸರಿಯಾಗಿ ಹಾಗೂ ಶೀಘ್ರವಾಗಿ ಅರ್ಥ ಮಾಡಿಕೊಳ್ಳುವ ಪಿ.ಡಿ.ಒ. ಗಳು ಅವರ ಸಮಸ್ಯೆಯನ್ನು ಮೂಲದಿಂದ ಬಗೆಹರಿಸಲು ಶೀಘ್ರ ಪ್ರಯತ್ನ ನಡೆಸುತ್ತಿದ್ದಾರೆ. ಸರಕಾರದಿಂದ/ ಜಿಲ್ಲಾ ಪಂಚಾಯತಿಯಿಂದ ಬರುವ ಆದೇಶಗಳು/ ಸುತ್ತೋಲೆಗಳು/ಕಾನೂನು ಕಟ್ಟಳೆಗಳು, ಕಾಯಿದೆಗಳನ್ನು ಶೀಘ್ರವಾಗಿ ಹಾಗೂ ಸಮರ್ಪಕವಾಗಿ ಅರ್ಥೈಸಿಕೊಳ್ಳಬಲ್ಲ ಸಾಮರ್ಥ್ಯ ಹೊಂದಿರುವ ಇವರು ಯೋಜನೆಗಳ ಅನುಷ್ಠಾನವನ್ನು ಶೀಘ್ರವಾಗಿ ಮಾಡಬೇಕೆಂಬ ಬಯಕೆ ಹೊಂದಿರುವುದು ಸಕಾರಾತ್ಮಕ ಜನಮುಖಿ ಆಡಳಿತಕ್ಕೆ ನಾಂದಿಯಾಗಿದೆ.

ವಿದ್ಯುನ್ಮಾನ ಆಡಳಿತದ (e-Governance) ಬಗ್ಗೆ ಸಾಕಷ್ಟು ಪರಿಣತಿ ಹೊಂದಿರುವ ಇವರುಗಳು ಪಂಚತಂತ್ರ ತಂತ್ರಾಂಶದಲ್ಲಿ ಗ್ರಾಮ ಪಂಚಾಯತ್‌ನ ಎಲ್ಲಾ ಆಸ್ತಿ, ಬಾಕಿ ವಸೂಲಾತಿ, ಲೆಕ್ಕ ಪತ್ರಗಳ ದಾಖಲೆಗಳು, ಪಂಚಾುತಿಗಳ ಇತ್ಯಾದಿ ಅವಶ್ಯ ಮಾಹಿತಿಯನ್ನು ದಾಖಲಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಇದರಿಂದಾಗಿ ಗ್ರಾಮ ಪಂಚಾಯತಿಯಲ್ಲಿ ಎಲ್ಲಾ ಮಾಹಿತಿಗಳು ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ಸುಲಭವಾಗಿ ಲಭ್ಯವಾಗುತ್ತಿವೆ. ಈ ಹಿಂದೆ ವಿವಿಧ ಇಲಾಖೆಗಳ ನಡುವೆ ಇದ್ದಂತಹ ಸಮನ್ವಯತೆ ಮತ್ತಷ್ಟು ಉತ್ತಮಗೊಂಡು ಯೋಜನೆಗಳ ಅನುಷ್ಠಾನ ಸುಲಭ ಸಾಧ್ಯವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಸಾಧಿಸಿದ ಸಂಪೂರ್ಣ ನೈರ್ಮಲ್ಯ ಯೋಜನೆಯ ಶೇಕಡ 100 ರಷ್ಟು ಅನುಷ್ಠಾನವನ್ನು ಕಾಯ್ದುಕೊಳ್ಳುವಲ್ಲಿ ಮತ್ತು ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿಘಟಕ ಸ್ಥಾಪಿಸಿ ನಿರ್ವಹಣೆಯಲ್ಲಿ ನಿರಂತರತೆಯನ್ನು ಕಾಯ್ದುಕೊಳ್ಳುವಲ್ಲಿ ಜನರ ಮತ್ತು ಜನಪ್ರತಿನಿಧಿಗಳೊಂದಿಗೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಪಾತ್ರ ಪ್ರಮುಖವಾಗಿದೆ. ಗ್ರಾಮ ಪಂಚಾಯಿತಿಗಳು ಗ್ರಾಮೀಣ ಜನರ ಸೇವೆಗಾಗಿ ಸದಾ ತೆರೆದಿದ್ದು, ಗ್ರಾಮಸ್ಥರಿಗೆ ಹತ್ತಿರವಾಗುತ್ತಿವೆ





ಒಟ್ಟಾರೆ ಹೇಳಬೇಕೆಂದಾದರೆ, ಉತ್ತಮ ವಿದ್ಯಾರ್ಹತೆ ಉಳ್ಳ ಯುವ ಸಮುದಾಯದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕದಿಂದಾಗಿ ಆಡಳಿತದಲ್ಲಿ ಹೊಸತನದೊಂದಿಗೆ ಬದಲಾವಣೆಯ ಗಾಳಿ ಬೀಸುತ್ತಿದೆ ಎಂದರೆ ತಪ್ಪಾಗಲಾರದು. ❑




# ಅಭಿವೃದ್ಧಿಯಲ್ಲಿ ನಾಗರಿಕ ಸನ್ನದಿನ ಪಾತ್ರ ಹಾಗೂ ರಾಮನಗರದ ಅನುಭವ



**ಡಾ. ಸಿದ್ಧರಾಮಯ್ಯ** *

> ನಾಗರಿಕರಿಗೆ ಸಕಾಲದಲ್ಲಿ ನಾಗರಿಕ ಸನ್ನದನ್ನು ಪ್ರಕಟಿಸುವ ಮೂಲಕ ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯುವಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾರಣರಾಗಿದ್ದಾರೆ.

ಕರ್ನಾಟಕ ರಾಜ್ಯದ ಗಣನೀಯ ಪ್ರಮಾಣದ ಜನಸಂಖ್ಯೆಯು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಇವರೆಲ್ಲರ ಜೀವನ ಗುಣಮಟ್ಟವನ್ನು ಆರ್ಥಿಕ ಹಾಗು ಸಾಮಾಜಿಕ ನೆಲೆಯಲ್ಲಿ ಗಣನೀಯವಾಗಿ ಹೆಚ್ಚಿಸುವುದೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಮುಖ ಧ್ಯೇಯವಾಗಿದೆ. ಇದನ್ನು ಸಾಧಿಸುವ ನಿಟ್ಟಿನಲ್ಲಿ ಕರ್ನಾಟಕ ಪಂಚಾಯತ್ ಅಧಿನಿಯಮ ಜಾರಿಗೆ ತರಲಾಗಿದ್ದು ಅದರನ್ವಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ವಿವಿಧ ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನ ಮಾಡಲಾಗುತ್ತಿದೆ. ಮೂರು ಹಂತದ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಮೂಲಕ ಜಾರಿಗೆ ತರಲಾಗುತ್ತಿರುವ ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಜನತೆಗೆ ವಿವಿಧ ಮಾಧ್ಯಮಗಳ ಮೂಲಕ ಪರಿಚಯ ಮಾಡಿಕೊಡಲಾಗುತ್ತದೆ. ಆದಾಗ್ಯೂ ನಿರೀಕ್ಷಿತ ಪ್ರಮಾಣದಲ್ಲಿ ಆಗದೇ ಇರುವುದನ್ನು ಗಮನಿಸಿ ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳು ಮತ್ತು ಪಿಂಚಣಿ ಮಂತ್ರಾಲಯವು ದಿನಾಂಕ 30.07.2004ರಲ್ಲಿ ಸೂಚನೆಯನ್ನು ಅನುಸರಿಸಿ ಸರ್ಕಾರದ ಕಾರ್ಯಕ್ರಮಗಳ ಮಾಹಿತಿಯನ್ನು ಜನತೆಗೆ ಪರಿಚಯಿಸಿಕೊಡಲು ಕಡ್ಡಾಯವಾಗಿ ಕಚೇರಿಗಳ ಮುಂದೆ ಎಲ್ಲಾ ಅಭಿವೃದ್ಧಿ ಯೋಜನೆಗಳ ಮಾಹಿತಿಯನ್ನು ಪ್ರಕಟಿಸಬೇಕಾಗಿದೆ.

ಈ ಹಿನ್ನೆಲೆಯಲ್ಲಿ ರಾಮನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ನಾಗರಿಕರಿಗೆ ಸಕಾಲದಲ್ಲಿ ನಾಗರಿಕ ಸನ್ನದನ್ನು ಪ್ರಕಟಿಸುವ ಮೂಲಕ ಅಭಿವೃದ್ಧಿಗೆ ಹೊಸ ಭಾಷ್ಯ ಬರೆಯುವಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಕಾರಣರಾಗಿದ್ದಾರೆ. ಅದರಂತೆ ಕಾರ್ಯೋನ್ಮುಖರಾಗಿ ಜನರಿಗೆ ಹತ್ತಿರವಾಗುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಅದರ ಅನುಭವವನ್ನು ಈ ಕೆಳಗಿನಂತೆ ನೀಡಲಾಗಿದೆ.

* ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿತ್ಯ ಕಛೇರಿಯಲ್ಲಿ ಲಭ್ಯವಿದ್ದು ಅಗತ್ಯ ಮಾಹಿತಿಗಳನ್ನು ಆಗಿಂದ್ದಾಗೆ ನೀಡುವಂತಾಗಿದೆ. ವ್ಯತ್ಯಯಗಳು ಉಂಟಾದಾಗ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಕಾರ್ಯಪ್ರವೃತ್ತರಾಗಿ ಸಮಸ್ಯೆಯನ್ನು ಬಗೆಹರಿಸುವಂತಾಗಿದೆ.
* ಏಕ ಮುಖವಾಗಿ ಅಭಿವೃದ್ಧಿ ಯೋಜನೆಗಳಾಗಲಿ, ಸೇವೆಗಳಾಗಲಿ ಸಾಗುತ್ತಿಲ್ಲ. ಸಾಮಾನ್ಯ ಸಭೆಗಳಲ್ಲಿ ಯೋಜನೆ/ಸೇವೆ ಅನುಷ್ಠಾನ ಮಾಡುವಾಗ ಸಮನಾಗಿ ಹಂಚಿಕೊಂಡು ಏಕ ಮುಖವಾಗಿ ಸಾಗುವಂತೆ ನೋಡಿಕೊಳ್ಳುತ್ತಾರೆ. ಈ ಬಗ್ಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ನಿಯಮಾನುಸಾರ ಸೂಚನೆಗಳನ್ನು ನೀಡಿ ಕ್ರಮಬದ್ಧವಾಗಿ ಅನುಷ್ಠಾನ ಮಾಡುವಲ್ಲಿ ಶ್ರಮಿಸುತ್ತಾರೆ. ಆದ್ಯತೆ ಮೇಲೆ ಅನುಷ್ಠಾನಗೊಳಿಸಲು ಸಲಹೆಗಳನ್ನು ನೀಡುತ್ತಾರೆ.
* ವಿಳಂಬಕ್ಕೆ ಆಸ್ಪದ ಇಲ್ಲದೆ ತ್ವರಿತ ಸೇವೆಯನ್ನು ಪಾರದರ್ಶಕ ನಿಯಮಾನುಸಾರ ನೀಡಲಾಗುತ್ತಿದೆ. ಫಲಾನುಭವಿಗಳ ಆಯ್ಕೆಯನ್ನು ನಿಯಮಾನುಸಾರ ಗ್ರಾಮ ಸಭೆಯಲ್ಲಿ ಆಯ್ಕೆ ಮಾಡಿ ಪ್ರಕಟಣೆ ಮಾಡಲಾಗುತ್ತಿದೆ. ಯೋಜನೆಗಳನ್ನು ಸರ್ಕಾರದ ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಿ, ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗುತ್ತಿದೆ.

ಯಾವುದೇ ಸರ್ಕಾರಿ ಕಾರ್ಯಕ್ರಮಗಳ ಫಲಶೃತಿ ಅರ್ಹರಿಗೆ ಸಕಾಲದಲ್ಲಿ ತಲುಪಿದಾಗ ಸರ್ಕಾರದ ಉದ್ದೇಶ ಸಾರ್ಥಕವಾಗುತ್ತದೆ. ಹಾಗೂ ಜನರಿಗೆ ಸರ್ಕಾರಿ ಸಂಸ್ಥೆಗಳ ಬಗ್ಗೆ ಗೌರವಭಾವನೆ ಮೂಡುತ್ತದೆ. ಹಾಗಾಗಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಸಿಬ್ಬಂದಿಗಳು ಸಮನ್ವಯತೆಯಿಂದ ಕೆಲಸ ಮಾಡಬೇಕಾದ ಅನಿವಾರ್ಯ ಮುಂದಿನ ಎಲ್ಲಾ ಕಾಲಘಟ್ಟಗಳಲ್ಲೂ ಅಗತ್ಯವಿದೆ. ❑

* ಉಪಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ರಾಮನಗರ.

# ಬೆಳಗಾವಿ ಜಿಲ್ಲೆಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಯಶೋಗಾಥೆ



**ಟಿ.ಎಂ. ಶಶಿಧರ್** *

ಬೆಳಗಾವಿ ಜಿಲ್ಲೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕದಿಂದಾಗಿ ಸಾಧಿಸಲಾಗಿರುವ ಕೆಲವು ಅಂಶಗಳನ್ನು ಇಲ್ಲಿ ನೀಡಲಾಗಿದೆ.

ವಿಕೇಂದ್ರೀಕರಣ ಮೂಲ ತತ್ವದ ಹಿನ್ನೆಲೆಯಲ್ಲಿ ಸ್ಥಳೀಯ ಸರ್ಕಾರಗಳ ಮೂಲ ಕೇಂದ್ರವಾದ ಗ್ರಾಮ ಪಂಚಾಯತ್‌ಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮತ್ತು ವಿದೇಶಿ ನೆರವಿನ ಯೋಜನೆಗಳಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದ ಮಹಾಪೂರವೆ ಹರಿದು ಬರುತ್ತಿದೆ. ಗ್ರಾಮ ಪಂಚಾಯತ್‌ಗಳಿಗೆ ಹಲವಾರು ಆಡಳಿತ ಪ್ರಕಾರ್ಯಗಳನ್ನು ಹಂಚಿಕೆ ಮಾಡಿ ಸಂಬಂಧಪಟ್ಟ ಅನುದಾನಗಳ ನಿರ್ವಹಣೆ, ಹೊಣೆಗಾರಿಕೆ ಹಾಗೂ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಜಾರಿಗೊಳಿಸುವ ಹಿನ್ನೆಲೆಯಲ್ಲಿ ಹಾಗೂ ಆಡಳಿತಾತ್ಮಕ ಸಾಮರ್ಥ್ಯವನ್ನು ಉತ್ತಮಪಡಿಸುವ ಸಲುವಾಗಿ ಸರ್ಕಾರವು ಅಧೀಕ್ಷಕ ದರ್ಜೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಗ್ರಾಮ ಪಂಚಾಯತಿಗಳಿಗೆ ನೇಮಕ ಮಾಡಿದೆ. ತನ್ಮೂಲಕ ಸ್ಥಳೀಯ ಆಡಳಿತ ಯಂತ್ರವನ್ನು ಇನ್ನಷ್ಟು ಕ್ರಿಯಾಶೀಲಗೊಳಿಸಿ ಸಮಗ್ರ ಗ್ರಾಮೀಣಾಭಿವೃದ್ಧಿಯ ಆಶಯವನ್ನು ಹೊಂದಿದೆ. ಈ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ನೇಮಕದಿಂದಾಗಿ ಸಾಧಿಸಲಾಗಿರುವ ಕೆಲವು ಅಂಶಗಳನ್ನು ಇಲ್ಲಿ ನೀಡಲಾಗಿದೆ.

ಜಿಲ್ಲೆಯ ಗ್ರಾಮ ಪಂಚಾಯತ್‌ಗಳಲ್ಲಿ ವಸತಿ ಯೋಜನೆಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಕೇವಲ ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿ ಫಲಾನುಭವಿಗಳ ಪಟ್ಟಿಯನ್ನು ಸಿದ್ದಪಡಿಸಲಾಗುತ್ತಿತ್ತು. ಗ್ರಾಮ ಪಂಚಾಯತಿಗಳಿಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾಗಿ ನೇಮಕಗೊಂಡ ನಂತರ 2011–12 ನೇ ಸಾಲಿನ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲ ಬೇರುಗಳಾದ ಗ್ರಾಮ ಸಭೆಗಳನ್ನು ನಡೆಸಿ ಗದ್ದಲದ ನಡುವೆಯೂ ಶೇ. 60 ರಷ್ಟು ಸರಿಯಾದ ಫಲಾನುಭವಿಗಳನ್ನೇ ಸಮರ್ಪಕವಾಗಿ ಆಯ್ಕೆ ಮಾಡಿರುವದನ್ನು ಗ್ರಾಮಸ್ಥರೇ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ.

ಇದುವರೆವಿಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಸುತ್ತಿದ್ದ ಅಂಗಡಿ ಮುಂಗಟ್ಟುಗಳಿಗೆ ಪರವಾನಗಿ ನೀಡದೇ ಹಾಗೆಯೇ ನಡೆಸಲಾಗುತ್ತಿತ್ತು. ಆದರೆ ಇಂದು ಪ್ರತಿಯೊಬ್ಬರೂ ಪಂಚಾಯತಿಯಲ್ಲಿ ದೊರೆಯುವ ಪರವಾನಗಿಯನ್ನು ಕಡ್ಡಾಯವಾಗಿ ಪಡೆಯುವಂತೆ ಯೋಜನೆ ರೂಪಿಸಿದ್ದಲ್ಲದೆ, ವಾರ್ಷಿಕವಾಗಿ ಎಲ್ಲರಿಗೂ ಅವರವರ ವ್ಯಾಪಾರ ವಹಿವಾಟಿಗೆ ಸಂಬಂಧಿಸಿದಂತೆ ನಾಗರೀಕ ಸನ್ನದ್ದನ್ನು ರೂಪಿಸಿ ನಡೆಸುತ್ತಿರುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಕ್ರಿಯಾಶೀಲತೆಗೆ ಸಾಕ್ಷಿಯಾಗಿದೆ.

ಅಲ್ಲದೆ ಇದುವರೆವಿಗೂ ಸಮಿತಿಗಳು ಮತ್ತು ಉಪ ಸಮಿತಿಗಳ ಸದಸ್ಯರ ಹೆಸರನ್ನು ಗೋಡೆ ಬರಹದ ರೂಪದಲ್ಲಿ ಬರೆಸದೇ ಇದ್ದು ಪ್ರಸ್ತುತ ಪಂಚಾಯತಿಗಳಲ್ಲಿ ಗೋಡೆ ಬರಹದಲ್ಲಿ ಕಡ್ಡಾಯವಾಗಿ ಸಮಿತಿ ಸದಸ್ಯರುಗಳ ಹೆಸರುಗಳನ್ನು ಬರೆಸುತ್ತಿರುವುದು ಜನರಿಗೆ ಸಂತೋಷ ತಂದಿದೆ.

ಈ ಹಿಂದೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆ, ಅಂಗನವಾಡಿಗಳು, ಬಾಲಕ/ಬಾಲಕಿಯರ ವಸತಿ ನಿಲಯಗಳಿಗೆ ಪಂಚಾಯತಿ ಅಭಿವೃದ್ಧಿ

* ಉಪ ಕಾರ್ಯದರ್ಶಿಗಳು (ಅಭಿವೃದ್ಧಿ) ಜಿಲ್ಲಾ ಪಂಚಾಯತ್, ಬೆಳಗಾವಿ

ಅಧಿಕಾರಿಗಳು ಕನಿಷ್ಠ ತಿಂಗಳಿಗೊಮ್ಮೆಯಾದರೂ ಬಾರಿ ಭೇಟಿ ನೀಡಿ ಕುಂದುಕೊರತೆಗಳಿಗೆ ಪರಿಹಾರೋಪಾಯವಾಗಿ ಸೂಕ್ತ ಸಲಹೆ ನೀಡುತ್ತಾ ಬಂದಿರುವುದು ಬೇರೆ ಇಲಾಖೆಯ ಸಿಬ್ಬಂದಿಗಳು ಹಾಗೂ ಅಧಿಕಾರಿಗಳಿಗೆ ಮಾದರಿಯಾಗಿದೆ.

ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮ ನೈರ್ಮಲ್ಯ ಮತ್ತು ಸ್ವಚ್ಛತೆಯ ಬಗ್ಗೆ ಹೆಚ್ಚು ಒತ್ತು ನೀಡಿ ನೈರ್ಮಲ್ಯ ಸಮಿತಿಯ ಸದಸ್ಯರನ್ನು ವಾರಕ್ಕೆ ಒಂದು ಬಾರಿಯಾದರೂ ಅಂಗನವಾಡಿ ಮತ್ತು ಶಾಲೆಗಳಿಗೆ ಕಳುಹಿಸಿ ಮಾಹಿತಿ ಪಡೆಯಲಾಗುತ್ತಿದೆ. ಸಂಪೂರ್ಣ ಸ್ವಚ್ಛತಾ ಆಂದೋಲನ ಹಾಗೂ ಗ್ರಾಮ ಲೋಕಶಿಕ್ಷಣ ಸಮಿತಿಗಳ ಕಾರ್ಯಕ್ರಮದಡಿ ವೈಯಕ್ತಿಕ ಶೌಚಾಲಯಗಳು ಹಾಗೂ ಫಲಾನುಭವಿಗಳ ಸಮರ್ಪಕ ಆಯ್ಕೆ ಮಾಡಿರುವುದರಿಂದ ಶೌಚಾಲಯುಗಳ ಸಂಖ್ಯೆಗಳು ಹೆಚ್ಚಾಗಿರುವುದನ್ನು ಗಮನಿಸಬಹುದಾಗಿದೆ.

ಗ್ರಾಮೀಣ ಜನರ ಕನಿಷ್ಠ ಮೂಲ ಭೂತ ಸೌಕರ್ಯಗಳಿಗೆ ಸಂಬಂಧಿಸಿದಂತೆ ದಿನದಲ್ಲಿ ಸಾಯಂಕಾಲ 3 ರಿಂದ 5 ಗಂಟೆಗಳ ಅವಧಿಯಲ್ಲಿ ನೇರವಾಗಿ ಚರ್ಚಿಸಿ ಅವರುಗಳ ನಿರೀಕ್ಷೆಗೆ ಸ್ಪಂದಿಸಲಾಗುತ್ತಿದೆ. ಕಟ್ಟಡ ಪರವಾನಗಿ, ಸಾಮಾನ್ಯ ಮಾಹಿತಿ ಪಡೆಯುವುದು, ಇನ್ನಿತರ ಕೆಲಸಗಳಿಗೆ ನಾಗರಿಕ ಸನ್ನದ್ಧಿನಲ್ಲಿರುವ ಪಟ್ಟಿಯಂತೆ ರಶೀದಿ ನೀಡುತ್ತಿರುವುದು ಜನರಿಗೆ ಸಂತೋಷ ತಂದಿರುತ್ತದೆ. ಪೋಲಾಗುತ್ತಿದ್ದ ಲಕ್ಷಗಟ್ಟಲೇ ನಾಗರಿಕರ ಹಣ ಗ್ರಾಮ ಪಂಚಾಯತಿಯ ಖಜಾನೆ ಸೇರಿದೆ. ಇತ್ತೀಚಿನ ಬೆಳವಣಿಗೆಯಂತೆ ಬೀದಿ ದೀಪಗಳ ಆಟೋ ಆನ್ ಅಂಡ್ ಆಫ್ ವ್ಯವಸ್ಥಿತಗೊಳಿಸಿ, ನಿಗಧಿತ ಸಮಯಕ್ಕೆ ಬೆಳಕನ್ನು ನೀಡಿ ಅನಗತ್ಯವಾಗಿ ಬರುತ್ತಿದ್ದ ವಿದ್ಯುತ್‌ಶಕ್ತಿ ಬಿಲ್ಲಿನ ಹೆಚ್ಚುವರಿ ಮೊತ್ತ ಕಡಿಮೆಗೊಳಿಸಿದ್ದು ಯಶೋಗಾಥೆ ಎನ್ನಬಹುದು.

ಗ್ರಾಮ ಪಂಚಾಯತಿಗಳ ಸರ್ವೆ ಮಾಡಿ ಅನಧಿಕೃತವಾಗಿ ನೀರಿನ ಪಂಪಸೆಟ್ ಹಾಗೂ ಬೀದಿದೀಪಗಳಿಗೆ ಕಡಿವಾಣ ಹಾಕಿ ಎಲ್ಲ ಅನಧಿಕೃತ ಜೋಡಣೆಗಳನ್ನು ನಿಯಮಾವಳಿಗಳಂತೆ ಹಣಕಟ್ಟಿ ಅಧಿಕೃತಗೊಳಿಸಿರುವುದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಪಟ್ಟ ಶ್ರಮದ ಫಲವಾಗಿದೆ. ಕರ ವಸೂಲಾತಿಯಲ್ಲಿ ಗಣನೀಯ ಪ್ರಮಾಣದಲ್ಲಿ ಬದಲಾವಣೆಯಾಗಿದ್ದು, ಪಂಚಾಯತಿಯ ಇನ್ನಿತರ ಆದಾಯಗಳನ್ನು ಹೆಚ್ಚುಗೊಳಿಸಿರುವುದು ಒಂದು ಉತ್ತಮ ಸಾಧನೆ, ಅದರಲ್ಲೂ ಗಾಳಿ ಯಂತ್ರಗಳಿಗೆ (WIND POWER) ಹೆಚ್ಚಿನ ಕರ ವಸೂಲಿ ಮಾಡುವುದು ಹಾಗೂ ಮೊಬೈಲ್ ಟವರ್‌ಗಳಿಗೆ ಕರ ನಿರ್ಧರಿಸಿರುವುದು ಪಂಚಾಯತ್‌ಗಳು ಹೊಸ ಬದಲಾವಣೆಗೆ ಒಡ್ಡಿಕೊಂಡಿರುವುದನ್ನು ಗುರುತಿಸಬಹುದಾಗಿದೆ

**ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಮತ್ತು ಸೇವೆಗಳನ್ನು ನಾಗರಿಕರಿಗೆ ನೀಡುವಲ್ಲಿ ಅಳವಡಿಸಿಕೊಂಡಿರುವ ವಿನೂತನ ಮಾದರಿಗಳು :**

ನಾಗರೀಕ ಸನ್ನದ್ದನ್ನು ಪಂಚಾಯತಿಯ ಗೋಡೆ ಬರಹದ ರೂಪದಲ್ಲಿ ಬರೆಸಿರುವುದು ಹಾಗೂ ಫಲಾನುಭವಿಗಳ ಗುರುತಿಸುವಿಕೆಯನ್ನೂ ನಾಗರೀಕ ಸನ್ನದ್ದಿನಲ್ಲಿ ಪ್ರಸ್ತಾಪಿಸಿ ಚುನಾಯಿತ ಪ್ರತಿನಿಧಿಗಳಿಗೂ ಅದರ ಅರಿವನ್ನು ಮೂಡಿಸ ಲಾಗುತ್ತಿದೆ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಮಿತವ್ಯಯದ ಬಗ್ಗೆ ಹೆಚ್ಚು ಗಮನಹರಿಸಿ, ಸಮಯಕ್ಕೆ ತಕ್ಕಂತೆ ಪಂಪ್ ಆಪರೇಟರಿಗೆ ಕಡ್ಡಾಯವಾಗಿ ನೀರನ್ನು ಬಿಡುವಂತೆ ಮಾರ್ಗ ಸೂಚಿ ನೀಡಿರುವುದು ಮತ್ತು ಕ್ಲೋರಿನೇಷನ್‌ಗೆ ಸಂಬಂಧಿಸಿದಂತೆ ಪ್ರತಿ ವಾರಕ್ಕೊಮ್ಮೆ ಖುದ್ದಾಗಿ ವೀಕ್ಷಿಸಿ ಇನ್ನಿತರೇ ಸಲಹೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಡೆಯಲಾಗುತ್ತಿದೆ. ಲೋಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರೇರಕರೊಟ್ಟಿಗಿದ್ದು ಮನೆ ಮನೆಗಳಿಗೆ ತೆರಳಿ ಶಿಕ್ಷಣದ ಅರಿವನ್ನು ಮೂಡಿಸಲಾಗುತ್ತಿದೆ. ಯೋಜನೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಊರಿನ ಉದ್ದಗಲಕ್ಕೂ ಬರೆಯಿಸಿ ಪಂಚಾಯತಿಗೆ ಬಂದವರಿಗೂ ಅದರ ಬಗ್ಗೆ ಹೆಚ್ಚು ತಿಳುವಳಿಕೆ ನೀಡಲಾಗುತ್ತಿದೆ. ಗ್ರಾಮ ಮಟ್ಟದಲ್ಲಿ ಇಂದು ಅನುಷ್ಠಾನಗೊಳ್ಳುತ್ತಿರುವ ಹಲವಾರು ಯೋಜನೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಮುಖ್ಯವಾಗಿವೆ. ಇವುಗಳ ಅರಿವಿಗಾಗಿ ಆಗಾಗ್ಗೆ ಸರ್ಕಾರಿ ಅಧಿಕಾರಿಗಳಿಗೆ, ಚುನಾಯಿತ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಗ್ರಾಮದ ನಾಗರಿಕರ ಜೊತೆಗೇ ಗ್ರಾಮದಲ್ಲಿಯೇ ತರಬೇತಿ ನಡೆಸಲು ಕ್ರಮಕೈಗೊಳ್ಳಲಾಗುತ್ತಿದೆ.

ಕೇಂದ್ರ ಸರ್ಕಾರದ ಯೋಜನೆಗಳಲ್ಲಿ ಹೆಚ್ಚು ಜನಪ್ರಿಯವಾಗಿರುವ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಯಂತಹ ಕಾರ್ಯಕ್ರಮಕ್ಕೆ ಹೆಚ್ಚಿನ ಅರಿವನ್ನು ಚುನಾಯಿತ ಪ್ರತಿನಿಧಿ ಗಳಿಗೆ ತರಬೇತಿ ಅಥವಾ ಇನ್ನಿತರೇ ಕಾರ್ಯಕ್ರಮಗಳ ಮೂಲಕ ಮನದಟ್ಟು ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ. ಒಟ್ಟಾರೆ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ಸಿಬ್ಬಂದಿಗಳು ಪರಸ್ಪರ ಸಹಕಾರ ಹಾಗೂ ಸೇವಾ ಮನೋಭಾವನೆಯೊಂದಿಗೆ ಕೆಲಸ ನಿರ್ವಹಿಸಿದಲ್ಲಿ ಗಾಂಧೀಜಿಯವರು ಕಂಡ ಗ್ರಾಮ ಸ್ವರಾಜ್ ಕನಸು ನನಸಾಗು ವುದರಲ್ಲಿ ಯಾವುದೇ ಸಂಶಯವಿರುವುದಿಲ್ಲ.

❑

# ಕನ್ನಡ ನಾಡು–ನುಡಿ–ಸಂಸ್ಕೃತಿ



ಎಂ.ಓ. ನಾಗರಾಜ್, ಕೆ.ಎ.ಎಸ್. *

ಕನ್ನಡ ರಾಜ್ಯೋತ್ಸವದ ಈ ಶುಭ ಸಂದರ್ಭದಲ್ಲಿ ಕನ್ನಡ ನಾಡು–ನುಡಿ ಸಂಸ್ಕೃತಿಯ ಬಗ್ಗೆ ಒಂದು ಕಿರು ಚಿತ್ರಣ ಈ ಲೇಖನದಲ್ಲಿದೆ.

ಕನ್ನಡಿಗರೆಲ್ಲರ ಅಭಿಮಾನದ ನಾಡಹಬ್ಬವಾದ ಕನ್ನಡ ರಾಜ್ಯೋತ್ಸವಕ್ಕೆ ಈಗ 56ನೇ ವರ್ಷದ ಸಂಭ್ರಮಾಚರಣೆ. ನಮ್ಮ ನಾಡು–ನುಡಿ, ಕಲೆ, ಸಾಹಿತ್ಯ, ಸಂಸ್ಕೃತಿಗಳು ನಡೆದು ಬಂದ ದಾರಿ ಹಾಗೂ ಅವುಗಳ ಭವ್ಯ ಪರಂಪರೆಯನ್ನೊಮ್ಮೆ ಮೆಲುಕು ಹಾಕುವುದು ಪ್ರಸ್ತುತ ಸಂದರ್ಭದ ಅತ್ಯಂತ ಅರ್ಥಪೂರ್ಣ ಅಂಶವೆನಿಸುತ್ತದೆ. ಕರ್ನಾಟಕದ ಪರಂಪರೆ ಅತ್ಯಂತ ಪುರಾತನ ಹಾಗೂ ಭವ್ಯ. ಇದು ತನ್ನ ಒಡಲೊಳಗೆ ಹತ್ತು ಹಲವು ಬಗೆಯ ಸಂಸ್ಕೃತಿ, ಆಚಾರ–ವಿಚಾರ, ಧರ್ಮ ಮತ್ತು ಸಂಪ್ರದಾಯಗಳ ವೈವಿಧ್ಯತೆಯ ಆಗರವನ್ನೆ ತುಂಬಿಕೊಂಡಿದ್ದು, ಅಷ್ಟು ಮಾತ್ರವಲ್ಲ ಈ ನಮ್ಮ ಕನ್ನಡ ನಾಡಿನ ಇನ್ನೊಂದು ಬಹುಮುಖ್ಯ ವೈಶಿಷ್ಟ್ಯವೆಂದರೆ ವಿವಿಧತೆಯಲ್ಲೂ ನಿರಂತರವಾಗಿ ಮೂಡಿಬರುತ್ತಿರುವ ಏಕತೆ. ಇದು ಈ ನಾಡಿನ ಜೀವಾಳವೂ ಹೌದು.

ಕರ್ನಾಟಕದ ಪ್ರಾಚೀನ ಹಾಗೂ ಐತಿಹಾಸಿಕ ಪರಂಪರೆಯನ್ನೊಮ್ಮೆ ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ ಅಲ್ಲಿ ಚೆಲ್ಲಿ ಹೋದ ನೆತ್ತರ ಕಲೆಗಳ ದುರಂತಗಳ ನಡುವೆಯೂ ಥಳಥಳಿಸುವ ಭವ್ಯತೆಯ ನಕ್ಷತ್ರದ ಹರಳುಗಳೂ ಹೇರಳವಾಗಿ ಕಂಡು ಬರುತ್ತವೆ. ಚಲ್ಲಿಹೋದ ನೆತ್ತರ ಕಲೆಗಳ ಬಗ್ಗೆ ಕನ್ನಡಿಗರ ಎದೆಯೊಲ್ಲೊಂದು ವಿಷಾದದ ಛಾಯೆಯಿದ್ದರೂ, ಥಳ ಥಳಿಸುವ ಭವ್ಯತೆಯ ನಕ್ಷತ್ರದ ಹರಳುಗಳ ಬಗ್ಗೆ ಅಭಿಮಾನದ ಬುಗ್ಗೆಯಿದೆ.



ಈ ನಾಡನ್ನು ಆಳಿದ ಮಹಾ ಚಕ್ರವರ್ತಿಗಳ ಆಡಳಿತದಲ್ಲಿ ನಾಡಿನ ಕೀರ್ತಿ ಕಸ್ತೂರಿಯಂತೆ ಜಗತ್ತಿನಾದ್ಯಂತ ಪಸರಿಸಿದೆ. ಕೆಲವೊಮ್ಮೆ ಕಸ್ತೂರಿಯ ಕಂಪು ಆಯಾ ಕಾಲಘಟ್ಟದಲ್ಲಿ ಘಟಿಸಿ ಹೋದ ದುರ್ಘಟನೆಗಳಿಂದಾಗಿ ಸೊರಗಿ ಮಂಕಾದರೂ ತನ್ನತನವನ್ನು ಉಳಿಸಿಕೊಳ್ಳುವಲ್ಲಿ ಎಂದೂ ಹಿಂದೆ ಬಿದ್ದಿಲ್ಲ. ಘನವೆತ್ತ ಸಾಹಸಿಗಳ,

* ಅಪರ ನಿರ್ದೇಶಕರು (ಆಡಳಿತ), ರೇಷ್ಮೆ ನಿರ್ದೇಶನಾಲಯ, ಬಹುಮಹಡಿ ಕಟ್ಟಡ, ಬೆಂಗಳೂರು

ರಾಜ-ಮಹಾರಾಜರ, ದಾರ್ಶನಿಕರ, ಧರ್ಮಸುಧಾರಕರ, ಕವಿವರ್ಯರ, ಸಂತ-ಸತ್ಪುರುಷರ, ಅಪ್ಪಟ ದೇಶಪ್ರೇಮಿಗಳ ಜನ್ಮಭೂಮಿ ಈ ಚೆಲುವ ಕನ್ನಡ ನಾಡು. ಭಾರತದ ಸುವರ್ಣ ಸಂಸ್ಕೃತಿಯ ವಿಶಾಲ ಉದ್ಯಾನದಲ್ಲಿ ರೂಪುಗೊಂಡು ಅರಳಿರುವ ಹಲವಾರು ಸುಂದರ ಕುಸುಮಗಳಲ್ಲಿ ಕನ್ನಡ ಕುಸುಮದ ವಿಶಿಷ್ಟ ಸಂಸ್ಕೃತಿ ಮತ್ತು ಪರಂಪರೆ ನಿಜಕ್ಕೂ ಅನನ್ಯ ಹಾಗೂ ಅಪೂರ್ವ.

ಗಿರಿ ಶಿಖರಗಳ ಗಾಂಭೀರ್ಯ, ನದಿ ಸರೋವರಗಳ ನರ್ತನದ ವೈಯ್ಯಾರ, ವನಸುಮಗಳ ಸೌರಭ ಶೃಂಗಾರ, ಅನರ್ಘ್ಯ ರತ್ನಗಳ ಭಂಡಾರ ಇವೆಲ್ಲವುಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡ ಅಪರೂಪದ ನಾಡು ನಮ್ಮ ಚೆಲುವ ಕನ್ನಡ ನಾಡು. ಈ ನಾಡಿಗೆ ಅನ್ಯದೇಶದ ಬಗ್ಗೆಯಾಗಲಿ, ಅನ್ಯ ಭಾಷೆಯ ಬಗ್ಗೆಯಾಗಲಿ ದ್ವೇಷವಿಲ್ಲ. ಆದಿಕಾಲದಿಂದಲೂ ತನ್ನ ಹಾದಿಯಲ್ಲಿ ಅದೆಷ್ಟೇ ದಕ್ಕೆ ಬಂದರೂ ಇದು ಕುಗ್ಗಲಿಲ್ಲ. ಕೆಲವೊಮ್ಮೆ ಕುಗ್ಗಿದರೂ, ಕೆಲವೊಮ್ಮೆ ಕಳೆದು ಹೋದ ಕಾಲಮಾನದ ನಡುವೆ ಹರಿದು ಹಂಚಿಹೋದರೂ ಮತ್ತೆ ಒಂದಾಗಿ ಮೂಲರೂಪ ಪಡೆದು ನಿಂತ ಅಪೂರ್ವದ ಹಿರಿಮೆಯ ನಾಡು ನಮ್ಮ ಕರ್ನಾಟಕ.

'ಕರ್ನಾಟಕ' ಎಂಬ ಪದದ ಅರ್ಥ ವಿಶಾಲವೂ ಹೌದು. ವಿಶಿಷ್ಟವೂ ಹೌದು. ಇದರಲ್ಲೇ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಗ್ರಾಮೀಣರ ಬದುಕಿನ ಸೊಗಡನ್ನೆಲ್ಲಾ ತೆರೆದಿಟ್ಟ ಜನಪದಗಳೆಲ್ಲ ಅಡಗಿಕೊಂಡಿವೆ. ಕಪ್ಪೆ ಚಿಪ್ಪಿನೊಳಗೆ ಅಡಗಿ ಕುಳಿತ ಹೊಳೆವ ಮುತ್ತಿನಂತೆ, ಕಲಾವಿದನ ಕುಂಚದೊಳಗಿಂದ ಹೊರಹೊಮ್ಮುವ ವಿಶಿಷ್ಟ ಕಲೆಯಂತೆ. ಇಂತಹ ಘನವೆತ್ತ ಖ್ಯಾತಿಯ ನಾಡಿನ ಇತಿಹಾಸ ಇಂದು-ನಿನ್ನೆಯದಲ್ಲ, ಶತಶತಮಾನಗಳಷ್ಟು ಸುದೀರ್ಘವಾದದ್ದು. ಹಾಗೆಯೇ ಕನ್ನಡ ಭಾಷೆಯೂ ಸಹ ಕ್ರಿಸ್ತಪೂರ್ವದಿಂದಲೇ ಇತ್ತೆಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಅದರೂ ಕ್ರಿ.ಶ. 450ರ ಹಲ್ಮಿಡಿ ಶಾಸನವೇ ಕನ್ನಡಕ್ಕೆ ಸಿಕ್ಕ ಮೊತ್ತ ಮೊದಲ ಲಿಖಿತ ದಾಖಲೆ. ಆದರೂ ಲಿಖಿತ ದಾಖಲೆಯಿಲ್ಲವೆಂದ ಮಾತ್ರಕ್ಕೆ ಭಾಷೆಯಿರಲಿಲ್ಲವೆಂದು ಹೇಳಲಾಗದು. ಶತಮಾನಗಳ ಹಿಂದಿನಿಂದಲೂ ಇದ್ದಿರಬಹುದಾದ ಭಾಷೆ ಮತ್ತು ಸಾಹಿತ್ಯದ ಅಸ್ತಿತ್ವದ ಬಗ್ಗೆ ಹಾಗೂ ಓದದೆಯೂ ಕಾವ್ಯವನ್ನು ರಚಿಸಬಲ್ಲ ಜನಪದ ಕವಿಗಳಿದ್ದಾರೆ, ಜನಪದ ಸಾಹಿತ್ಯವಿದೆ ಎಂಬ ನಂಬಿಕೆಗೆ ಪುಷ್ಠಿ ನೀಡುತ್ತದೆ. ಕನ್ನಡ ಭಾಷೆ ಆಡುಭಾಷೆಯಾಗಿ, ಸಾಹಿತ್ಯಿಕ ಭಾಷೆಯಾಗಿ ಹಾಗೂ ರಾಜಭಾಷೆಯಾಗಿಯೂ ಬಹಳ ಹಿಂದಿನಿಂದಲೂ ಬೆಳೆದುಬಂದ ಮಹತ್ವಪೂರ್ಣ ಭಾಷೆಯಾಗಿದೆ.

ಕನ್ನಡ ನಾಡು-ನುಡಿಯ ಬಗ್ಗೆ, ಆಳಿದ ಅರಸರ ಬಗ್ಗೆ ವೈಭವದ ಆಳ್ವಿಕೆಯ ಬಗ್ಗೆ, ಗತಸಾಹಸದ ಬಗ್ಗೆ ದಾಖಲೆ ಯೆಂಬಂತೆ ದೇಗುಲಗಳ ಭಿತ್ತಿಗಳು, ಓಲೆಗರಿಯ ಬರಹಗಳು, ಶಾಸನಗಳ ಸಾಲುಗಳು ಸಾಕ್ಷಿಯಾಗಿ ನಿಂತಿವೆ.

ಶಾತವಾಹನರು, ಕದಂಬರು, ಗಂಗರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರಿನ ಒಡೆಯರು ಇನ್ನೂ ಮುಂತಾದ ವಂಶಗಳ ರಾಜ-ಮಹಾರಾಜರು ಕರ್ನಾಟಕವನ್ನು ಆಳಿದ್ದಾರೆ. ತಮ್ಮದೇ ಆದ ಕೊಡುಗೆಗಳನ್ನೂ ಈ ನಾಡಿಗೆ ನೀಡಿ ಹೋಗಿದ್ದಾರೆ. ಇವರುಗಳ ಆಳ್ವಿಕೆಯಲ್ಲಿ ಒಮ್ಮೊಮ್ಮೆ ಈ ನಾಡು ಕೀರ್ತಿ ಸಾಧನೆಗಳ ವೈಭವದ ಮೇರು ಪರ್ವತದಂತೆ ಶೋಭಿಸಿದರೆ ಕೆಲವೊಮ್ಮೆ ದುರಂತಗಳ ಕಣ್ಣೀರ ಕಥೆಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಕನ್ನಡ ನಾಡನ್ನು ಆಳಿದ ಬಹುತೇಕ ಅರಸರೆಲ್ಲರೂ ಧರ್ಮ, ಸಂಸ್ಕೃತಿ, ಕಲೆ, ಸಾಹಿತ್ಯ, ವಾಸ್ತುಶಿಲ್ಪ ಮುಂತಾದ ಅಮೋಘ ಕೊಡುಗೆಗಳನ್ನು ನೀಡಿ ಹೋಗಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ಧರ್ಮ ಹಾಗು ಸಮಾಜ ಸುಧಾರಕರು ಕಾಲಕಾಲಕ್ಕೆ ಜನ್ಮವೆತ್ತಿ ಸಾಮಾಜಿಕ ಹಾಗೂ ಧಾರ್ಮಿಕ ಸುಧಾರಣೆಗೆ ನಾಂದಿಯಾಗಿದ್ದಾರೆ. ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರರು ಕರ್ನಾಟಕದ ಜನಮನದ ಮೇಲೆ ಹಾಗೂ ಸಂಸ್ಕೃತಿ, ಧರ್ಮಗಳ ಮೇಲೆ ಬೀರಿದ ಪ್ರಭಾವ ಅಭೂತಪೂರ್ವ.

ಇಷ್ಟೊಂದು ಭವ್ಯ ಪರಂಪರೆಯನ್ನು ಹೊಂದಿದ ಕನ್ನಡ ನಾಡು ಕೇವಲ ಪುಟ್ಟ ಪಾಳೆಯಪಟ್ಟಾಗಿರಲಿಲ್ಲ. ವಿಶಾಲ ಸಾಮ್ರಾಜ್ಯವಾಗಿತ್ತು. "ಕಾವೇರಿಯಿಂದ ಗೋದಾವರಿಯವರೆಗೆ ಪಸರಿಸಿದ ನಾಡು" ಎಂಬ ಕೀರ್ತಿಗೆ ಪಾತ್ರವಾದ ಅಂಶ ರಾಷ್ಟ್ರಕೂಟರ ಕಾಲದಲ್ಲಿ ರಚಿತವಾದ 'ಕವಿರಾಜ ಮಾರ್ಗ' ಕೃತಿಯಿಂದ ತಿಳಿದುಬರುತ್ತದೆ. ಆದರೂ ವಿಜಯನಗರ ಸಾಮ್ರಾಜ್ಯದ ಪತನದ ನಂತರ ಸಂಭವಿಸಿದ ದುರ್ಘಟನೆ

ಗಳಿಂದಾಗಿ ಕನ್ನಡ ನಾಡು ತನ್ನ ವಿಶಾಲ ತಳಹದಿಯನ್ನು ಕಳೆದುಕೊಂಡು ಛಿದ್ರಛಿದ್ರವಾಗಿ, ಒಡೆದ ಬೀಡಾಯಿತು. ಕರ್ನಾಟಕ ರಾಜ್ಯವೆಂಬುದು ಹರಿದು ಹಂಚಿ ಹೋಗಿ ಸಣ್ಣಪುಟ್ಟ ರಾಜ್ಯಗಳಾಗಿ, ಪಾಳೆಯ ಪಟ್ಟುಗಳಾಗಿ ಅಸ್ತಿತ್ವಕ್ಕೆ ಬಂದವು. ಈ ಕಾರಣಗಳಿಂದಾಗಿ ಕನ್ನಡಿಗರಿದ್ದರೇ ಹೊರತು ವಿಶಾಲ ಕನ್ನಡ ನಾಡು ಅಸ್ಥಿತ್ವದಲ್ಲಿರಲಿಲ್ಲ. ಇದರ ಪರಿಣಾಮ ಕನ್ನಡದ ಜನತೆ ಹತ್ತು ಹಲವು ಆಡಳಿತದಲ್ಲಿ ಹಂಚಿ ಹೋದರು. ನಂತರದ ಬ್ರಿಟೀಷ್ ಆಡಳಿತವೂ ಸಹ ತನ್ನ ಆಡಳಿತದ ಅನುಕೂಲಕ್ಕೆ ತಕ್ಕಂತೆ ಪ್ರಾಂತ್ಯಗಳನ್ನಾಗಿ ಮಾಡಿಕೊಂಡ ಫಲವಾಗಿ ಕನ್ನಡಿಗರು ಬೇರೆ ಬೇರೆ ಪ್ರಾಂತ್ಯಗಳ ಅಡಿಯಲ್ಲಿರಬೇಕಾಯಿತು. ಆದರೂ ಕನ್ನಡದ ಜನ ತಮ್ಮ ಐಕ್ಯತೆಗಾಗಿ ಹೋರಾಟ ನಡೆಸುತ್ತಲೇ ಬಂದರು.

ಹತ್ತೊಂಬತ್ತನೆ ಶತಮಾನದ ಕೊನೆಯ ಭಾಗ ಹಾಗೂ ಇಪ್ಪತ್ತನೆಯ ಶತಮಾನದ ಮೊದಲರ್ಧ ಭಾಗದಲ್ಲಿ ಕರ್ನಾಟಕದಲ್ಲಿ ನಡೆದ ಎರಡು ಮಹತ್ವಪೂರ್ಣ ಚಳವಳಿಗಳೆಂದರೆ, ಒಂದು ಭಾರತದ ಸ್ವಾತಂತ್ರ್ಯ ಚಳವಳಿ, ಮತ್ತೊಂದು ಕರ್ನಾಟಕದ ಏಕೀಕರಣ ಚಳವಳಿ. ಈ ಎರಡು ಚಳವಳಿಗಳ ಉದ್ದೇಶ ವಿಭಿನ್ನವಾದರೂ ನಡೆದದ್ದು ಮಾತ್ರ ಒಂದೇ ಕಾಲದಲ್ಲಿ. ಅಷ್ಟೇ ಅಲ್ಲ ಎರಡು ಚಳವಳಿಗಳು ನಡೆದದ್ದು ಒಂದಕ್ಕೊಂದು ಪೂರಕವಾಗಿ ಎಂಬುದನ್ನಂತೂ ಅಲ್ಲಗಳೆಯಲು ಸಾಧ್ಯವಿಲ್ಲ. ಏಕ ಕಾಲದಲ್ಲಿ ಎರಡು ಗುರಿ, ಎರಡು ಹಂಬಲ, ಎರಡು ಕನಸು, ಸ್ವತಂತ್ರ ಭಾರತದ ಭೂಪಟ ಮತ್ತು ಕರ್ನಾಟಕದ ಏಕೀಕರಣದ ಭೂಪಟಗಳೆಂಬ ಎರಡು ಭೂಪಟಗಳು ಕನ್ನಡಿಗರೆಲ್ಲರ ಎದೆಯೊಳಗಿನ ಆಶಯದ ಕನಸುಗಳಾಗಿದ್ದವು. ಇದು ಕರ್ನಾಟಕದ ಎಲ್ಲ ಸ್ವಾತಂತ್ರ್ಯ ಹೋರಾಟಗಾರರ ಹಾಗೂ ಕಾರ್ಯಕರ್ತರ ಹಂಬಲವಾಗಿತ್ತು. 1924ರ ಬೆಳಗಾವಿ ಕಾಂಗ್ರೇಸ್ ಮಹಾ ಅಧಿವೇಶನ ಕರ್ನಾಟಕ ಏಕೀಕರಣ ಚಳವಳಿಗೆ ಕೊಟ್ಟ ಪ್ರೋತ್ಸಾಹವಂತೂ ಮಹತ್ವಪೂರ್ಣವಾದದ್ದು. ಇದೇ ಸಂದರ್ಭದಲ್ಲಿ ಹುಯಿಲಗೋಳ ನಾರಾಯಣ ರಾಯರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಎಂಬ ಗೀತೆಯನ್ನು ರಚಿಸಿ ಹಾಡಿದರು.

ಈ ಎಲ್ಲ ಒತ್ತಾಸೆಗಳ ಫಲವಾಗಿ ಕರ್ನಾಟಕದಲ್ಲಿ 'ಏಕೀಕರಣ ಚಳವಳಿ' ಒಂದು ಸ್ಪಷ್ಟ ರೂಪು ಪಡೆದುಕೊಂಡಿತು. ಈ ನಿಟ್ಟಿನಲ್ಲಿ ಡೆಪ್ಯೂಟಿ ಚನ್ನಬಸಪ್ಪನವರು, ಬೆನಗಲ್ ರಾಮರಾವ್, 'ಕನ್ನಡ ಕುಲಪುರೋಹಿತ'ರೆಂದು ಹೆಸರಾದ ಆಲೂರು ವೆಂಕಟರಾಯರು, ಎಸ್. ನಿಜಲಿಂಗಪ್ಪನವರು, ಅಂದಾನಪ್ಪ ದೊಡ್ಡಮೇಟಿ, ಮಂಗಳವೇಡೆ ಶ್ರೀನಿವಾಸರಾವ್ ಮುಂತಾದ ಇನ್ನೂ ಅನೇಕ ಮುಖಂಡರ ನೇತೃತ್ವದಲ್ಲಿ ಕನ್ನಡ ಏಕೀಕರಣ ಚಳವಳಿ ತೀವ್ರಗೊಂಡಿತ್ತು. ಇದರ ಜೊತೆಗೆ 'ಕನ್ನಡ ಸಾಹಿತ್ಯ ಪರಿಷತ್ತು', ಕರ್ನಾಟಕ ವಿದ್ಯಾವರ್ಧಕ ಸಂಘ, ಕರ್ನಾಟಕ ಸಭಾ, ಕರ್ನಾಟಕ ಏಕೀಕರಣ ಸಮಿತಿ ಮುಂತಾದ ಅನೇಕ ಕನ್ನಡ ಪರ ಸಂಘ ಸಂಸ್ಥೆಗಳು ಕರ್ನಾಟಕ ಏಕೀಕರಣಕ್ಕಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡವು. ಅಷ್ಟೇ ಅಲ್ಲ ಈ ದಿಸೆಯಲ್ಲಿ ಜನಜಾಗೃತಿ ಮೂಡಿಸುವುದರ ಜೊತೆಗೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಪುನಃಶ್ಚೇತನಕ್ಕೆ ಹಲವಾರು ಕಾರ್ಯಕ್ರಮ ಗಳನ್ನು ಹಾಕಿಕೊಂಡವು.

ಈ ಎಲ್ಲ ಚಳವಳಿಗಳ ಫಲಶೃತಿಯಾಗಿ ಭಾರತ ಸ್ವಾತಂತ್ರ್ಯ ನಂತರ ಸ್ವಲ್ಪ ವಿಳಂಬವೆನಿಸಿದರೂ ಸಹ ಭಾಷಾವಾರು ಪ್ರಾಂತ ರಚನೆಗೆ ಕಾರಣವಾಯಿತು. ಅದಕ್ಕಾಗಿ ಡಾ॥ ಪಜಲ್ ಆಲಿ ಅವರ ಅಧ್ಯಕ್ಷತೆಯಲ್ಲಿ "ರಾಜ್ಯ ಪುನರ್ವಿಂಗಡಣಾ ಆಯೋಗ"ವನ್ನು ರಚಿಸಲಾಯಿತು. ಈ ಆಯೋಗದ ವರದಿಯಂತೆ ಮತ್ತು ಭಾರತ ಸರ್ಕಾರದ ತೀರ್ಮಾನದಂತೆ ಕನ್ನಡಿಗರೆಲ್ಲರ ಬಹುದಿನದ ಕನಸಾದ ಕನ್ನಡಿಗರ ರಾಜ್ಯ 1956ರ ನವೆಂಬರ್ ಒಂದರಂದು ಅಸ್ತಿತ್ವಕ್ಕೆ ಬಂದಿತು. ಇದನ್ನು ಆಗಿನ ಸನ್ನಿವೇಶದ ನಿರ್ಬಂಧದಿಂದಾಗಿ 'ಮೈಸೂರು ರಾಜ್ಯ'ವೆಂದು ಕರೆದರೂ 1973ರ ನವೆಂಬರ್ ಒಂದರಂದು ಅಂದಿನ ಮುಖ್ಯಮಂತ್ರಿ ಶ್ರೀ ದೇವರಾಜ್ ಅರಸು ಅವರ ದೃಢ ತೀರ್ಮಾನದಿಂದಾಗಿ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂಬ ಜನ ಬಯಸಿದ ಹೆಸರನ್ನು ನೀಡಲಾಯಿತು. ಈ ಅಂಶ ಚೆಲುವ ಕನ್ನಡ ನಾಡಿನ ಕನ್ನಡಿಗರೆಲ್ಲರ ಆಶೋತ್ತರ ನೆರವೇರಲು ಕಾರಣವಾಯಿತು. ನಾಡು-ನುಡಿಗಾಗಿ ಮಾಡಿದ ಎಲ್ಲ ನಾಡ ಪ್ರೇಮಿಗಳ ತ್ಯಾಗ ಮತ್ತು ಹೋರಾಟದ ಫಲ ಫಲಿಸಿತು.

❑

# ಕರ್ನಾಟಕ ಸರ್ಕಾರ

ಸಂ. ಗ್ರಾಅಪ 306 ಜಿಪಸ 2011

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ 19.10.2011

## ಸುತ್ತೋಲೆ

**ವಿಷಯ** : ಗ್ರಾಮ ಪಂಚಾಯತಿ ಯೋಜನೆಗಳ ಪ್ರಗತಿ ಪರಿಶೀಲನೆ ಬಗ್ಗೆ.

**ಉಲ್ಲೇಖ** : ಸುತ್ತೋಲೆ ಸಂ. ಗ್ರಾಅಪ 199 ಜಿಪಸ 2009, ದಿನಾಂಕ 12.10.2009.

* * *

ರಾಜ್ಯದಲ್ಲಿ 5627 ಗ್ರಾಮ ಪಂಚಾಯತಿಗಳಿದ್ದು, ಈ ಗ್ರಾಮ ಪಂಚಾಯತಿಗಳು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರಿಗೆ ಹಲವಾರು ವೈಯುಕ್ತಿಕ, ಸಮುದಾಯ, ಸವಲತ್ತುಗಳನ್ನು ನೀಡುವಲ್ಲಿ ಕರ್ನಾಟಕ ಪಂ. ರಾಜ್ ಅಧಿನಿಯಮ, 1993ರ ಪ್ರಕರಣ 58ರಲ್ಲಿ ಉಲ್ಲೇಖಿಸಿರುವಂತೆ ಕರ್ತವ್ಯ ನಿರ್ವಹಿಸುತ್ತಿವೆ. ಗ್ರಾಮ ಪಂಚಾಯತಿಗಳು ಅಧಿಕಾರೇತರರು ಹಾಗು ಅಧಿಕಾರಿಗಳನ್ನು ಒಳಗೊಂಡಂತೆ ಕರ್ತವ್ಯ ನಿರ್ವಹಿಸುತ್ತಿವೆ. ದಿನಾಂಕ 14.10.2011 ರಂದು ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಅಧ್ಯಕ್ಷರ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳು/ ಪಿಡಿಒ ಆಡಳಿತ ನಿರ್ವಹಿಸುತ್ತಿರುವ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಸಮ್ಮೇಳನದಲ್ಲಿ ಗ್ರಾಮ ಪಂಚಾಯತಿ ಅಧಿಕಾರಿಗಳ ಹಲವಾರು ಅನಿಯಮಿತ ಸಭೆಗಳನ್ನು ಕರೆಯಲಾಗುತ್ತಿದ್ದು, ಕೆಲಸ ಕಾರ್ಯ ಮಾಡಲು ಕಷ್ಟವಾಗುತ್ತಿದೆ ಎಂದು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ. ತಾಲ್ಲೂಕು ಮಟ್ಟದಲ್ಲಿ ಹಾಗು ಗ್ರಾಮ ಪಂಚಾಯತಿ ಮಟ್ಟದಲ್ಲಿ ಯಶಸ್ವಿ ಪರಿಣಾಮಗಳನ್ನು ಬೀರುವ ಸಮನ್ವಯ ಸಭೆಗಳು ಪ್ರಗತಿ ಪರಿಶೀಲನಾ ಸಭೆಗಳು ನಿರೀಕ್ಷಿತ ಮಟ್ಟದಲ್ಲಿ ನಡೆಯದೇ ಇರುವುದನ್ನು ಗಮನಿಸಲಾಗಿದೆ. ಮುಂದುವರೆದು, ಕರ್ನಾಟಕ ಪಂ. ರಾಜ್ ಅಧಿನಿಯಮ, 1993ರ ಪ್ರಕರಣ 232, 233, 234 ರಲ್ಲಿ ಪರಿವೀಕ್ಷಣೆ ಹಾಗು ಮೇಲ್ವಿಚಾರಣೆ ಬಗ್ಗೆ ವಿವರವಾಗಿ ವಿವರಿಸಲಾಗಿದೆ. ಆದಾಗ್ಯೂ, ನಿರೀಕ್ಷಿತ ಮಟ್ಟದಲ್ಲಿ ಆಗಿರುವುದಿಲ್ಲ.

ಉಲ್ಲೇಖದಲ್ಲಿನ ಸುತ್ತೋಲೆಯಲ್ಲಿ ಸಭೆಗಳನ್ನು ಕಡಿತಗೊಳಿಸಿ ಕ್ಷೇತ್ರ ಭೇಟಿ ನೀಡಿ ಅಧಿಕಾರಿಗಳು ಹಾಗು ಅಧಿಕಾರೇತರರೊಂದಿಗೆ ಸಮನ್ವಯ ಸಾಧಿಸುವಲ್ಲಿ ಹಮ್ಮಿಕೊಳ್ಳಬೇಕಾದ ಹಲವಾರು ಅಂಶಗಳನ್ನು ವಿವರವಾಗಿ ತಿಳಿಸಲಾಗಿದೆ. ಸದರಿ ಸುತ್ತೋಲೆಯನ್ನು ಪುನರುಚ್ಚರಿಸುತ್ತಾ, ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೆಳಕಂಡಂತೆ ಕೂಡಲೆ ಕ್ರಮ ತೆಗೆದುಕೊಳ್ಳಲು ತಿಳಿಸಿದೆ :

1. ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಮಾಸಿಕವಾಗಿ (ತಿಂಗಳಾಂತ್ಯದ ಕೊನೆಯ ವಾರದಲ್ಲಿ) ಒಂದು ದಿನ ಕಾರ್ಯನಿವಾಹಕ ಅಧಿಕಾರಿಗಳು ಕಡ್ಡಾಯವಾಗಿ ಏರ್ಪಡಿಸಿ ಪ್ರಗತಿ ಪರಿಶೀಲನೆ ಹಾಗು ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು (ವಿಷಯ ಸೂಚಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ).

2. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಎರಡು ತಿಂಗಳಿಗೊಮ್ಮೆ ಗ್ರಾಮ ಪಂಚಾಯತಿ ಅಧ್ಯಕ್ಷರು ಹಾಗು ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆಯನ್ನು ಕರೆದು ಪ್ರಗತಿ ಪರಿಶೀಲನೆ, ತಿಳುವಳಿಕೆ, ಸಮಸ್ಯೆಗಳಿದ್ದಲ್ಲಿ ಅದನ್ನು ಪರಿಹರಿಸುವುದು.

3. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತ್ರೈಮಾಸಿಕವಾಗಿ ಗ್ರಾಮ ಪಂಚಾಯತಿ ಅಧ್ಯಕ್ಷರ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು/ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯನ್ನು ಕಂದಾಯ ಉಪ ವಿಭಾಗದನ್ವಯ ಕರೆದು ಪ್ರಗತಿ ಪರಿಶೀಲನೆ, ಅಧಿನಿಯಮ, ಸುತ್ತೋಲೆ, ಅಧಿಸೂಚನೆ ಸಂಬಂಧಿಸಿದಂತೆ ಎಲ್ಲರಿಗೂ ಮಾಹಿತಿ, ತಿಳುವಳಿಕೆ ಹಾಗು ಕಾರ್ಯಕ್ರಮ ಅನುಷ್ಠಾನದಲ್ಲಿ ಪ್ರಗತಿಪರ ಚಿಂತನೆ ನಡೆಸುವಂತೆ ಕೆಳಸ್ತರದ ಎಲ್ಲ ಅಧಿಕಾರಿಗಳಿಗೆ ಮನೋಸ್ಥೈರ್ಯ ತುಂಬುವುದು.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಅನುಬಂಧ

### ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮಾಸಿಕ, ತ್ರೈಮಾಸಿಕ ಸಭೆಗಳಲ್ಲಿ ಚರ್ಚಿಸಬೇಕಾದ ವಿಷಯಗಳು

1. ಸರ್ಕಾರಿ ಸುತ್ತೋಲೆ/ಆದೇಶ/ಅಧಿಸೂಚನೆಗಳನ್ನು ಮನನ ಮಾಡುವುದು.
2. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಅನುಷ್ಠಾನ ಪರಿಶೀಲನೆ
3. ಗ್ರಾಮ ಪಂಚಾಯತಿಯ ಡಿ.ಸಿ.ಬಿ. ಪರಿಶೀಲನೆ.
4. ಅಭಿವೃದ್ಧಿ ಯೋಜನೆಗಳ ಪರಿಶೀಲನೆ.
5. ನಾಗರಿಕ ಸನ್ನದು ಪರಿಶೀಲನೆ.
6. ಸಾರ್ವಜನಿಕ ದೂರುಗಳ ವಿಲೇವಾರಿ.
7. ಇ–ಪಂಚಾಯತ್ ಪರಿಶೀಲನೆ.
8. ಗ್ರಾಮ ಸಭೆ, ವಾರ್ಡ್ ಸಭೆ, ಜಮಾಬಂಧಿಯ ಪ್ರಗತಿ ಪರಿಶೀಲನೆ.
9. ಲೆಕ್ಕಪರಿಶೋಧನೆ, ಆಕ್ಷೇಪಣೆಗಳ ಪರಿಶೀಲನೆ.
10. ಮಾಹಿತಿ ಹಕ್ಕು ಅಧಿನಿಯಮದ ಅರ್ಜಿಗಳ ವಿಲೇವಾರಿ ಪರಿಶೀಲನೆ.
11. ಗ್ರಾಮ ನೈರ್ಮಲ್ಯದ ಪರಿಶೀಲನೆ.
12. ಮಲ ಹೊರುವ ಪದ್ದತಿ ನಿಷೇಧ ಪರಿಶೀಲನೆ
13. ಜೀತ ವಿಮುಕ್ತ ಪದ್ಧತಿ ನಿರ್ಮೂಲನೆ, ಪರಿಶೀಲನೆ,
14. ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನಾ ಪರಿಶೀಲನೆ
15. ಬಾಲ್ಯ ವಿವಾಹ ಪದ್ಧತಿ ನಿರ್ಮೂಲನೆ
16. ಮಹಿಳಾ ಸಬಲಿಕರಣ ಕಾರ್ಯಕ್ರಮ ಪರಿಶೀಲನೆ
17. ವಿಕಲಚೇತನರ ಕಾರ್ಯಕ್ರಮಗಳ ಪರಿಶೀಲನೆ,
18. ವಸತಿ ಯೋಜನೆ ಪರಿಶೀಲನೆ.
19. ಎಸ್.ಜಿ.ಎಸ್.ವೈ., ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಗಳ ಪರಿಶೀಲನೆ.
20. ಕುಡಿಯುವ ನೀರು, ಬೀದಿ ದೀಪಗಳ ಪರಿಸ್ಥಿತಿ ಬಗ್ಗೆ ಪರಿಶೀಲನೆ.
21. ಲ್ಯಾಬ್–ಟು–ಲ್ಯಾಂಡ್ ಯೋಜನೆ ಪರಿಶೀಲನೆ
22. ಸುವರ್ಣ ಗ್ರಾಮೋದಯ ಯೋಜನೆ ಪರಿಶೀಲನೆ,
23. ಬಿ.ಆರ್.ಜಿ.ಎಫ್. ಯೋಜನೆ ಪರಿಶೀಲನೆ.
24. 13ನೇ ಹಣಕಾಸು, ಶಾಸನಬದ್ಧ ಅನುದಾನ.
25. ಎನ್.ಆರ್.ಎಲ್.ಎಂ. ಪ್ರಗತಿ ಪರಿಶೀಲನೆ.
26. ಬಿ.ಪಿ.ಎಲ್. ಸರ್ವೆ
27. ಗ್ರಾಮ ಪಂಚಾಯತಿ ದಾಖಲಾತಿ ವಹಿ ನಿರ್ವಹಣೆ ಚರ್ಚೆ
28. ಆಡಳಿತ ಹಾಗು ಅಭಿವೃದ್ಧಿ ಅನುಷ್ಠಾನದಲ್ಲಿ ಉತ್ತಮ ಪದ್ಧತಿಗಳ ವಿನಿಮಯ.
29. ಚುನಾಯಿತ ಪ್ರತಿನಿಧಿಗಳ ಹಾಗು ಅಧಿಕಾರಿಗಳ ಸಮನ್ವಯ ಸಾಧನೆಗೆ ಮಾರ್ಗೋಪಾಯಗಳು.
30. ಇತರೆ ವಿಚಾರಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ (ಸೋಯೋ ಎಕನಾಮಿಕ್ ಅಂಡ್ ಕ್ಯಾಸ್ಟ್ ಸೆನ್ಸಸ್) ಯನ್ನು ಪರಿಣಾಮಕಾರಿಯಾಗಿ ನಡೆಸುವ ಬಗ್ಗೆ.

**ಓದಲಾಗಿದೆ :**

1) ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಅ.ಸ. ಪತ್ರ ಸಂಖ್ಯೆ : ಕ್ಯೂ 14016/6/ 2011/ಎ1 (ಆರ್‌ಡಿ) ದಿನಾಂಕ 30–05–2011
2) ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಪತ್ರ ಸಂಖ್ಯೆ : ಕ್ಯೂ 14016/6/ 2011/ಎ1 (ಆರ್‌ಡಿ) ದಿನಾಂಕ 13–06–2011
3) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ ಸಂಖ್ಯೆ : ಆರ್‌ಡಿಪಿ 16 ಎಸ್‌ಜೆವೈ 2011 (ಎ1) ದಿನಾಂಕ 18–07–2011.

* * *

**ಪ್ರಸ್ತಾವನೆ :**

ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಪ್ರತಿ 5 ವರ್ಷಕ್ಕೊಮ್ಮೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಗ್ರಾಮೀಣ ಪ್ರದೇಶದಲ್ಲಿ ಗಣತಿ ಕಾರ್ಯ ನಡೆಸುತ್ತಿದೆ. ರಾಜ್ಯವು ಈ ಹಿಂದೆ 2004 ರಲ್ಲಿ ಸರ್ವ ಕುಟುಂಬ ಸಮೀಕ್ಷೆಯ ಹೆಸರಿನಲ್ಲಿ ಗಣತಿ ಕಾರ್ಯ ಕೈಗೊಂಡು ಪೂರ್ಣಗೊಳಿಸಿದೆ. ಪ್ರಸ್ತುತ ಗಣತಿ ಪ್ರಕ್ರಿಯೆ 2007 ರಲ್ಲಿ ಪ್ರಾರಂಭಗೊಂಡಿದ್ದು, 2011 ರಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯನ್ನು ಕೈಗೊಳ್ಳುವಂತೆ ಓದಲಾಗಿದೆ (1) ರಲ್ಲಿ ನಿರ್ಧರಿಸಿದೆ. ಪ್ರಸಕ್ತ ಗಣತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪ್ರಥಮ ಬಾರಿಗೆ ಪಟ್ಟಣ ಪ್ರದೇಶಗಳಲಿ ತೆಗೆದುಕೊಳ್ಳಲು ಉದ್ದೇಶಿಸಿದೆ. ಇದರೊಂದಿಗೆ ಸ್ವಾತಂತ್ರ್ಯಾ ನಂತರ ಪ್ರಥಮ ಬಾರಿಗೆ ಜಾತಿ ಗಣತಿಯನ್ನು ಸಹ ತೆಗೆದುಕೊಳ್ಳಲಾಗುತ್ತಿದೆ. ಇದರಂತೆ ರಾಜ್ಯದಲ್ಲಿಯೂ ಗಣತಿ ಕಾರ್ಯ ಕೈಗೊಳ್ಳಬೇಕಾಗಿದೆ. ಗಣತಿಯನ್ನು 2 ಹಂತಗಳಲ್ಲಿ (1) ನವೆಂಬರ್ 2011 (2) ಡಿಸೆಂಬರ್ 2011 ರಲ್ಲಿ ನಡೆಸಬೇಕಾಗಿದೆ.

ಓದಲಾಗಿದೆ (3) ರನ್ವಯ ದಿನಾಂಕ 06–07–2011 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ, ಈ ಗಣತಿ ಕಾರ್ಯಕ್ಕಾಗಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳ ರಚನೆ ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕಾಗಿದೆ. ಆದುದರಿಂದ ಈ ಆದೇಶ,

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 29 ಎಸ್‌ಜೆವೈ 2011 (ಎ–1), ಬೆಂಗಳೂರು, ದಿನಾಂಕ : 03–08–2011**

ರಾಜ್ಯ ಸರ್ಕಾರವು ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿ 2011 ನಡೆಸಲು ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಸಮಿತಿಗಳನ್ನು ರಚಿಸಲು ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲು ಮಂಜೂರಾತಿ ನೀಡಿದೆ.

## ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ : (State Level Empowered Committee)

| ಕ್ರ. ಸಂ. | ಅಧಿಕಾರಿಯ ಪದನಾಮ | |
|---|---|---|
| 1 | ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು | ಅಧ್ಯಕ್ಷರು |
| 2 | ಅಪರ ಮುಖ್ಯ ಕಾರ್ಯದರ್ಶಿಗಳು, ಹಾಗೂ ಅಭಿವೃದ್ಧಿ ಆಯುಕ್ತರು, ಬೆಂಗಳೂರು | ಸದಸ್ಯರು |
| 3 | ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಬೆಂಗಳೂರು | ಸದಸ್ಯರು |
| 7 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 8 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 9 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು | ಸದಸ್ಯರು |
| 10 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬೆಂಗಳೂರು | ಸದಸ್ಯರು |
| 11 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು | ಸದಸ್ಯರು |
| 12 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಪ್ರಾಥಮಿಕ ಮತ್ತು ಪ್ರೌಢ) ಬೆಂಗಳೂರು | ಸದಸ್ಯರು |

| | | |
|---|---|---|
| 13 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು | ಸದಸ್ಯರು |
| 14 | ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 15 | ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 16 | ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು | ಸದಸ್ಯರು |
| 17 | ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು | ಸದಸ್ಯರು |
| 18 | ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು | ಸದಸ್ಯರು |
| 19 | ಆಯುಕ್ತರು, ಪೂರ್ವ ಪದವಿ ಶಿಕ್ಷಣ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು | ಸದಸ್ಯರು |
| 20 | ಆಯುಕ್ತರು, ಕಾಲೇಜು ಶಿಕ್ಷಣ, ತಾಂತ್ರಿಕ ಶಿಕ್ಷಣ ಕಟ್ಟಡ, ಪ್ಯಾಲೇಸ್ ರಸ್ತೆ, ಬೆಂಗಳೂರು | ಸದಸ್ಯರು |
| 21 | ನಿರ್ದೇಶಕರು, ಸೆನ್ಸಸ್ ಆಪರೇಷನ್ಸ್ ಇನ್ ಕರ್ನಾಟಕ, ಬೆಂಗಳೂರು | ಸದಸ್ಯರು |
| 22 | ರಾಜ್ಯ ಮಾಹಿತಿ ಅಧಿಕಾರಿ, ಎನ್ಐಸಿ, ಬೆಂಗಳೂರು | ಸದಸ್ಯರು |
| 23 | ಬಿಇಎಲ್ ಪ್ರತಿನಿಧಿ, ಬೆಂಗಳೂರು | ಸದಸ್ಯರು |
| 24 | ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು :**

* ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು.
* ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಉಸ್ತುವಾರಿ ಮತ್ತು ಪ್ರಗತಿ ಪರಿಶೀಲನೆ ನಡೆಸುವುದು.

**ಗ್ರಾಮೀಣ ಗಣತಿಯ ರಾಜ್ಯ ಮಟ್ಟದ ಉಪ ಸಮಿತಿ :**

| ಕ್ರ. ಸಂ. | ಅಧಿಕಾರಿಯ ಪದನಾಮ | |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು | ಸದಸ್ಯರು |
| 3 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 4 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು | ಸದಸ್ಯರು |
| 5 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 6 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ, (ಉನ್ನತ ಶಿಕ್ಷಣ) ಬೆಂಗಳೂರು | ಸದಸ್ಯರು |
| 7 | ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯರು |
| 8 | ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬೆಂಗಳೂರು | ಸದಸ್ಯರು |
| 9 | ನಿರ್ದೇಶಕರು, ಸೆನ್ಸಸ್ ಆಪರೇಷನ್ಸ್ ಇನ್ ಕರ್ನಾಟಕ, ಬೆಂಗಳೂರು | ಸದಸ್ಯರು |
| 10 | ರಾಜ್ಯ ಮಾಹಿತಿ ಅಧಿಕಾರಿ, ಎನ್ಐಸಿ, ಬೆಂಗಳೂರು | ಸದಸ್ಯರು |
| 11 | ಬಿಇಎಲ್ ಪ್ರತಿನಿಧಿ, ಬೆಂಗಳೂರು | ಸದಸ್ಯರು |
| 12 | ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |

**ಗ್ರಾಮೀಣ ಗಣತಿಯ ರಾಜ್ಯ ಮಟ್ಟದ ಉಪ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿಗಳು :**

* ಸಮಿತಿಯು ಅವಶ್ಯಕತೆಗನುಗುಣವಾಗಿ ಯಾವುದೇ ಅಧಿಕಾರಿಗಳನ್ನು ಸಮಿತಿಗೆ ಸೇರ್ಪಡಿಸಿಕೊಳ್ಳಬಹುದು.
* ರಾಜ್ಯ ಮಟ್ಟದ ಉಪ ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆಯನ್ನು ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
* ಗಣತಿ ಕಾರ್ಯದ ಕುರಿತು ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ
* ರಾಜ್ಯದಲ್ಲಿ ಕೈಗೊಳ್ಳಲಾಗುವ ಪ್ರಥಮ ಹಾಗೂ ದ್ವಿತೀಯ ಹಂತಗಳಲ್ಲಿ ಗಣತಿ ಕಾರ್ಯಕ್ಕೆ ಜಿಲ್ಲೆಗಳನ್ನು ಗುರುತಿಸುವುದು.
* ಅಗ್ಗಿಂದಾಗ್ಗೆ ಗಣತಿ ಕಾರ್ಯದ ಕುರಿತು ಪ್ರಗತಿ ಪರಿಶೀಲನೆ ನಡೆಸುವುದು.

### ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರ ನೇಮಕ ಮತ್ತು ಅವರ ಕರ್ತವ್ಯ ಮತ್ತು ಜವಾಬ್ದಾರಿ :

* ನಿರ್ದೇಶಕರು (ಸ್ವಉಕಾ) ಹಾಗೂ ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು ರವರನ್ನು ಗ್ರಾಮೀಣ ಹಾಗೂ ನಗರ ಪ್ರದೇಶದ ಗಣತಿ ಕಾರ್ಯದ ರಾಜ್ಯ ಮಟ್ಟದ ನೋಡಲ್ ಅಧಿಕಾರಿಯಾಗಿದ್ದು, ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ಕೈಗೊಂಡು, ಗಣತಿ ಕಾರ್ಯದ ಪ್ರಗತಿಯನ್ನು ಆಗ್ಗಿಂದಾಗ್ಗೆ ಕೇಂದ್ರ ಸರ್ಕಾರಕ್ಕೆ ನೀಡುವುದು.
* ಕೇಂದ್ರ ಸರ್ಕಾರ ಆಗ್ಗಿಂದಾಗ್ಗೆ ನೀಡುವ ಮಾಹಿತಿಗಳನ್ನು ಕನ್ನಡಕ್ಕೆ ತರ್ಜುಮೆಗೊಳಿಸಿ ಸಂಬಂಧಿಸಿದವರಿಗೆ ನೀಡುವುದು.
* ಆಗ್ಗಿಂದಾಗ್ಗೆ ಗಣತಿ ಕಾರ್ಯದ ಕುರಿತು ಪ್ರಗತಿ ಪರಿಶೀಲನೆ ನಡೆಸುವುದು.

### ರಾಜ್ಯ ಮಟ್ಟದ ನಗರ ಪ್ರದೇಶದ ನೋಡಲ್ ಅಧಿಕಾರಿಯವರ ನೇಮಕ ಮತ್ತು ಅವರ ಕರ್ತವ್ಯ ಮತ್ತು ಜವಾಬ್ದಾರಿ :

* ಆಯುಕ್ತರು, ಪೌರಾಡಳಿತ ಇಲಾಖೆ, ಬೆಂಗಳೂರು ರವರನ್ನು ನಗರ ಪ್ರದೇಶದ ಗಣತಿಯ ನೋಡಲ್ ಅಧಿಕಾರಿಗಳಾಗಿದ್ದು, ನಗರದ ಪ್ರದೇಶದ ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ಕೈಗೊಂಡು, ಮಾಹಿತಿಯನ್ನು ರಾಜ್ಯ ಮಟ್ಟದ ನೋಡಲ್ ಅಧಿಕಾರಿಯವರಿಗೆ ನೀಡುವುದು.

### ಜಿಲ್ಲಾ ಮಟ್ಟದ ಸಮಿತಿ :

| ಕ್ರ. ಸಂ. | ಅಧಿಕಾರಿಯ ಪದನಾಮ | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು | ಉಪಾಧ್ಯಕ್ಷರು |
| 3 | ಸೂಪರಿಂಟೆಂಡೆಂಟ್ ಆಫ್ ಪೋಲೀಸ್ | ಸದಸ್ಯರು |
| 4 | ಜಿಲ್ಲಾ ಆರೋಗ್ಯಾಧಿಕಾರಿಗಳು | ಸದಸ್ಯರು |
| 5 | ಡಿಡಿಪಿಐ, ಶಿಕ್ಷಣ ಇಲಾಖೆ | ಸದಸ್ಯರು |
| 6 | ಜಂಟಿ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 7 | ಸಿಎಂಸಿ/ ಕಾರ್ಪೋರೇಷನ್ ಆಯುಕ್ತರು / ಆಡಳಿತಾಧಿಕಾರಿಗಳು | ಸದಸ್ಯರು |
| 8 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು | ಸದಸ್ಯರು |
| 9 | ಜಿಲ್ಲಾ ಸೆನ್ಸಸ್ ಅಧಿಕಾರಿಗಳು | ಸದಸ್ಯರು |
| 10 | ಜಿಲ್ಲಾ ಎನ್.ಐ.ಸಿ ಅಧಿಕಾರಿಗಳು | ಸದಸ್ಯರು |
| 11 | ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು | ಸದಸ್ಯರು |
| 12 | ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |
| 13 | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಸದಸ್ಯರು |
| 14 | ಜಿಲ್ಲಾ ಮಾಹಿತಿ ಮತ್ತು ಪ್ರಚಾರಾಧಿಕಾರಿಗಳು | ಸದಸ್ಯರು |
| 15 | ಅಗ್ರ ಜಿಲ್ಲಾ ವ್ಯವಸ್ಥಾಪಕರು | ಸದಸ್ಯರು |
| 16 | ಯೋಜನಾ ನಿರ್ದೇಶಕರು (ಡಿಆರ್‌ಡಿಎ) | ಸದಸ್ಯರು |
| 17 | ಮುಖ್ಯ ಯೋಜನಾಧಿಕಾರಿಗಳು, ಜಿಲ್ಲಾ ಪಂಚಾಯತ್ | ಸದಸ್ಯ ಕಾರ್ಯದರ್ಶಿ |

### ಜಿಲ್ಲಾ ಮಟ್ಟದ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ :

* ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
* ಗಣತಿಗೆ ಅವಶ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಛಾರ್ಜ್ ಆಫೀಸ್‌ಗೆ ಅವಕಾಶ ಕಲ್ಪಿಸುವುದು.
* ಜಿಲ್ಲೆಯಲ್ಲಿರುವ 4 ಎನ್ಯೂಮರೇಷನ್ ಬ್ಲಾಕ್ (ಇ.ಬಿ) ನ ಆಧಾರದ ಮೇಲೆ ಒಬ್ಬ ಗಣತಿದಾರರನ್ನು ಹಾಗೂ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ಅಥವಾ ಸಂದರ್ಭಕ್ಕೆ ಅನುಗುಣವಾಗಿ ನೇಮಕ ಮಾಡಲು ಕ್ರಮ ಕೈಗೊಳ್ಳುವುದು.
* ಗಣತಿಗೆ ಅವಶ್ಯವಿರುವ ಸಿಬ್ಬಂದಿ ಗುರುತಿಸಿ, ನೇಮಕ ಮಾಡುವ ಅಧಿಕಾರವನ್ನು ಸಮಿತಿ ನಿರ್ಧರಿಸಿ ನಾಮಾಂಕಿತಗೊಳಿಸುವುದು.
* ರಾಜ್ಯ ಮಟ್ಟದಲ್ಲಿ ತರಬೇತಿ ಪಡೆಯುವ ಸಲುವಾಗಿ ಜಿಲ್ಲೆಯ ಇಬ್ಬರು ಮಾಸ್ಟರ್ ಟ್ರೈನರ್ ಫೆಸಿಲಿಟೇಟರ್ಸ್‌ಗಳನ್ನು ಗುರುತಿಸುವುದು
* ಜಿಲ್ಲಾ ಮಟ್ಟದ ಸಮಿತಿ ಸದಸ್ಯರು ಆಯಾ ಹಂತಗಳಲ್ಲಿ ನಡೆಯುವ ಗಣತಿ ತರಬೇತಿ ಕಾರ್ಯಕ್ರಮದಲ್ಲಿ ತಪ್ಪದೇ ಭಾಗವಹಿಸುವಲ್ಲಿ ಕ್ರಮ ವಹಿಸುವುದು

**ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿ ನೇಮಕ ಮತ್ತು ಕರ್ತವ್ಯಗಳು**

* ಸಂಬಂಧಿಸಿದ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಆಯಾ ಜಿಲ್ಲೆಗಳ ನೋಡಲ್ ಅಧಿಕಾರಿಯಾಗಿ ನೇಮಿಸಿದೆ.
* ಸರ್ಕಾರಗಳು ನೀಡುವ ನಿರ್ದೇಶನದಂತೆ ಗಣತಿ ಕಾರ್ಯದ ಎಲ್ಲಾ ಪ್ರಾಸಂಗಿಕ ಕ್ರಮಗಳನ್ನು ನಿಗದಿತ ವೇಳಾ ಪಟ್ಟಿಯಂತೆ ಅನುಸರಿಸಿ, ಪ್ರಗತಿ ಪರಿಶೀಲನೆ ನಡೆಸುವುದು.
* ನಿಗದಿತ ಸಮಯದಲ್ಲಿ ಸರ್ಕಾರಕ್ಕೆ ಎಲ್ಲಾ ಮಾಹಿತಿಗಳನ್ನು ಪೂರೈಸುವುದು.
* ಎಲ್ಲಾ ಹಂತಗಳಲ್ಲಿ ಗಣತಿಗೆ ಬೇಕಾದ ಅಧಿಕಾರಿ / ನೌಕರರನ್ನು ನೇಮಕ ಮಾಡುವುದು.

**ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರ ಕರ್ತವ್ಯಗಳು**

* ಜಿಲ್ಲೆಯ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಗಣತಿ ಕಾರ್ಯಕ್ಕೆ ಬೇಕಾಗುವ ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಪೂರೈಸುವುದು.
* ಬಿಇಎಲ್ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ಗಣತಿಗೆ ಅವಶ್ಯವಿರುವ ಟ್ಯಾಬ್ಲೆಟ್ ಪಿಸಿ ಸರ್ಮಪಕ ಸರಬರಾಜು ಆಗಿರುವ ಬಗ್ಗೆ ನಿಗಾ ವಹಿಸುವುದು.

**ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಕರ್ತವ್ಯಗಳು**

* ಗಣತಿ ಕಾರ್ಯಕ್ಕೆ ತಗಲುವ ವೆಚ್ಚವನ್ನು ಈಗಾಗಲೇ ಬಿಪಿಎಲ್ ಸೆನಸ್ಸ್‌ಗಾಗಿ ಬಿಡುಗಡೆ ಮಾಡಿರುವ ಅನುದಾನದಿಂದಲೇ ಭರಿಸುವುದು.

**ತಾಲ್ಲೂಕು ಮಟ್ಟದ ಸಮಿತಿ :**

| ಕ್ರ. ಸಂ. | ಅಧಿಕಾರಿಯ ಪದನಾಮ | |
|---|---|---|
| 1 | ಉಪ ವಿಭಾಗಾಧಿಕಾರಿಗಳು | ಅಧ್ಯಕ್ಷರು |
| 2 | ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ | ಸದಸ್ಯರು |
| 3 | ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 4 | ಸಿಡಿಪಿಓ | ಸದಸ್ಯರು |
| 5 | ತಾಲ್ಲೂಕು ಆರೋಗ್ಯಾಧಿಕಾರಿಗಳು | ಸದಸ್ಯರು |
| 6 | ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು | ಸದಸ್ಯರು |
| 7 | ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ / ಸರ್ಕಲ್ ಇನ್ಸಪೆಕ್ಟರ್ ಆಫ್ ಪೋಲೀಸ್ | ಸದಸ್ಯರು |
| 8 | ಬ್ಲಾಕ್ ಶಿಕ್ಷಣಾಧಿಕಾರಿಗಳು | ಸದಸ್ಯರು |
| 9 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು / ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಪ್ರತಿನಿಧಿ | ಸದಸ್ಯರು |
| 10 | ತಹಶಿಲ್ದಾರರು | ಸದಸ್ಯ ಕಾರ್ಯದರ್ಶಿ |

**ತಾಲ್ಲೂಕು ಮಟ್ಟದ ಸಮಿತಿಯ ಕರ್ತವ್ಯ ಮತ್ತು ಜವಾಬ್ದಾರಿ :**

* ಸರ್ಕಾರ ಮತ್ತು ಜಿಲ್ಲಾ ಸಮಿತಿಗಳು ಅಗ್ಗಿಂದಾಗ್ಗೆ ನೀಡುವ ನಿರ್ದೇಶನದಂತೆ ನಿಗದಿತ ಅವಧಿಯೊಳಗೆ ಗಣತಿ ಕಾರ್ಯ ಸಮರ್ಪಕ ವಾಗಿ ನಡೆಯುತ್ತಿರುವ ಬಗ್ಗೆ ನಿಗಾ ವಹಿಸುವುದು
* ಸಮಿತಿ 15 ದಿನಗಳಿಗೊಮ್ಮೆ ಕನಿಷ್ಠ 1 ಸಭೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಸಭೆ ಸೇರಿ ಗಣತಿಯ ಪ್ರಗತಿ ಪರಿಶೀಲಿಸಲು ನಡೆಸುವುದು.
* ಮಾಹಿತಿಯನ್ನು ಜಿಲ್ಲಾ ಮಟ್ಟದಲ್ಲಿ ಕ್ರೋಢಿಕರಣವಾಗುವಲ್ಲಿ ಕ್ರಮ ವಹಿಸುವುದು.
* ತಾಲ್ಲೂಕಿನಲ್ಲಿರುವ 4 ಎನ್ಯೂಮರೇಷನ್ ಬ್ಲಾಕ್ (ಇ.ಬಿ) ನ ಆಧಾರದ ಮೇಲೆ ಒಬ್ಬ ಗಣತಿದಾರರನ್ನು ಹಾಗೂ 6 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ಅಥವಾ ಸಂದರ್ಭಕ್ಕೆ ಅನುಗುಣವಾಗಿ ಬೇಕಾಗುವ ಸಿಬ್ಬಂದಿಯ ಮಾ'ತಿಯನ್ನು ಜಿಲ್ಲಾ ಸಮಿತಿಗೆ ಒದಗಿಸುವುದು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಗಣತಿಯ ಬಗ್ಗೆ ಅಗ್ಗಿಂದಾಗ್ಗೆ ನೀಡುವ ಎಲ್ಲಾ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಿ ಕ್ರಮ ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಸಂಖ್ಯೆ ಗ್ರಾಅಪ 29 ಎಸ್‌ಜೆವೈ 2011 (ಎ.1)**

**ಕರ್ನಾಟಕ ಸರ್ಕಾರ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಅಧಿಸೂಚನೆ**

**ಬೆಂಗಳೂರು, 22 ನೇ ಸೆಪ್ಟೆಂಬರ್ 2011**

ಭಾರತ ಸರ್ಕಾರವು ರಾಷ್ಟ್ರದಾದ್ಯಂತ ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿಯನ್ನು 2011 ನೇ ಸಾಲಿನಲ್ಲಿ ನಡೆಸಲು ನಿರ್ಧರಿಸಿದೆ. ಇದರಂತೆ ರಾಷ್ಟ್ರದ ಆಯಾಯ ರಾಜ್ಯಗಳು ಕೇಂದ್ರದ ಆರ್ಥಿಕ ಹಾಗೂ ತಾಂತ್ರಿಕ ಸಹಾಯದೊಂದಿಗೆ ಕೇಂದ್ರ ವಸತಿ ಹಾಗೂ ನಗರ ಬಡತನ ನಿರ್ಮೂಲನ ಮಂತ್ರಾಲಯ, ನವದೆಹಲಿ ಇವರ ಅಧಿಸೂಚನೆ ಎಫ್ ಸಂಖ್ಯೆ. ಕೆ–14914.61.2010. ಯುಪಿಎ (ವಾಲ್ಯೂಂ–II) ದಿನಾಂಕ : 15–06–2011 ರಂದು ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿ–2011ನ್ನು ನಡೆಸಲು ಘೋಸಿದೆ. ಇದರನ್ವಯ, ಕರ್ನಾಟಕ ರಾಜ್ಯದಲ್ಲಿ ದಿನಾಂಕ : 01–11–2011 ರಿಂದ ದಿನಾಂಕ:31–12–2011 ರವರೆಗೆ ಸಾಮಾಜಿಕ ಆರ್ಥಿಕ ಹಾಗೂ ಜಾತಿ ಗಣತಿ–2011 ನ್ನು ಎರಡು ಹಂತಗಳಲ್ಲಿ ನಡೆಸಲು ಘೋಸಿದೆ.

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**No.RDP/29/SJY 2011 (A1)**

**GOVERNMENT OF KARNATAKA**

**RURAL DEVELOPMENT & PANCHAYAT RAJ DEPARTMENT**

**NOTIFICATION**

**BANGALORE, the 22nd September 2011**

The Central Government has decided to conduct the Socio-Economic and Caste Census in the year 2011. The Socio Economic and Caste Census would be carried out by the respective State Government with the Financial and Technical support of the Government of India as per Notification F.No.K-14914.61.2010 UPA (Volume-II) dt:15-06-2011 of the Ministry of Housing Urban Poverty Alleviation, New Delhi. In pursuance of this Notification, the Government of Karnataka declares that the Socio-Economic and Caste Census 2011 shall be conducted in the State of Karnataka from 01-11-2011 to 31-12-2011 in two phases.

By Order and in the name of the
Governor of Karnataka.

**(Dr. Amita Prasad)**
Principal Secretary to Government,
Rural Development & Panchayat Raj Dept.

## GOVERNMENT OF KARNATAKA
## RURAL DEVELOPMENT & PANCHAYAT RAJ DEPARTMENT

**No.RDP/29/SJY 2011 (A1)** **Dated : 22-09-2011**

## NOTIFICATION

**Sub** : Socio Economic and Caste Census-2011 (SECC-2011) to be conducted during November, December 2011 in 2 phases.

**Ref** : 1) Ministry of Rural Development, New Delhi D.O LetterNo.Q-14016/6/2011/A1-(RD)dt:30thMay 2011.

2) Ministry Housing & Urban Poverty Alleviation, New Delhi letter No. F No. K-14914-61.2011 UPA (Vol.II) Dated:15-06-2011.

3) Cabinet No. C.444/2011(Sl.No.12) Dated:15-09-2011

* * *

In exercise of the powers conferred as per the guidelines of Ministry of Rural Development, New Delhi & Ministry of Housing & Urban Poverty Alleviation, New Delhi, the Government of Karnataka is pleased to appoint the following authorities to supervise the taking up Socio Economic and Caste Census-2011 with in their respective areas namely.

### I. PRINCIPAL SECC-2011 OFFICER

1) The Deputy Commissioner of the Districts (District Magistrate) is designated as the Principal SECC-2011 Officer (PSO) in respect of the Districts including the cities excepting the Corporation of Bruhat Bangalore Mahanagara Palike, Mysore city, Hubli-Dharwad Municipal Corporation, Mangalore City, Belgaum City, Gulburga City, Bellary City, & Davanagere City.
2) Commissioner, Bruhat Bangalore Mahanagara Palike
3) Commissioner, Mysore City Corporation.
4) Commissioner, Hubli-Dharwad Municipal Corporation
5) Commissioner, Mangalore City Corporation
6) Commissioner, Belgaum City Corporation
7) Commissioner, Gulburga City Corporation
8) Commissioner, Bellary City Corporation
9) Commissioner, Davanagere City Corporation

### II. ADDITIONAL PRINCIPAL SECC-2011 OFFICER

1) The Chief Executive Officer of the respective Zilla Panchayat is designated as ADDITIONAL PRINCIPAL SECC-2011 OFFICER in respect of the Districts including the cities excepting the Corporation of Bruhat Bangalore Mahanagara Palike, Mysore city, Hubli-Dharwad Municipal Corporation, Mangalore City, Belgaum City, Gulburga City, Bellary City, & Davanagere City.

### III. DISTRICT SECC-2011 OFFICER

1) The Deputy Commissioners of respective city corporations is designated as DISTRICT SECC-2011 OFFICER.
2) The Additional Deputy Commissioner of the respective District (Additional District Magistrate) is designated as the District SECC-2011 officer for the entire district concerned including the cities excepting the Corporation of Bruhat Bangalore Mahanagara Palike, Mysore city, Hubli-Dharwad Municipal Corporation, Mangalore City, Belgaum City, Gulburga City, Bellary City, & Davanagere City.

### IV. ASSISTANT DISTRICT SECC-2011 OFFICER:

1) The Chief Planning Officer(CPO) of the respective Zilla Panchayat is designated as Assistant District SECC-2011 Officer to assist the Principal SECC-2011 Officer
2) The Assistant Commissioner (Sub Divisional Magistrate) of the respective sub-division is designated as Assistant District SECC-2011 Officer to assist the Principal SECC-2011 Officer.

PRINCIPAL SECC-2011 OFFICER is authorized to appoint the charge officers in their respective jurisdiction.

By Order and in the name of the
Governor of Karnataka.

**(Dr. Amita Prasad)**
Principal Secretary to Government,
Rural Development & Panchayat Raj Dept.

**ಕರ್ನಾಟಕ ಸರ್ಕಾರ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ**

ಸಂಖ್ಯೆ ಗ್ರಾಅಪ 29 ಎಸ್‌ಜೆವೈ 2011 (ಎ.1) ಬೆಂಗಳೂರು, 29ನೇ ಸೆಪ್ಟೆಂಬರ್ 2011

**ಅಧಿಸೂಚನೆ**

ಭಾರತ ಸರ್ಕಾರವು ರಾಷ್ಟ್ರಾದ್ಯಂತ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯನ್ನು 2011 ನೇ ಸಾಲಿನಲ್ಲಿ ನಡೆಸಲು ನಿರ್ಧರಿಸಿದೆ. ಇದರಂತೆ ರಾಷ್ಟ್ರದ ಆಯಾಯ ರಾಜ್ಯಗಳು ಕೇಂದ್ರದ ಆರ್ಥಿಕ ಹಾಗೂ ತಾಂತ್ರಿಕ ಸಹಾಯದೊಂದಿಗೆ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯನ್ನು ನಡೆಸಲಾಗುವುದು. ಇದರನ್ವಯ ರಾಜ್ಯದಲ್ಲಿ ದಿನಾಂಕ : 01-11-2011 ರಿಂದ 31-12-2011 ರವರೆಗೆ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿಯನ್ನು ನಡೆಸಲು ದಿನಾಂಕ:22-09-2011 ರಲ್ಲಿ ಅಧಿಸೂಚನೆ ಹೊರಡಿಸಿದೆ. ಇದರಂತೆ ರಾಜ್ಯದಲ್ಲಿ ನೇಮಕಗೊಂಡ ಗಣತಿದಾರರು ಅವರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮನೆಗಳ ಸದಸ್ಯರುಗಳಿಂದ ಕೆಳಕಂಡ ಪ್ರಶ್ನೆಗಳನ್ನು ಕೇಳಿ ಮಾಹಿತಿಯನ್ನು ಸಂಗ್ರಹಿಸಲು ನಿರ್ದೇಶಿಸಲಾಗಿದೆ.

**ಗ್ರಾಮೀಣ**

**ಪ್ರತಿ ಕುಟುಂಬಕ್ಕೆ**

**ಭಾಗ-1**

**ವಸತಿ/ ನಿವಾಸ**

(1) ವಾಸದ ಮನೆಯ ಗೋಡೆಗಳಿಗೆ ಉಪಯೋಗಿಸಿದ ಪ್ರಮುಖ ಕಟ್ಟಡ ಸಾಮಗ್ರಿ:
ಸಂಕೇತವನ್ನು ನೀಡಿ

1ನೇ ಕಲಮು: . ಮನೆಯ ಕೊಠಡಿಯ ಗೋಡೆಯ ನಿರ್ಮಾಣದಲ್ಲಿ ಪ್ರಮುಖ ಸಾಮಗ್ರಿ:

1 ಹುಲ್ಲು/ ಹುಲ್ಲು ಹೊದಿಕೆ/ಬಿದಿರಿನ ತಡಿಕೆ, ಇತ್ಯಾದಿ
2 ಪ್ಲಾಸ್ಟಿಕ್/ ಪಾಲಿಥೀನ್
3 ಮಣ್ಣು / ಹಸಿ ಇಟ್ಟಿಗೆ
4 ಮರ
5 ಗಾರೆಗಚ್ಚಿಲ್ಲದಕಲ್ಲು
6 ಗಾರೆಗಚ್ಚಿನಿಂದ ಕೂರಿಸಿದ ಕಲ್ಲು
7 ಕಬ್ಬಿಣ (ಜಿ.ಐ)/ಲೋಹ/ಕಲ್ನಾರು(ಆಸ್ಬೆಸ್ಟಾಸ್) ಶೀಟುಗಳು
8 ಸುಟ್ಟ ಇಟ್ಟಿಗೆ
9 ಕಾಂಕ್ರೀಟು
10 ಇತರೆ/ಯಾವುದಾದರೂ

(2) ವಾಸದ ಮನೆಯ ಮೇಲ್ಛಾವಣಿಯ ನಿರ್ಮಾಣದ ಪ್ರಮುಖ ಸಾಮಗ್ರಿ:

2ನೇ ಕಲಮು: ವಾಸದ ಮನೆಯ ಮೇಲ್ಛಾವಣಿಯ ನಿರ್ಮಾಣದ ಪ್ರಮುಖ ಸಾಮಗ್ರಿ

1 ಹುಲ್ಲು/ ಹುಲ್ಲು ಹೊದಿಕೆ/ಬಿದಿರು/ ಮರ/ಮಣ್ಣುಇತ್ಯಾದಿ
2 ಪ್ಲಾಸ್ಟಿಕ್/ ಪಾಲಿಥೀನ್
3 ಕೈ ಹೆಂಚು
4 ಕಾರ್ಖಾನೆಯ ಹೆಂಚು
5 ಸುಟ್ಟಇಟ್ಟಿಗೆ
6 ಕಲ್ಲು
7 ಬಳಪದ ಕಲ್ಲು
8 ಕಬ್ಬಿಣ (ಜಿ.ಐ)/ಲೋಹ / ಕಲ್ನಾರಿನ ಶೀಟುಗಳು
9 ಕಾಂಕ್ರೀಟು
10 ಇತರೆ

(3) ಈ ಮನೆಯ ಮಾಲೀಕತ್ವದ ಸ್ಥಿತಿ (ಕೋಡ್ ನಂ ನೀಡಿ)

1= ಸ್ವಂತ; 2=ಬಾಡಿಗೆ; 3= ಇತರೆ

(4) ಕುಟುಂಬದ ವಶದಲ್ಲಿರುವ ವಾಸದ ಕೊಠಡಿಗಳ ಸಂಖ್ಯೆ (0,1,2,3, ಎಂದು ದಾಖಲಿಸಿ)

## ಭಾಗ -2

**ಕುಟುಂಬದ ಯಾವುದಾದರೂ ಸದಸ್ಯರು:**

(5) ಆದಿವಾಸಿಗಳ ಬುಡಕಟ್ಟು ಜನಾಂಗಕ್ಕೆ ಸೇರಿದ್ದಾರೆಯೇ ? 1- ಹೌದು 2= ಇಲ್ಲ

(6) ಕಾನೂನು ಪ್ರಕಾರ ಬಿಡುಗಡೆಗೊಂಡ ಜೀತ'ಮುಕ್ತರೇ? 1=ಹೌದು 2= ಇಲ್ಲ

(7) ದೈಹಿಕವಾಗಿ ಕಸ (ಮಲ)(ಮ್ಯಾನುಯಲ್ ಸ್ಕಾವೆಂಜರ್) ತೆಗೆಯುವವರೇ: 1-ಹೌದು 2= ಇಲ್ಲ

## ಭಾಗ-3

**ಉದ್ಯೋಗ ಮತ್ತು ಆದಾಯ ಗುಣ ಲಕ್ಷಣಗಳು:**

(8) ಕುಟುಂದ ಯಾವುದಾದರೂ ಸದಸ್ಯರಿಗೆ ನಿಯಮಿತ ವೇತನಾಧಾರಿತ ಉದ್ಯೋಗವಿದೆಯೇ?

1- ಹೌದು 2= ಇಲ್ಲ

(9) ಕಾಲಂ 8ಕ್ಕೆ ಉತ್ತರ ಹೌದು ಎಂದಾದರೆ, ವೇತನದ ಉದ್ಯೋಗದ ಕ್ಷೇತ್ರ (ಕೋಡ್ ನೀಡಿ)

1= ಸರ್ಕಾರಿ; 2= ಸಾರ್ವಜನಿಕ ಕ್ಷೇತ್ರ ; 3= ಖಾಸಗೀ ಕ್ಷೇತ್ರ

(10) ಆದಾಯತೆರಿಗೆ ಅಥವಾ ವೃತ್ತಿತೆರಿಗೆ ಪಾವತಿದಾರರೇ ? 1-ಹೌದು; 2=ಇಲ್ಲ

(11) ಸರ್ಕಾರದಡಿಯಲ್ಲಿ ನೋಂದಾಯಿಸಿದ ಯಾವುದಾದರೂ ಉದ್ಯಮವನ್ನು ಹೊಂದಿದ್ದೀರಾ/ ನಡೆಸುತ್ತಿದ್ದೀರಾ?

1- ಹೌದು 2= ಇಲ್ಲ

(12) ಗರಿಷ್ಟ ಮೊತ್ತದ ಆದಾಯ ಗಳಿಸುವ ಕುಟುಂಬದ ಸದಸ್ಯರ ಮಾಸಿಕ ವರಮಾನ

(ಕೋಡ್ ನೀಡಿ) 1= ರೂ 5,000ಕ್ಕಿಂತ ಕಡಿಮೆ; 2= 5,000-10,000 ದ ನಡುವೆ

3=ರೂ 10,000ಕ್ಕೂ ಹೆಚ್ಚು

(13) ಕುಟುಂಬದ ಆದಾಯದ ಪ್ರಮುಖ ಮೂಲ (ಕೋಡ್ ನೀಡಿ)

1. ವ್ಯವಸಾಯ
2. ದಿನಗೂಲಿ
3. ಅಲ್ಪಾವಧಿ ಅಥವಾ ಪೂರ್ಣಾವಧಿ ಮನೆಗೆಲಸ
4. ಫೋರೇಜಿಂಗ್(ಆಹಾರಕ್ಕಾಗಿ ಅಲೆದಾಡುವುದು) ಚಿಂದಿ ಆಯುವುದು
5. ಕೃಷಿಯೇತರ ಸ್ವಂತ ಉದ್ಯಮ
6. ಭಿಕ್ಷೆ/ ಧರ್ಮ/ ಕಾರುಣ್ಯ ಭಿಕ್ಷೆಎತ್ತುವುದು
7. ಇತರೆ

## ಭಾಗ-4

**ಆಸ್ತಿ ವಿವರ :**

ಕುಟುಂಬವು ಈ ಕೆಳಗಿನ ಯಾವುದಾದರೂ ಸ್ವತ್ತನ್ನು ಹೊಂದಿದೆಯೇ ?

(ಕೋಡ್ ನೀಡಿ)

(14) ರೆಫ್ರಿಜಿರೇಟರ್ 1- ಹೌದು 2= ಇಲ್ಲ

(15) ದೂರವಾಣಿ / ಮೊಬೈಲ್ 1= ಸ್ಥಿರ ದೂರವಾಣಿ ಮಾತ್ರ, 2=ಮೊಬೈಲ್ ಮಾತ್ರ

3= ಎರಡೂ ಇವೆ; 4= ಇಲ್ಲ.

(16) ನೋಂದಾವಣೆ ಕಡ್ಡಾಯವಾಗಿರುವ ಯಂತ್ರ ಚಾಲಿತ ಎರಡು/ಮೂರು/ನಾಲ್ಕು ಚಕ್ರದ ವಾಹನಗಳು ಅಥವಾ ಯಾಂತ್ರೀಕೃತ ಮೀನುದೋಣಿ 1-ಹೌದು:; 2= ಇಲ್ಲ

## ಭಾಗ –5

**5 'ಎ' ಭೂಮಿ ಹೊಂದಿದ್ದಲ್ಲಿ**

(17) ಸ್ವಂತ ಭೂಮಿ ಹೊಂದಿದ್ದಲ್ಲಿ (ಮನೆಯ ನೆಲಗಟ್ಟನ್ನು ಹೊರತುಪಡಿಸಿ)?
1– ಹೌದು 2= ಇಲ್ಲ ಭೂರಹಿತರಾದರೆ ಭಾಗ 5 'ಬಿ' ಗೆ ಹೋಗಿರಿ

(18) ನೀರಾವರಿ ಇಲ್ಲದ ಒಟ್ಟು ಜಮೀನು (ಎಕರೆಗಳಲ್ಲಿ)

(19) ನೀರಿನ ಆಸರೆಯಿರುವ ಎರಡು ಬೆಳೆ ತೆಗೆಯುವ ಜಮಿನು (ಎಕರೆಗಳಲ್ಲಿ)

(20) ಇತರೆ/ನೀರಾವರಿ ಜಮೀನು ( ಎಕರೆಗಳಲ್ಲಿ)

**5 'ಬಿ'ಇತರೆ ಚರಾಸ್ತಿ ಹೊಂದಿರುವ ವಿವರ**

(21) ಯಾಂತ್ರೀಕೃತ ಮೂರು/ನಾಲ್ಕು ಚಕ್ರಗಳ ಕೃಷಿ ಉಪಕರಣ 1–ಹೌದು: 2= ಇಲ್ಲ

(22) ನೀರಾವರಿ ಉಪಕರಣಗಳು(ಡೀಸೆಲ್/ಸೀಮೆಎಣ್ಣೆ/ವಿದ್ಯುತ್ ಚಾಲಿತ ಪಂಪಸೆಟ್,
–ಸ್ಪ್ರಿಂಕ್ಲರ್/ ಹನಿ ನೀರಾವರಿ ಯಂತ್ರೋಪಕರಣಗಳು (ಸೇರಿದಂತೆ)

(23) ಕಿಸಾನ್ ಕ್ರೆಡಿಟ್ ಕಾರ್ಡು ಸೌಲಭ್ಯ ರೂ.50,000/– ಕ್ಕಿಂತಲೂ ಹೆಚ್ಚು ಹೊಂದಿದ್ದಲ್ಲಿ
1–ಹೌದು; 2= ಇಲ್ಲ

**ಪ್ರತಿ ವ್ಯಕ್ತಿಗೂ:**

(1) ಕ್ರಮ ಸಂಖ್ಯೆ

(2) ವ್ಯಕ್ತಿಯ ಹೆಸರು (ಕುಟುಂಬದ ಮುಖ್ಯಸ್ಥರಿಂದ ಪ್ರಾರಂಭಿಸಿ)

(3) ಕುಟುಂಬದ ಮುಖ್ಯಸ್ಥರೊಡನೆ ಇರುವ ಸಂಬಂಧ
(ಸಂಬಂಧವನ್ನು ಪೂರ್ಣವಾಗಿ ದಾಖಲಿಸಿ)

(4) ಲಿಂಗ 1= ಗಂಡು; 2 = ಹೆಣ್ಣು

(5) ಜನ್ಮ ದಿನಾಂಕ ( ಇಂಗ್ಲೀಷ್ ಕ್ಯಾಲೆಂಡರ್ ಪ್ರಕಾರ)

(6) ವೈವಾಹಿಕ ಸ್ಥಿತಿ: 1=ಅವಿವಾಹಿತ; 2= ವಿವಾಹಿತ; 3=ವಿಧವೆ/ವಿಧುರ;
4= ಬೇರೆಯಾದವರು; 5= ವಿಚ್ಛೇದನ ಪಡೆದವರು

(7) ತಂದೆಯ ಹೆಸರು

(8) ತಾಯಿಯ ಹೆಸರಯ

(9) ಉದ್ಯೋಗ/ವೃತ್ತಿ
ಕೆಲಸದ ನೈಜ ವಿವರಣೆ ನೀಡಿ

(10) ಪೂರ್ಣಗೊಳಿಸಿದ ಗರಿಷ್ಟ ಶಿಕ್ಷಣ ಮಟ್ಟ

1= ಅನಕ್ಷರಸ್ಥ

2=ಅಕ್ಷರಸ್ಥ ಆದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕಿಂತ ಕೆಳಮಟ್ಟದ್ದು

3=ಪ್ರಾಥಮಿಕ,

4=ಮಾಧ್ಯಮಿಕ,

5=ಪ್ರೌಢಶಾಲೆ,

6=ಉನ್ನತಪ್ರೌಢಶಾಲೆ

7=ಪದವೀಧರ ಅಥವ ಅದಕ್ಕೂ ಹೆಚ್ಚಿನ ವಿಧ್ಯಾರ್ಹತೆ

8=ಇತರೆ (ವಿವರಿಸಿ)

(11) ವಿಕಲತೆ

1=ದೃಷ್ಟಿಹೀನತೆ

2=ಶ್ರವಣಶಕ್ತಿ ಹೀನತೆ

3=ಮೂಕ

4=ಚಲನಶಕ್ತಿಯಲ್ಲಿ ತೊಂದರೆ

5=ಬುದ್ಧಿ ಮಾಂದ್ಯತೆ

6=ಮಾನಸಿಕ ಅಸ್ವಸ್ಥ

7=ಇತರ ವಿಕಲತೆ

8=ಅನೇಕ ವಿಕಲತೆ

9=ವಿಕಲತೆಯಿಲ್ಲ

(12) ಧರ್ಮ

ಧರ್ಮದ ಹೆಸರನ್ನು ಪೂರ್ಣವಾಗಿ ಬರೆಯಿರಿ.

(13) ಜಾತಿ/ಪಂಗಡ ಸ್ಥಾನಮಾನ

ಕೋಡ್ ನೀಡಿ

ಪರಿಶಿಷ್ಠ ಜಾತಿ (ಎಸ್.ಸಿ)= 1

ಪರಿಶಿಷ್ಠ ಪಂಗಡ(ಎಸ್ ಟಿ)= 2

ಇತರೆ = 3

ಯಾವುದೇ ಜಾತಿ ಪಂಗಡಕ್ಕೆ ಸೇರದವರು = 4

(ಸೂ: ಪರಿಶಿಷ್ಠ ಜಾತಿಯ ಹಿಂದೂ, ಸಿಖ್, ಮತ್ತು ಬೌದ್ಧಧರ್ಮಗಳಲ್ಲಿ ಮಾತ್ರ ಇದ್ದವರು ಆದರೆ ಪರಿಶಿಷ್ಟ ಪಂಗಡದಲ್ಲಿ ಯಾವುದೇ ದರ್ಮದಲ್ಲಿರಬಹುದು)

14 ಕಾಲಂ 13ರಲ್ಲಿ ಕೋಡ್ 1,2, ಅಥವಾ 3 ಆಗಿದ್ದಲ್ಲಿ, ಜಾತಿಪಂಗಡದ ಹೆಸರನ್ನು ದಾಖಲಿಸಿ. ಕಾಲಂ 13ರಲ್ಲಿ ಸಂಕೇತ 4 ಇದ್ದಲ್ಲಿ, X ಅನ್ನು ಗುರುತಿಸಿ.

## ನಗರ ಪ್ರದೇಶ

## ಪ್ರತಿ ಕುಟುಂಬಕ್ಕೆ

## ಭಾಗ-1

**ವಸತಿ/ ನಿವಾಸ**

**(1) ಮನೆಯಕೊಠಡಿಯಗೋಡೆಯ ನಿರ್ಮಾಣದಲ್ಲಿ ಪ್ರಮುಖ ಸಾಮಗ್ರಿ(ಸಂಕೇತ ನೀಡಿ)**

**ಸಂಕೇತಗಳು:**

**ಕಲಮು 1 : ಮನೆಯ ಕೊಠಡಿಯ ಗೋಡೆಯ ನಿರ್ಮಾಣದಲ್ಲಿ ಪ್ರಮುಖ ಸಾಮಗ್ರಿ**

1 ಹುಲ್ಲು/ ಹುಲ್ಲು ಹೊದಿಕೆ/ಬಿದಿರು ತಡಿಕೆ

2 ಪ್ಲಾಸ್ಟಿಕ್/ ಪಾಲಿಥೀನ್

3 ಮಣ್ಣು / ಹಸಿ ಇಟ್ಟಿಗೆ

4 ಮರ

5 ಗಾರೆಗಚ್ಚಿಲ್ಲದಕಲ್ಲು

6 ಗಾರೆಗಚ್ಚಿನಿಂದ ಕೂರಿಸಿದ ಕಲ್ಲು

7 ಕಬ್ಬಿಣ (ಜಿ.ಐ)/ಲೋಹ / ಕಲ್ನಾರು (ಆಸ್‌ಬೆಸ್ಟಾಸ್ ಶೀಟುಗಳು)

8 ಸುಟ್ಟ ಇಟ್ಟಿಗೆ

9 ಕಾಂಕ್ರೀಟು

10 ಇತರೆ

**(3) ವಾಸದ ಕೊಠಡಿಯ ಮೇಲ್ಛಾವಣಿಯ ನಿರ್ಮಾಣದಲ್ಲಿ ಪ್ರಮುಖ ಸಾಮಗ್ರಿ**

**2ನೇ ಕಲಮು: ವಾಸದಕೊಠಡಿಯ ಮೇಲ್ಛಾವಣಿಯ ನಿರ್ಮಾಣದಲ್ಲಿ ಪ್ರಮುಖ ಸಾಮಗ್ರಿ**

1 ಹುಲ್ಲು/ ಹುಲ್ಲು ಹೊದಿಕೆ/ಬಿದಿರು/ ಮರ/ಮಣ್ಣುಇತ್ಯಾದಿ
2 ಪ್ಲಾಸ್ಟಿಕ್/ ಪಾಲಿಥೀನ್
3 ಕೈ ಹೆಂಚು
4 ಕಾರ್ಖಾನೆಯ ಹೆಂಚು
5 ಸುಟ್ಟ ಇಟ್ಟಿಗೆ
6 ಕಲ್ಲು
7 ಬಳಪದ ಕಲ್ಲು
8 ಕಬ್ಬಿಣ (ಜಿ.ಐ)/ಲೋಹ / ಕಲ್ನಾರಿನ ಶೀಟುಗಳು
9 ಕಾಂಕ್ರೀಟು/ ಗಾರೆ
10 ಇತರೆ ಯಾವುದಾದರೂ

**(3) ಮನೆಯ(ವಸತಿಯ) ಮಾಲಿಕತ್ವದ ಸ್ಥಿತಿ ( ಸಂಕೇತವನ್ನು ನೀಡಿರಿ)**

1=ಸ್ವಂತ; 2= ಬಾಡಿಗೆ; 3= ಹಂಚಿಕೆ ಆಧಾರದ ಮೆಲೆ; 4= ಉದ್ಯೋಗದಾತರೊಡನೆ ವಾಸ;
5= ಉದ್ಯೋಗದಾತರಿಂದ ನೀಡಲ್ಪಟ್ಟ ವಸತಿ; 6=ಇತರೆಯಾವುದಾದರೂ.

**(4)ಕುಟುಂಬದ ವಶದಲ್ಲಿರುವ ವಾಸಿಸುವ ಕೊಠಡಿಗಳ ಸಂಖ್ಯೆ ( 1,2,3, ಎಂದು ದಾಖಲಿಸಿ)**

## ಭಾಗ 2

**ಅನುಕೂಲಗಳು:**

(5) ಕುಡಿಯುವ ನೀರಿನ ಲಭ್ಯತೆ:
1= ಮನೆಯೊಳಗೆ; 2= ಮನೆಯ ಸಮೀಪ; 3= ದೂರದಲ್ಲಿ

(6) ಬೆಳಕಿನ ಮುಖ್ಯ ಮೂಲ
1=ವಿದ್ಯುತ್; 2= ಸೀಮೆ ಎಣ್ಣೆ; 3=ಸೌರಶಕ್ತಿ; 4= ಇತರೆ ತೈಲ; 5=ಇತರೆಯಾವುದಾದರೂ; 6= ಯಾವುದೂ ಇಲ್ಲ

(7) ಕುಟುಂಬದ ಪ್ರತ್ಯೇಕ ಉಪಯೋಗಕ್ಕಾಗಿಯೇ ಇರುವ ನೀರಿನ ವ್ಯವಸ್ಥೆರುವ ಶೌಚಾಲಯ 1=ಇದೆ; 2=ಇಲ್ಲ

(8) ಕೊಳೆ ನೀರಿನ ಹೊರಕೊಳವೆ ಯಾವುದಕ್ಕೆ ಸೇರಿಸಲ್ಪಟ್ಟಿದೆ:
1= ಮುಚ್ಚಿದಚರಂಡಿ; 2=ತೆರೆದಚರಂಡಿ; 3. ಚರಂಡಿಯಿಲ್ಲ

(9) ಕುಟುಂಬದ ಬಳಕೆಗಾಗಿಯೇ ಪ್ರತ್ಯೇಕಅಡಿಗೆಯಕೊಠಡಿ: 1=ಇದೆ; 2=ಇಲ್ಲ

## ಭಾಗ -3

**ಸ್ವತ್ತುಗಳು:**

ಕುಟುಂಬವು ಈ ಕೆಳಗಿನ ಸ್ವತ್ತುಗಳನ್ನು ಹೊಂದಿದೆಯೇ ? (ಸಂಕೇತಗಳನ್ನು ನೀಡಿ)

(10) ಶೈತ್ಯಕೋಶ (ರೆಫ್ರಿಜಿರೇಟರ್) 1=ಇದೆ; 2=ಇಲ್ಲ

(11) ದೂರವಾಣಿ/ ಮೊಬೈಲ್‌ದೂರವಾಣಿ: 2=ಕೇವಲ ಸ್ಥಿರದೂರವಾಣಿ; 2=ಕೇವಲ ಮೊಬೈಲ್‌ದೂರವಾಣಿ;
3= ಎರಡೂ ಇವೆ; 4= ಎರಡೂಇಲ್ಲ

(12) ಕಂಪ್ಯೂಟರ್ / ಲ್ಯಾಪ್‌ಟಾಪ್‌ಕಂಪ್ಯೂಟರ್ 1=ಅಂತರ್ಜಾಲ ಸಂಪರ್ಕ ಸಹಿತ; 2= ಅಂತರ್ಜಾಲಸಂಪರ್ಕರಹಿತ; 3= ಇಲ್ಲ

(13) ಮೋಟಾರು ಚಾಲಿತ ವಾಹನ: 1= 2/3 ಚಕ್ರಗಳ ವಾಹನ; 2=ನಾಲ್ಕು ಚಕ್ರದ ವಾಹನ; 3= ಇಲ್ಲ

(14) ವಾತಾನುಕೂಲಕ( ಏರ್‌ಕಂಡೀಶನರ್): 1= ಇದೆ; 2=ಇಲ್ಲ

(15) ಬಟ್ಟೆಶುಚಿಗೊಳಿಸುವ ಯಂತ್ರ: 1=ಇದೆ; 2=ಇಲ್ಲ

**ಪ್ರತಿ ವ್ಯಕ್ತಿಗೂ:**

(1) ಕ್ರಮಾಂಕ

(2) ವ್ಯಕ್ತಿಯ ಹೆಸರು ( ಕುಟುಂಬದ ಮುಖ್ಯಸ್ಥರಿಂದ ಪ್ರಾರಂಭಿಸಿ)

(3) ಕುಟುಂಬದ ಮುಖ್ಯಸ್ಥರನೊಡನೆ ಇರುವ ಸಂಬಂಧ (ಸಂಬಂಧವನ್ನು ಪೂರ್ಣ ದಾಖಲಿಸಿ)

(4) ಲಿಂಗ 1= ಗಂಡು; 2 = ಹೆಣ್ಣು

(5) ಜನ್ಮ ದಿನಾಂಕ ( ಇಂಗ್ಲೀಷ್ ಕಾಲಮಾನದ ಪ್ರಕಾರ)

(6) ವೈವಾಹಿಕ ಸ್ಥಿತಿ: 1= ವಿವಾಹವೇ ಆಗಿಲ್ಲ; 2=ಪ್ರಸಕ್ತ ವಿವಾಹಿತ; 3=ವಿಧವೆ/ವಿಧುರ; 4= ಪ್ರತ್ಯೇಕವಾಗಿ ವಾಸಿಸುವವರು; 5= ವಿಚ್ಛೇದಿತ

(7) ತಂದೆಯ ಹೆಸರು

(8) ತಾಯಿಯ ಹೆಸರು

(9) ಉದ್ಯೋಗ/ವೃತ್ತಿ ನಿರ್ಧಿಷ್ಠ ಕೆಲಸವನ್ನು ವಿವರಿಸಿ

(10) ಪೂರ್ಣ ಗೊಳಿಸಿದ ಗರಿಷ್ಠ ಶಿಕ್ಷಣ ಮಟ್ಟ

1= ಅನಕ್ಷರಸ್ಥ

2=ಅಕ್ಷರಸ್ಥ ಆದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕಿಂತ ಕೆಳಮಟ್ಟದ್ದು

3=ಪ್ರಾಥಮಿಕ,

4=ಮಾಧ್ಯಮಿಕ,

5=ಪ್ರೌಢಶಾಲೆ,

6=ಉನ್ನತ ಪ್ರೌಢಶಾಲೆ

7=ಪದವೀಧರ ಅಥವ ಅದಕ್ಕೂ ಹೆಚ್ಚಿನ ಪದವಿ

8=ಇತರೆ (ವಿವರಿಸಿ)

(11) ದುಡಿಮೆಯಿಂದ ಬರುವ ಆದಾಯದ ಮುಖ್ಯ ಮೂಲಗಳು:

1= ಭಿಕ್ಷಾಟನೆ ಚಿಂದಿ ಆಯುವುದು

2=ಮನೆ ಕೆಲಸ

3= ಬೀದಿ ಬದಿಯ ವ್ಯಾಪಾರಿ/ಸಮಗಾರ/ರಸ್ತೆಯಲ್ಲಿ ಮಾರಾಟಗಾರ/ಬೀದಿಯಲ್ಲಿ ಕೆಲಸಮಾಡುವವರು,

4=ಕಟ್ಟಡ ನಿರ್ಮಾಣ ಕೆಲಸಗಾರ/ಜಲಸಂಪರ್ಕಗಾರ(ಪ್ಲಂಬರ್)
ಕಲ್ಲುಕೆಲಸಗಾರ(ಮೇಸನ್)
ಶ್ರಮಗಾರ/ ಬಣ್ಣ ಬಳಿಯುವವರು/ ಬೆಸುಗೆ ಹಾಕುವವರು/ ಭದ್ರತಾದಳ/ಕೂಲಿ
ಮತ್ತಿತರೆ ತಲೆಮೇಲೆ ಹೊರೆ ಹೊತ್ತು ಕೆಲಸ ಮಾಡುವವರು

5= ಕಸಗುಡಿಸುವವರು/ಇತರ ಸ್ವಚ್ಛತಾಕಾರ್ಯದ ಸಿಬ್ಬಂದಿ/ ಮಾಲಿ

6= ಗೃಹ–ಉದ್ಯಮಗಳ ಕಾರ್ಮಿಕರು/ಕುಶಲ ಕರ್ಮಿಗಳು/ಕರಕುಶಲ ಕಾರ್ಮಿಕರು/ದರ್ಜಿಗಳು

7=ಸಾರಿಗೆಕಾರ್ಮಿಕರು/ಚಾಲಕರು/ನಿರ್ವಾಹಕರು/ಚಾಲಕರು–ನಿರ್ವಾಹಕರಿಗೆ ಸಹಾಯಕರು/
ಕೈಗಾಡಿ ಎಳೆಯುವವರು/ರಿಕ್ಷಾ ಎಳೆಯುವವರು

8= ಅಂಗಡಿ ಕೆಲಸಗಾರರು/ಸಹ ಕಾರ್ಮಿಕರು/ಸಣ್ಣ ಉದ್ಯಮಗಳಲ್ಲಿ ಜವಾನರು/ಸಹಾಯಕರು/ವಿತರಕರು
ಸಹೋದ್ಯೋಗಿಗಳು/ಸೇವಕರು/(ಸಹಾಯಕರು)/ಮಾಣಿಗಳು

9= ವಿದ್ಯುತ್ ಕೆಲಸಗಾರರು /ಮೆಕ್ಯಾನಿಕ್ ಗಳು/ ಜೋಡಣೆ ಕೆಲಸಗಾರರು/ರಿಪೇರಿ ಕೆಲಸಗಾರರು

10= ಶುದ್ಧೀಕರಿಸುವವರು / ಪಹರೆಯವರು(ಚೌಕೀದಾರರು)

11= ಇತರ ಕೆಲಸದವರು

12= ನಿರುದ್ಯೋಗಿಗಳು (ನಿವೃತ್ತಿವೇತನ/ಬಾಡಿಗೆ/ಬಡ್ಡಿ ಇತ್ಯಾದಿ ವರಮಾನಗಳ ಮೂಲಕ ಜೀವನ)

**(12) ವೇತನದಾರರು ವೇತನ (ಕೂಲಿ) ಗಳಿಸುವುದು**

1= ಪ್ರತಿ ನಿತ್ಯದ ವೇತನ

2= ವಾರಕ್ಕೊಮ್ಮೆ

3=ತಿಂಗಳಿಗೊಮ್ಮೆ

4= ಅನಿರ್ದಿಷ್ಟವಾಗಿ

5= ವೇತನದಾರರಲ್ಲದವರು

**(13) ವಿಕಲತೆ**

1= ದೃಷ್ಟಿಹೀನ

2= ಶ್ರವಣಶಕ್ತಿ ಹೀನ (ಕಿವುಡು)

3= ಮೂಕ

4= ಚಲನಶಕ್ತಿಯಲ್ಲಿ ತೊಂದರೆ

5= ಬುದ್ಧಿ ಮಾಂದ್ಯ

6= ಮಾನಸಿಕ ಅಸ್ವಾಸ್ಥ್ಯ

7= ಇತರ ವಿಕಲಾಂಗತೆ

8= ಅನೇಕ ವಿಕಲಾಂಗತೆ

9= ವಿಕಲಾಂಗತೆಯಿಲ್ಲ

**(14) ದೀರ್ಘಕಾಲದ ವ್ಯಾಧಿಯುಳ್ಳವರು:**

1= ಅರ್ಬುದರೋಗ (ಕ್ಯಾನ್ಸರ್ )

2= ಏಡ್ಸ್/ ಹೆಚ್..ಐ.

3=ಕ್ಷಯರೋಗ

4= ಕುಷ್ಠ ರೋಗ

5= ಇತರ ಖಾಯಿಲೆಗಳು

6= ದೀರ್ಘಕಾಲಿಕವಲ್ಲದ ಖಾಲೆಗಳು

**(15) ಧರ್ಮ**

ಧರ್ಮದ ಹೆಸರನ್ನು ವಿವರವಾಗಿ ಬರೆಯಿರಿ

**(16) ಜಾತಿ/ ವರ್ಗ ಬುಡಕಟ್ಟು**

ಸಂಕೇತಗಳನ್ನು ನೀಡಿ

ಪರಿಶಿಷ್ಟ ಜಾತಿ( ಎಸ್ ಸಿ) –1

ಪರಿಶಿಷ್ಟ ವರ್ಗ( ಎಸ್ ಟಿ)– 2

ಇತರರು –3

ಜಾತಿ/ವರ್ಗ ವಿಲ್ಲದವರು

(ಸೂ: ಪರಿಶಿಷ್ಠ ಜಾತಿಯು ಕೇವಲ ಹಿಂದೂ, ಸಿಖ್, ಮತ್ತು ಬೌಧ್ಧರಲ್ಲಿರಬಹುದು ಆದರೆ ಪರಿಶಿಷ್ಠ ವರ್ಗವು ಯಾವುದೇ ಧರ್ಮದಲ್ಲಿರಬಹುದು.)

(17) 11ನೇ ಕಲಮಿನಲ್ಲಿ ಸಂಕೇತ 1,2 ಅಥವಾ 3 ಇದ್ದರೆಜಾತಿ/ ವರ್ಗದ ಹೆಸರನ್ನು ಬರೆರಿ

16ನೇ ಕಲಮಿನಲ್ಲಿ ಸಂಕೇತ 4 ಇದ್ದರೆ 'X' ಗುರುತನ್ನು ಹಾಕಿರಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಅಮಿತಾ ಪ್ರಸಾದ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 29 ಎಸ್‌ಜೆವೈ 2011 (ಎ–1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ,
ಬೆಂಗಳೂರು ದಿನಾಂಕ: 28–09–2011

## ಸುತ್ತೋಲೆ

**ವಿಷಯ** : ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ 2011ನ್ನು (ಸೋಯೋ ಎಕನಾಮಿಕ್ ಅಂಡ್ ಕ್ಯಾಸ್ಟ್ ಸೆನ್ಸಸ್) ನವೆಂಬರ್ ಮತ್ತು ಡಿಸೆಂಬರ್ – 2011 ರಲ್ಲಿ ನಡೆಸುವ ಬಗ್ಗೆ.

**ಉಲ್ಲೇಖ** :
1) ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ರಾಜ್ಯದ ಮುಖ್ಯ ಕಾರ್ಯದರ್ಶಿಯವರಿಗೆ ಬರೆದ ಅ.ಸ.ಪತ್ರ ಸಂಖ್ಯೆ: ಕ್ಯೂ 14016/6/2011/ಜೆ1/(ಆರ್‌ಡಿ) ದಿನಾಂಕ:30–05–2011.
2) ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನ ಮಂತ್ರಾಲಯ ಅಧಿಸೂಚನೆ ಸಂಖ್ಯೆ FNO.K-14914/61/2010/ UPA (Vol-II) ದಿನಾಂಕ:15–06–2011.
3) ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 29 ಎಸ್‌ಜೆವೈ 2011 (ಎ–1), ದಿನಾಂಕ:03–08–2011
4) ಸಚಿವ ಸಂಪುಟದ ಪ್ರಕರಣ ಸಂಖ್ಯೆ ಸಿ. 444 2011 (Sl.No.12) ದಿನಾಂಕ:15–09–2011.
5) ಸಂಖ್ಯೆ ಗ್ರಾಅಪ 29 ಎಸ್‌ಜೆವೈ 2011 (A1) ದಿನಾಂಕ:22–09–2011

* * *

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಹಾಗೂ ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನ ಮಂತ್ರಾಲಯದ ನಿರ್ದೇಶನಗಳಂತೆ (ಉಲ್ಲೇಖ 1 ಮತ್ತು 2) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳನ್ನು ಗುರುತಿಸುವ ಸಲುವಾಗಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಗಣತಿ–2011 (SECC–2011) ಯನ್ನು ನಡೆಸಲು ಸಚಿವ ಸಂಪುಟವು ಒಪ್ಪಿಗೆ ನೀಡಿದೆ (ಉಲ್ಲೇಖ 4). ಈ ಗಣತಿಯನ್ನು ನವೆಂಬರ್ ಮತ್ತು ಡಿಸೆಂಬರ್–2011 ರ ಮಾಹೆಯಲ್ಲಿ ಎರಡು ಹಂತಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ. (ಉಲ್ಲೇಖ 5)

ಈ ಸಮೀಕ್ಷೆಯನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ನಡೆಸಲು ಈಗಾಗಲೇ ದಿನಾಂಕ: 03–08–2011 ರಾಜ್ಯ ಸರ್ಕಾರವು ಈಗಾಗಲೇ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳ ರಚನೆ ಹಾಗೂ ನೋಡಲ್ ಅಧಿಕಾರಿಗಳನ್ನು ನೇಮಿಸಲು ಆದೇಶ ಹೊರಡಿಸಲಾಗಿದೆ (ಉಲ್ಲೇಖ 3). ಮುಂದುವರೆದು SECC–2011 ನ್ನು ನವೆಂಬರ್ ಮತ್ತು ಡಿಸೆಂಬರ್–2011 ರ ಮಾಹೆಯಲ್ಲಿ ಪೂರ್ಣಗೊಳಿಸಬೇಕಾಗಿದೆ. ಇದಕ್ಕಾಗಿ ಇದರೊಂದಿಗೆ ಗಣತಿಯ ವೇಳಾಪಟ್ಟಿ ಲಗತ್ತಿಸಿದೆ. (ಅನುಬಂಧ–1) ಗಣತಿಯನ್ನು ವೇಳಾಪಟ್ಟಿಯಂತೆ ತೆಗೆದುಕೊಳ್ಳುವುದಲ್ಲದೆ ಪ್ರಧಾನ SECC–2011 ಅಧಿಕಾರಿಗಳು ಈ ಕೆಳಕಂಡ ಸೂಚನೆಗಳನ್ನು ತಪ್ಪದೆ ಪಾಲಿಸುವುದು.

### I. SECC-2011ರ ವೇಳಾಪಟ್ಟಿ:

| ಮೊದಲನೇ ಹಂತ:<br>ದಿ:01–11–2011 ರಿಂದ 10–12–2011<br>ಬೆಂಗಳೂರು ವಿಭಾಗ | ಎರಡನೇ ಹಂತ:<br>ದಿ:20–11–2011 ರಿಂದ 30–12–2011<br>ಮೈಸೂರು ವಿಭಾಗ |
|---|---|
| 1) ಬೆಂಗಳೂರು(ನಗರ) | 1) ಮೈಸೂರು |
| 2) ಬೆಂಗಳೂರು(ಗ್ರಾಮಾಂತರ) | 2) ಚಾಮರಾಜನಗರ |
| 3) ಚಿತ್ರದುರ್ಗ | 3) ಚಿಕ್ಕಮಗಳೂರು |
| 4) ಚಿಕ್ಕಬಳ್ಳಾಪುರ | 4) ದಕ್ಷಿಣ ಕನ್ನಡ |
| 5) ದಾವಣಗೆರೆ | 5) ಹಾಸನ |
| 6) ಕೋಲಾರ | 6) ಕೊಡಗು |
| 7) ರಾಮನಗರ | 7) ಮಂಡ್ಯ |
| 8) ಶಿವಮೊಗ್ಗ | 8) ಉಡುಪಿ |
| 9) ತುಮಕೂರು | |

| ಬೆಳಗಾಂ ವಿಭಾಗ | | ಗುಲ್ಬರ್ಗ ವಿಭಾಗ | |
|---|---|---|---|
| 1) | ಬೆಳಗಾಂ | 1) | ಗುಲ್ಬರ್ಗ |
| 2) | ಬಾಗಲಕೋಟೆ | 2) | ಬೀದರ್ |
| 3) | ಬಿಜಾಪುರ | 3) | ಬಳ್ಳಾರಿ |
| 4) | ಧಾರವಾಡ | 4) | ಕೊಪ್ಪಳ |
| 5) | ಗದಗ | 5) | ರಾಯಚೂರು |
| 6) | ಹಾವೇರಿ | 6) | ಯಾದಗಿರಿ |
| 7) | ಉತ್ತರಕನ್ನಡ | | |

## II. ಸಾರ್ವಜನಿಕ ತಿಳುವಳಿಕೆ ಮತ್ತು ವ್ಯಾಪಕ ಪ್ರಚಾರ

ಬಿಬಿಎಂಪಿ ವಾರ್ಡ್ ಮಟ್ಟಗಳಲ್ಲಿ/ಮಹಾನಗರಪಾಲಿಕೆಗಳ ವಾರ್ಡ್ ಮಟ್ಟಗಳಲ್ಲಿ ಹಾಗೂ ಜಿಲ್ಲಾ/ ತಾಲ್ಲೂಕು/ ಗ್ರಾಮ ಮಟ್ಟದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ ಬಗ್ಗೆ ಸಾರ್ವಜನಿಕರ ಗಮನಕ್ಕೆ ತರಲು ಪ್ರಚಾರ ಕಾರ್ಯಕ್ರಮ ಕೆಳಕಂಡಂತೆ ಕೈಗೊಳ್ಳುವುದು:

1) ಭಿತ್ತಿಪತ್ರಗಳ ಮುಖಾಂತರ
2) ಬ್ಯಾನರ್‌ಗಳ ಮುಖಾಂತರ
3) ಮಾಧ್ಯಮಗಳ ಮುಖಾಂತರ
4) ಧ್ವನಿವರ್ಧಕ, ಇತ್ಯಾದಿಗಳ ಮುಖಾಂತರ

## III. ಬಿಬಿಎಂಪಿ ಬೆಂಗಳೂರು ಹಾಗೂ ಜಿಲ್ಲಾ ಮಟ್ಟದಲ್ಲಿ ಸಭೆ ನಡೆಸುವ ಬಗ್ಗೆ:

ಎಲ್ಲಾ ಪ್ರಧಾನ SECC-2011 ಅಧಿಕಾರಿಗಳು ನಿಯತವಾಗಿ ಸಭೆ ನಡೆಸಿ ಗಣತಿಯ ಪ್ರಗತಿ ಯನ್ನು ಅಂಕಿಅಂಶಗಳೊಂದಿಗೆ SECC-2011ರ ರಾಜ್ಯಮಟ್ಟದ ನೋಡಲ್ ಅಧಿಕಾರಿಗೆ ಸಲ್ಲಿಸತಕ್ಕದ್ದು.

## IV. ನೋಡಲ್ ಅಧಿಕಾರಿ ಹಾಗೂ ಇತರೆ ಅಧಿಕಾರಿ/ ಸಿಬ್ಬಂದಿಗಳ ನೇಮಕ:

### i) ವಿವಿಧ ಅಧಿಕಾರಿಗಳ ನೇಮಕಾತಿ:

ಸೂಚನೆಯನ್ವಯ ನೋಡಲ್ ಅಧಿಕಾರಿಗಳು, ಚಾರ್ಜ ಅಧಿಕಾರಿಗಳು, ಕ್ಲೈಮ್ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆ ದಿನಾಂಕ:05-10-2011 ರೊಳಗೆ ಪೂರ್ಣಗೊಳಿಸುವುದು.

### ii) ಸಿಬ್ಬಂದಿ ನೇಮಕಾತಿ:

ಎ) ಪ್ರಧಾನ SECC-2011 ಅಧಿಕಾರಿಗಳು, ಅಧಿಕ ಪ್ರಧಾನ ಖಇಅಅ-2011 ಅಧಿಕಾರಿಗಳ ಕಛೇರಿಗೆ:

ಅಧಿಕಾರಿಗಳು ತಮ್ಮ ಕಛೇರಿಗಳಿಗೆ ಕೆಳಕಂಡ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ನಿಗದಿತ ವೇತನದನ್ವಯ (ಜನಗಣತಿ 2011ಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಿಂದ ಹೊರಡಿಸಲಾದ ಸರ್ಕಾರಿ ಆದೇಶ ಕ್ರ.ಸಂ.ಆರ್‌ಡಿ 19.ಇಟಿಸಿ.2010 ದಿನಾಂಕ 15-03-2010 ರಲ್ಲಿ ನಿಗದಿಪಡಿಸಿದಂತೆ) ನೇಮಕಾತಿ ಮಾಡಿಕೊಳ್ಳತಕ್ಕದ್ದು.

| | | | |
|---|---|---|---|
| 1) | ಸಹಾಯಕರು | – | 03 |
| 2) | ಡಾಟಾ ಎಂಟ್ರಿ ಆಪರೇಟರ್ | – | 01 |
| 3) | ಗ್ರೂಪ್-ಡಿ | – | 01 |

**ಬಿ) ಚಾರ್ಜ್ ಆಫೀಸ್‌ಗೆ:**

ಚಾರ್ಜ್ ಆಫೀಸ್‌ಗೆ ಕೆಳಕಂಡ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ 6 ತಿಂಗಳ ಅವಧಿಗೆ ಹೊರ ಗುತ್ತಿಗೆ ಆಧಾರದ ಮೇಲೆ ನಿಗದಿತ ವೇತನದನ್ವಯ (ಜನಗಣತಿ 2011ಕ್ಕೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಯಿಂದ ಹೊರಡಿಸಲಾದ ಸರ್ಕಾರಿ ಆದೇಶ ಕ್ರ.ಸಂ.ಆರ್‌ಡಿ 19.ಇಟಿಸಿ.2010 ದಿನಾಂಕ 15-03-2010 ರಲ್ಲಿ ನಿಗದಿಪಡಿಸಿದಂತೆ) ನೇಮಕಾತಿ ಮಾಡಿಕೊಳ್ಳತಕ್ಕದ್ದು.

| | | | |
|---|---|---|---|
| 1) | ಸಹಾಯಕರು | – | 02 |
| 2) | ಡಾಟಾ ಎಂಟ್ರಿ ಆಪರೇಟರ್ | – | 01 |
| 3) | ಗ್ರೂಪ್-ಡಿ | – | 01 |

ಸಿ) BEL ಸಂಸ್ಥೆ ವತಿಯಿಂದ Tablet PC ಪಡೆಯಲು, ಸರ್ಕಾರದಿಂದ ಮುದ್ರಿತ ಗಣತಿ ಸಾಮಗ್ರಿಗಳು ಹಾಗೂ ಗಣತಿ ನಿರ್ದೇಶನಾಲಯದಿಂದ ರವಾನಿಸಿದ ಮುದ್ರಣ ಸಾಮಗ್ರಿಗಳನ್ನು ಪಡೆಯಲು, ಅಧಿಕಾರಿಗಳನ್ನು ನಾಮಾಂಕಿತಗೊಳಿಸಿ ದಿ:30-09-2011 ರೊಳಗೆ ತಿಳಿಸತಕ್ಕದ್ದು.

ಡಿ) ಮುಖ್ಯ ತರಬೇತಿದಾರರು(ಮಾಸ್ಟರ್ ಟ್ರೈನರ್), ಮೇಲ್ವಿಚಾರಕರು ಹಾಗೂ ಗಣತಿದಾರರ ನೇಮಕಾತಿ ಪ್ರಕ್ರಿಯೆಯನ್ನು ಕೆಳಕಂಡಂತೆ ಪೂರ್ಣಗೊಳಿಸಿ ದಿ:05-10-2011 ರೊಳಗೆ ತಿಳಿಸತಕ್ಕದ್ದು.

ಗಣತಿ ನಿರ್ದೇಶನಾಲಯ ಈಗಾಗಲೇ ಗುರುತಿಸಿರುವ ಎನ್ಯೂಮರೇಷನ್ ಬ್ಲಾಕ್‌ಗಳ ಆಧಾರದ ಮೇಲೆ

1) 04 ಎನ್ಯೂಮರೇಷನ್ ಬ್ಲಾಕುಗಳಿಗೆ ಒಬ್ಬ ಗಣತಿದಾರ,
2) 06 ಗಣತಿದಾರರಿಗೆ ಒಬ್ಬ ಮೇಲ್ವಿಚಾರಕ,
3) 45 ಗಣತಿದಾರರಿಗೆ (ಮೇಲ್ವಿಚಾರಕರನ್ನೊಳಗೊಂಡಂತೆ) ಒಬ್ಬ ಮಾಸ್ಟರ್ ಟ್ರೈನರ್.

## V ತರಬೇತಿ:

* ಚಾರ್ಜ್ ಅಧಿಕಾರಿಗಳಿಗೆ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ನೋಡಲ್ ಅಧಿಕಾರಿಗಳಿಗೆ ಮತ್ತು ಉಸ್ತುವಾರಿ ಅಧಿಕಾರಿಗಳಿಗೆ ದಿನಾಂಕ:10-10-2011ರಂದು ತರಬೇತಿ ನಡೆಸುವುದು.

### ಮೊದಲನೆ ಹಂತದ ಜಿಲ್ಲೆಗಳು

ಎ) ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿಯನ್ನು ದಿನಾಂಕ:13-10-2011, 14-10-2011, 15-10-2011 ರ ಈ ಮೂರು ದಿನಗಳಲ್ಲಿ ನಡೆಸತಕ್ಕದ್ದು.

ಬಿ) ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಎರಡು ಹಂತಗಳಲ್ಲಿ ತಾಲ್ಲೂಕು/ಹೋಬಳಿ ಮಟ್ಟದಲ್ಲಿ ನಡೆಸತಕ್ಕದ್ದು.

ಒಂದನೇ ಹಂತ:- ದಿನಾಂಕ:17-10-2011 ರಿಂದ 19-10-2011

**ಎರಡನೇ ಹಂತ:-ದಿನಾಂಕ:20-10-2011 ರಿಂದ 22-10-2011**

ತರಬೇತಿಯ ಅಂತಿಮ ದಿನದಂದು ಬಿಇಎಲ್ ಸಂಸ್ಥೆಯಿಂದ ನೇಮಕಗೊಂಡ ಡಾಟಾ ಎಂಟ್ರಿ ಅಪರೇಟರ್‌ಗಳೊಂದಿಗೆ ಸಮನ್ವಯಿಸುವುದು.

* ಮೇಲ್ವಿಚಾರಕರಿಗೆ ಹಾಗೂ ಗಣತಿದಾರರಿಗೆ ತರಬೇತಿ ಕಿಟ್ ಖರೀದಿ ಮಾಡಿ ತರಬೇತಿ ಅಂತಿಮ ದಿನ ವಿತರಿಸತಕ್ಕದ್ದು. (ಗರಿಷ್ಠ ವೆಚ್ಚ ರೂ.250/- ಪ್ರತಿ ತರಬೇತಿ ಕಿಟ್‌ಗೆ)

### ಎರಡನೆ ಹಂತದ ಜಿಲ್ಲೆಗಳು:

ಎ) ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿಯನ್ನು ದಿನಾಂಕ:02-11-2011, 03-11-2011, 04-11-2011 ಈ ಮೂರು ದಿನಗಳಲ್ಲಿ ನಡೆಸತಕ್ಕದ್ದು.

ಬಿ) ಗಣತಿದಾರರು ಹಾಗೂ ಮೇಲ್ವಿಚಾರಕರಿಗೆ ಎರಡು ಹಂತಗಳಲ್ಲಿ ತಾಲ್ಲೂಕು/ಹೋಬಳಿ ಮಟ್ಟದಲ್ಲಿ ನಡೆಸತಕ್ಕದ್ದು.

ಒಂದನೇ ಹಂತ:- ದಿನಾಂಕ:10-11-2011 ರಿಂದ 12-11-2011

ಎರಡನೇ ಹಂತ:-ದಿನಾಂಕ:14-11-2011 ರಿಂದ 16-11-2011

ತರಬೇತಿಯ ಅಂತಿಮ ದಿನದಂದು ಬಿಇಎಲ್ ಸಂಸ್ಥೆಂದ ನೇಮಕಗೊಂಡ ಡಾಟಾ ಎಂಟ್ರಿ ಅಪರೇಟರ್‌ಗಳೊಂದಿಗೆ ಸಮನ್ವುಸುವುದು.

* ಮೇಲ್ವಿಚಾರಕರಿಗೆ ಹಾಗೂ ಗಣತಿದಾರರಿಗೆ ತರಬೇತಿ ಕಿಟ್ ಖರೀದಿ ಮಾಡಿ ತರಬೇತಿ ಅಂತಿಮ ದಿನ ವಿತರಿಸತಕ್ಕದ್ದು. (ಗರಿಷ್ಠ ವೆಚ್ಚ ರೂ.250/- ಪ್ರತಿ ತರಬೇತಿ ಕಿಟ್‌ಗೆ)

## VI. SECC-2011 ಕ್ಕೆ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆಯುವುದು.

ಸರ್ಕಾರವು ಪ್ರಧಾನ SECC-2011 ಅಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಿದ್ದು, ಕೂಡಲೇ ಹೊಸದಾಗಿ ಬ್ಯಾಂಕ್ ಖಾತೆಯನ್ನು ತೆರೆದು, ಅದರ ಪೂರ್ಣ ವಿವರವನ್ನು ನಿರ್ದೇಶಕರು, ಸ್ವ ಉದ್ಯೋಗ ಕಾರ್ಯಕ್ರಮ ಶಾಖೆ ಹಾಗೂ SECC-2011 ರಾಜ್ಯದ ನೋಡಲ್ ಅಧಿಕಾರಿ/ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ನಗರ ಪ್ರದೇಶಗಳ ಗಣತಿಯ ನೋಡಲ್ ಅಧಿಕಾರಿಯವರಿಗೆ ತಿಳಿಸತಕ್ಕದ್ದು.

ಈಗಾಗಲೇ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ:21-08-2010 ಮತ್ತು 28-01-2011 ರಲ್ಲಿ ಅನುದಾನ ಬಿಡುಗಡೆಯಾಗಿದೆ. (ಅನುಬಂಧ-2 ಲಗತ್ತಿಸಿದೆ). ಪೈಲಟ್ ಗಣತಿಗೆ ಮತ್ತು ಪ್ರಸಕ್ತ ಗಣತಿಗೆ ಈವರೆಗೆ
ಖರ್ಚಾಗಿರುವ ಅನುದಾನ ಹೊರತುಪಡಿಸಿ ಉಳಿಕೆ ಹಣವನ್ನು ಆಯಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ವರ್ಗಾಯಿಸಿಕೊಂಡು ತಿಳಿಸತಕ್ಕದ್ದು.

## VII. ಪ್ರಗತಿ ವರದಿ ಸಲ್ಲಿಸುವಿಕೆ:

ಪ್ರಧಾನ SECC-2011 ಅಧಿಕಾರಿಯವರು ತಾಲ್ಲೂಕುವಾರು ಪ್ರಗತಿಯನ್ನು ಕಾಲಕಾಲಕ್ಕೆ ಪರಿಶೀಲಿಸುವುದು. ಹಾಗೂ ಜಿಲ್ಲೆಯ ಪ್ರಗತಿಯನ್ನು ಸಂಬಂಧಪಟ್ಟ ನೋಡಲ್ ಅಧಿಕಾರಿಯವರಿಗೆ ಸಲ್ಲಿಸತಕ್ಕದ್ದು.

## VIII. ಚಾರ್ಜ್ ಸೆಂಟರ್:

* ಚಾರ್ಜ್ ಸೆಂಟರ್‌ನ್ನು ಈಗಾಗಲೇ ತಿಳಿಸಿರುವಂತೆ ಸಿದ್ಧಪಡಿಸುವ ಬಗ್ಗೆ.

* **1ನೇ ಹಂತದ ಜಿಲ್ಲೆಗಳು:** ದಿನಾಂಕ:05–10–2011 ರೊಳಗೆ ಚಾರ್ಜ್ ಸೆಂಟರ್‌ನ್ನು ಸಿದ್ಧಪಡಿಸಿ ಜಿಲ್ಲೆಗಳು BEL ನೇಮಿಸಿದ ಅಧಿಕಾರಿಗೆ ಹಸ್ತಾಂತರಿಸತಕ್ಕದ್ದು.

* **2ನೇ ಹಂತದ ಜಿಲ್ಲೆಗಳು :** ದಿನಾಂಕ:20–10–2011 ರೊಳಗೆ ಚಾರ್ಜ್ ಸೆಂಟರ್‌ನ್ನು ಸಿದ್ಧಪಡಿಸಿ ಜಿಲ್ಲೆಗಳು BEL ನೇಮಿಸಿದ ಅಧಿಕಾರಿಗೆ ಹಸ್ತಾಂತರಿಸತಕ್ಕದ್ದು.

## IX. BEL ಸಂಸ್ಥೆ, ಗಣತಿ ನಿರ್ದೇಶನಾಲಯ ಹಾಗೂ ಸರ್ಕಾರದಿಂದ ಪಡೆಯುವ ಗಣತಿ ಸಾಮಗ್ರಿಗಳು:

ಪ್ರಧಾನ SECC–2011 ಅಧಿಕಾರಿಯವರು BEL ಸಂಸ್ಥೆ ಹಾಗೂ ಗಣತಿ ನಿರ್ದೇಶನಾಲಯದ ಹಾಗೂ ಸರ್ಕಾರದಿಂದ ಗಣತಿಯ ಕೆಳಕಂಡ ಸಾಮಗ್ರಿಗಳನ್ನು ಪಡೆಯುವ ಸಲುವಾಗಿ ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ದಿನಾಂಕ:05–10–2011 ರೊಳಗೆ ನಾಮಾಂಕಿತಗೊಳಿಸತಕ್ಕದ್ದು.

1) 2011ನೇ ಜನಗಣತಿಯ ಚಾರ್ಜ್‌ರಿಜಿಸ್ಟರ್, ಸಂಕ್ಷಿಪ್ತ ಮನೆಪಟ್ಟಿ ಹಾಗೂ ಗಣತಿ ಬ್ಲಾಕ್‌ಗಳ ಲೇಔಟ್ ಮ್ಯಾಪ್‌ಗಳನ್ನು ದಾಸ್ತಾನು ಮಾಡಲಾಗಿರುವ ಬಗ್ಗೆ ಕ್ರಮವಹಿಸುವುದು.

2) ಗಣತಿ ನಿರ್ದೇಶನಾಲಯದಿಂದ ಚಾರ್ಜ್ ರಿಜಿಸ್ಟರ್ ಸಂಕ್ಷಿಪ್ತ ಮನೆಪಟ್ಟಿ, ಗಣತಿ ಬ್ಲಾಕ್ ಲೇಔಟ್ ಮ್ಯಾಪ್‌ಗಳ ಫೋಟೊ ಕಾಪಿಗಳನ್ನು (ದಿನಾಂಕ:10–10–2011) ಮುಂಚಿತವಾಗಿ ತರಿಸಿಕೊಂಡು ದಾಸ್ತಾನು ಮಾಡಿಟ್ಟುಕೊಳ್ಳುವುದು. ಈ ವಿಷಯಕ್ಕೆ ತಮ್ಮ ಜಿಲ್ಲೆಗೆ ನೀಡಲಾಗಿರುವ ಗಣತಿ ನಿರ್ದೇಶನಾಲಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದು. (ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ) ಅನುಬಂಧ–3

3) ಸರ್ಕಾರದಿಂದ ಮುದ್ರಣಗೊಂಡ ಗಣತಿ ಸಾಮಗ್ರಿಗಳನ್ನು ಪಡೆಯಲು ಅಧಿಕಾರಿ ಮತ್ತು ಸಿಬ್ಬಂದಿಯನ್ನು ನೇಮಿಸುವುದು.

## X. ಮೇಲ್ವಿಚಾರಕರು ಹಾಗೂ ಗಣತಿದಾರರಾಗಿ ನೇಮಿಸಬಹುದಾದ ಅಧಿಕಾರಿ/ ಸಿಬ್ಬಂದಿಗಳ ಪಟ್ಟಿ.

### ಮೇಲ್ವಿಚಾರಕರಾಗಿ ನೇಮಿಸಬಹುದಾದ ಅಧಿಕಾರಿ/ಸಿಬ್ಬಂದಿ

1. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು(ಪಿಡಿಓ)
2. ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು (ಗ್ರೇಡ್–1)
3. ಕಂದಾಯ ನಿರೀಕ್ಷಕರು
4. ಶಿಕ್ಷಕರು/ಉಪನ್ಯಾಸಕರು(ಉನ್ನತ ಪ್ರೌಢಶಾಲೆ)
5. ವಿವಿಧ ಅಭಿವೃದ್ಧಿ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು
6. ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ನೇಮಕವಾದ ಅಧಿಕಾರಿಗಳು

**ಸೂಚನೆ:** ಜಿಲ್ಲಾ ಮಟ್ಟದ ಗಣತಿ ಕಾರ್ಯದ ಮೇಲ್ವಿಚಾರಕರನ್ನು ನೇಮಿಸಿಕೊಳ್ಳುವ ಬಗ್ಗೆ ಜಿಲ್ಲೆಯ ಸಮಿತಿಗೆ ಸಂಪೂರ್ಣ ಅಧಿಕಾರವನ್ನು ನೀಡಲಾಗಿದೆ.

### ಗಣತಿದಾರರಾಗಿ ನೇಮಿಸಬಹುದಾದ ಅಧಿಕಾರಿ/ಸಿಬ್ಬಂದಿಗಳು:

1. ಗ್ರಾಮ ಲೆಕ್ಕಾಧಿಕಾರಿ
2. ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು (ಗ್ರೇಡ್–ಖಖ)
3. ಅಂಗನವಾಡಿ ಕಾರ್ಯಕರ್ತೆಯರನ್ನು ಮಧ್ಯಾಹ್ನ 1.30 ಗಂಟೆಯ ನಂತರ ಬಳಸಿಕೊಳ್ಳುವುದು.
4. ಗ್ರಾಮ ಪಂಚಾಯತಿ ಬಿಲ್‌ಕಲೆಕ್ಟರ್
5. ಗ್ರಾಮ ಪಂಚಾಯತಿ ನೀರಗಂಟಿಗಳು(ಎಸ್‌ಎಸ್‌ಎಲ್‌ಸಿ ಗಿಂತ ಹೆಚ್ಚಿನ ವಿದ್ಯಾರ್ಹತೆ ಉಳ್ಳವರು)
6. MGNREGA ಗಾಗಿ ನೇಮಕವಾದ ಸಿಬ್ಬಂದಿ.
7. ಗ್ರಾಮಗಳಲ್ಲಿರುವ ಗ್ರಂಥಪಾಲಕರು
8. ಶಿಕ್ಷಣ ಇಲಾಖೆಯಿಂದ ನೇಮಿಸಲಾದ ವಯಸ್ಕರ ಶಿಕ್ಷಕರು
9. ಅಂಚೆ ಇಲಾಖೆಯ ನೌಕರರು
10. ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ನೇಮಕವಾದ ಸಿಬ್ಬಂದಿ
11. ವಿವಿಧ ಅಭಿವೃದ್ಧಿ ಇಲಾಖೆಗಳ ಹೋಬಳಿ ಮತ್ತು ಗ್ರಾಮ ಮಟ್ಟದ ಅಧಿಕಾರಿಗಳು

**ಟಿಪ್ಪಣಿ:–** ಜಿಲ್ಲಾ ಮಟ್ಟದ ಸಮಿತಿಗೆ ಅಗತ್ಯವಿರುವಷ್ಟು ಗಣತಿದಾರರನ್ನು ನೇಮಿಸಿಕೊಳ್ಳುವ ಅಧಿಕಾರವನ್ನು ನೀಡಲಾಗಿದೆ.

* ಒಂದು ಎನ್ಯೂಮರೇಷನ್ ಬ್ಲಾಕ್ ಪೂರ್ಣಗೊಳಿಸಿದ ನಂತರವೇ ಮುಂದಿನ ಎನ್ಯೂಮರೇಷನ್ ಬ್ಲಾಕ್‌ನ್ನು ತೆಗೆದುಕೊಳ್ಳುವಂತೆ ಗಣತಿದಾರರು ಹಾಗೂ ಡಾಟಾ ಎಂಟ್ರಿ ಅಪರೇಟರುಗಳಿಗೆ ನಿರ್ದೇಶನ ನೀಡತಕ್ಕದ್ದು.

## XI. ಗಣತಿಗೆ ಬೇಕಾಗುವ ಅಂದಾಜು ವೆಚ್ಚ ಸಲ್ಲಿಸುವಿಕೆ:

ಗಣತಿಗೆ ಬೇಕಾಗಿರುವ ಅಂದಾಜು ವೆಚ್ಚವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಗಣತಿ ಕಾರ್ಯದಲ್ಲಿ ಭಾಗವಹಿಸುವ ಅಧಿಕಾರಿಗಳು, ಗಣತಿದಾರರು, ಮೇಲ್ವಿಚಾರಕರು ಹಾಗೂ ಮಾಸ್ಟರ್ ಟ್ರೈನರ್‌ಗಳಿಗೆ ಗೌರವಧನ, ತರಬೇತಿ ಭತ್ಯೆಯ ಬೇಡಿಕೆಯನ್ನು ಲೆಕ್ಕಹಾಕಿ ಸರ್ಕಾರಕ್ಕೆ ಸಲ್ಲಿಸುವುದು ಹಾಗೂ ಗಣತಿಯ ನಂತರ ಸಂಬಂಧಪಟ್ಟವರಿಗೆ ಗೌರವಧನ ಇತ್ಯಾದಿಗಳನ್ನು ಪಾವತಿಸುವ ಬಗ್ಗೆ ಕ್ರಮ ವ'ಸುವುದು. (ಮಾರ್ಗಸೂಚಿ ಪ್ರತಿ ಅನುಬಂಧ–4ರಲ್ಲಿ ಲಗತ್ತಿಸಿದೆ.)

## XII. ಗಣತಿಯ ನಂತರ ನಿರ್ವಹಿಸಬೇಕಾದ ಕರ್ತವ್ಯ:

(1) ಗಣತಿಯ ನಂತರ ಆಯಾ ಗ್ರಾಮ ಪಂಚಾಯತಿಗಳ ಮಾಹಿತಿಯನ್ನು ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನೀಡುವ ನಿರ್ದೇಶನದಂತೆ ಗ್ರಾಮ ಪಂಚಾಯತ್/ತಾಲ್ಲೂಕು ಪಂಚಾಯತ್ ಕಛೇರಿ ಮತ್ತು ಇತರೆ ಪ್ರದೇಶಗಳಲ್ಲಿ ಕರಡು ಪ್ರಕಟಣೆ ಪಟ್ಟಿ ಪ್ರಕಟಿಸಲು ಕ್ರಮ ವಹಿಸುವುದು. ಕರಡು ಪಟ್ಟಿಯ ಬಗ್ಗೆ ಕ್ಲೇಮ್ಸ್ ಮತ್ತು ಆಕ್ಷೇಪಣೆಗಳನ್ನು ವಿಚಾರಣೆ ಮಾಡಿ ಅಂತಿಮಗೊಳಿಸಲು ಅಧಿಕಾರಿಗಳನ್ನು ನೇಮಕ ಮಾಡುವ ಬಗ್ಗೆ ಕ್ರಮ ವಹಿಸುವುದು.

1ನೇ ಹಂತ : 01.11.2011

2ನೇ ಹಂತ : 20.11.2011

(2) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹಾನಗರ ಪಾಲಿಕೆ (ಬೆಳಗಾಂ/ಬಳ್ಳಾರಿ/ ದಾವಣಗೆರೆ, ಗುಲ್ಬರ್ಗಾ, ಹುಬ್ಬಳ್ಳಿ–ಧಾರವಾಡ, ಮಂಗಳೂರು ಮೈಸೂರು)/ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಚಾರ್ಜ್ ಸೆಂಟರ್, ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ಕ್ಲೇಮು ಮತ್ತು ಆಕ್ಷೇಪಣೆ ಸಲ್ಲಿಸುವ ಬಗ್ಗೆ ನಿಗದಿತ ನಮೂನೆಗಳ hard and soft copy ಲಭ್ಯವಿರುವಂತೆ ಕ್ರಮ ವಹಿಸುವುದು.

(3) ಎಂಐಎಸ್ ಬಗ್ಗೆ ಎನ್‌ಐಸಿ, ನವದೆಹಲಿಯವರೊಂದಿಗೆ ಚಾರ್ಜ್/ಜಿಲ್ಲಾ ಕೇಂದ್ರಗಳು ನೋಂದಣಿ ಮಾಡಿಕೊಳ್ಳುವ ಬಗ್ಗೆ ಸಂಬಂಧಪಟ್ಟ ವೆಬ್‌ಸೈಟ್‌ನ ಮೂಲಕವೇ ಪ್ರಸ್ತಾವನೆ ಕಳುಹಿಸಬೇಕು.

1ನೇ ಹಂತ : 01.11.2011

2ನೇ ಹಂತ : 20.11.2011

* ನಗರ ಪ್ರದೇಶಗಳ ಗಣತಿಯ ಬಗ್ಗೆ ಕಾಲಕಾಲಕ್ಕೆ ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ ಮತ್ತು ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆರವರು ನೀಡುವ ಸೂಚನೆಗಳನ್ನು ಪಾಲಿಸಬೇಕು.

ಮೇಲ್ಕಂಡ ಎಲ್ಲಾ ಸೂಚನೆಗಳಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು SECC–2011 ನ್ನು ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸಲು ಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

(ಡಾ. ಅಮಿತಾ ಪ್ರಸಾದ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

## ಅನುಬಂಧ-1

### ಗಣತಿಯ ವೇಳಾಪಟ್ಟಿ

| ಕ್ರ.ಸಂ. | ನಿರ್ವಹಿಸಬೇಕಾದ ಕಾರ್ಯಸೂಚಿಯ ವಿವರ | ನಿರ್ವಹಿಸಬೇಕಾದ ಅಧಿಕಾರಿ/ ಸಂಸ್ಥೆ | ಅಂತಿಮ ದಿನಾಂಕ |
|---|---|---|---|
| 1 | ದಿನಾಂಕ 15-09-2011 ರಂದು ಸಚಿವ ಸಂಪುಟ ಅನುಮೋದಿಸಿರುವಂತೆ ರಾಜ್ಯದಲ್ಲಿ ಎಸ್‌ಇಸಿಸಿ-2011 ನಡೆಸಲು ಅಧಿಸೂಚನೆಯನ್ನು ಹೊರಡಿಸುವ ಕ್ರಮ | ಸರ್ಕಾರ | 23-09-2011 |
| 2 | ಆಯಾ ಜಿಲ್ಲೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳನ್ನು ಪ್ರಧಾನ ಎಸ್‌ಇಸಿಸಿ-2011 ಅಧಿಕಾರಿಗಳೆಂದು ನೇಮಿಸಿರುವ ಅಧಿಸೂಚನೆ | ಸರ್ಕಾರ | 23-09-2011 |
| 3 | ಎಸ್‌ಇಸಿಸಿ – 2011 ರ ಪ್ರಶ್ನಾವಳಿಗೆ ಸಂಬಂಧಿಸಿದಂತೆ ಅಧಿಸೂಚನೆ | ಸರ್ಕಾರ | 28-09-2011 |
| 4 | ರಾಜ್ಯದ ಪ್ರಾದೇಶಿಕ ಆಯುಕ್ತರು, ಡಿಸಿ ಮತ್ತು ಸಿಇಓ ಮತ್ತು ನಗರ ಪಾಲಿಕೆ ಆಯುಕ್ತರುಗಳ ಸಭೆಯನ್ನು ತುರ್ತಾಗಿ ಕರೆಯಲು | ಸರ್ಕಾರ | 30-09-2011 |
| 5 | ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಗಣತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ವಿವಿಧ ಹಂತದ ಅಧಿಕಾರಿಗಳು, ಮೇಲ್ವಿಚಾರಕರು ಮತ್ತು ಗಣತಿದಾರರುಗಳನ್ನು ಗುರುತಿಸಿ ಅದರ ಪಟ್ಟಿಯ(ಗಣತಿ ನಿರ್ದೇಶನಾಲಯ ಈಗಾಗಲೇ ಗುರುತಿಸಿರುವ ಬ್ಲಾಕ್‌ಗಳಿಗೆ ಅನ್ವಯ) ಸಲ್ಲಿಕೆ | ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು (ಪ್ರಧಾನ ಎಸ್‌ಇಸಿಸಿ-2011 ಅಧಿಕಾರಿಗಳು) ಮತ್ತು ಆಯುಕ್ತರು ಬಿಬಿಎಂಪಿ, ಬೆಂಗಳೂರು. | 30-09-2011 |
| 6 | ಮಾಸ್ಟರ್ ಟ್ರೈನರ್ ಫೆಸಿಲಿಟೇಟರ್ (ಎಂಟಿಎಫ್) ಒಟ್ಟು 120 ಅಧಿಕಾರಿಗಳಿಗೆ ತರಬೇತಿಯನ್ನು ರಾಜ್ಯದ ಎಂಟು ಕೇಂದ್ರಗಳಲ್ಲಿ ನಡೆಸುವುದು | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ನಗರಾಭಿವೃದ್ಧಿ ಇಲಾಖೆ | |
| ಎ) | ಮೊದಲನೇ ಹಂತದ ತರಬೇತಿ, ಜಿಲ್ಲಾ ತರಬೇತಿ ಕೇಂದ್ರ, ಬೆಂಗಳೂರು. | ಸರ್ಕಾರ | ದಿನಾಂಕ 21-09-2011 ರಿಂದ 23-09-2011 ರವರೆಗೆ |
| ಬಿ) | ಎರಡನೇ ಹಂತದ ತರಬೇತಿ ಉಳಿದ ಏಳು ಕೇಂದ್ರಗಳಲ್ಲಿ ಆಯಾ ಜಿಲ್ಲೆಯ ಜಿಲ್ಲಾ ತರಬೇತಿ ಕೇಂದ್ರ, (ಡಿಟಿಐ)ಗಳಲ್ಲಿ | ಸರ್ಕಾರ | ದಿನಾಂಕ:29, 30-9-2011 ಮತ್ತು 01-10-2011 |
| 7 | ಈ ತರಬೇತಿಗಳಿಗೆ ಓದುವ ಸಾಮಗ್ರಿಗಳು | ಸರ್ಕಾರ ಮತ್ತು ಸಂಬಂಧ ಪಟ್ಟ ಜಿಲ್ಲಾ ಪಂಚಾಯತ್ | 21-09-2011/ 29-09-2011 |
| 8 | ಇ-ಕಲಿಕೆ ಮಾಡ್ಯೂಲ್ ಸಂಬಂಧಿಸಿದ ಮಾಹಿತಿ ಹಾಗೂ. cript | ಮೆ : ಕಾರಂಜಿ ಇನ್ಫೋಟೆಕ್ (ಎಸ್‌ಐಆರ್‌ಡಿ, ಮೈಸೂರು ಇವರಿಂದ ಗುರುತಿಸಿದ ಸಂಸ್ಥೆ) | ದಿನಾಂಕ 21-09-2011 |
| 9 | ಚಾರ್ಜ್ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿಗಳು, ನೋಡಲ್ ಅಧಿಕಾರಿಗಳು ಮತ್ತು ಉಸ್ತುವಾರಿ ಅಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮ | ರಾಜ್ಯದ ಎಲ್ಲಾ ಜಿಲ್ಲೆಗಳು | ದಿನಾಂಕ:10-10-2011 |
| 10 | ಎಂಟಿಎಫ್ ತರಬೇತಿ ಪಡೆದಿರುವ ತರಬೇತಿದಾರರು ಜಿಲ್ಲಾ ಮಟ್ಟದಲ್ಲಿ ಮುಖ್ಯ ತರಬೇತಿದಾರರ ತರಬೇತಿ ಏಕಕಾಲಕ್ಕೆ ಇಡೀ ರಾಜ್ಯದಲ್ಲಿ ಮಾಡತಕ್ಕದ್ದು. | ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಗಳು/ ನಗರ ಪಾಲಿಕೆಗಳ ಆಯುಕ್ತರು<br><br>(ಪ್ರಧಾನ ಎಸ್‌ಇಸಿಸಿ-2011 ಅಧಿಕಾರಿಗಳು) | ಒಂದನೇ ಹಂತದ ಜಿಲ್ಲೆಗಳು: ದಿನಾಂಕ 13, 14 ಮತ್ತು 15 ಅಕ್ಟೋಬರ್ 2011<br>ಎರಡನೇ ಹಂತದ ಜಿಲ್ಲೆಗಳು ದಿನಾಂಕ: 2, 3 ಮತ್ತು 4 ನವೆಂಬರ್ 2011 |
| 11 | ಜಿಲ್ಲಾ ಮಟ್ಟದ ತರಬೇತಿಗೆ ಅಗತ್ಯವಿರುವ ಜಿಲ್ಲಾವಾರು ಬೋಧನಾ ಸಾಮಗ್ರಿಗಳನ್ನು (ಮಾದರಿಯಂತೆ) ಒದಗಿಸುವುದು | ಸಂಬಂಧಿಸಿದ ಜಿಲ್ಲೆಯ ಜಿಲ್ಲಾಧಿಕಾರಿಗಳು (ಪ್ರಧಾನ ಎಸ್‌ಇಸಿಸಿ-2011 ಅಧಿಕಾರಿ) ಮತ್ತು ಆಯುಕ್ತರು, ಬಿಬಿಎಂಪಿ, ಬೆಂಗಳೂರು/ ನಗರಪಾಲಿಕೆಗಳ ಆಯುಕ್ತರು. | ಒಂದನೇ ಹಂತದ ಜಿಲ್ಲೆಗಳು: ದಿನಾಂಕ:10-10-2011<br>ಎರಡನೇ ಹಂತದ ಜಿಲ್ಲೆಗಳು ದಿನಾಂಕ:5-11-2011 |

| | | | |
|---|---|---|---|
| 12 | ಇ–ಕಲಿಕೆ ಮಾಡ್ಯೂಲ್‌ಗಳನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ (ಪ್ರಧಾನ ಎಸ್‌ಇಸಿಸಿ – 2011 ಅಧಿಕಾರಿ) ನೀಡತಕ್ಕದ್ದು. | ಸರ್ಕಾರ | ದಿನಾಂಕ:10–10–2011 |
